ಮಡಿನ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ
ಸಂಪುಟ 3 ಸಂಚಿಕೆ 8
ಫೆಬ್ರವರಿ 22, 2009
ರೂ. 5/-



ಬಿಜೆಪಿ - ಕಾಂಗ್ರೆಸ್ ದಿವಾಳಿತನದ ಎರಡು ಮುಖಗಳು !



ಪ್ರೀತಿಗೂ ಪರ್ಮಿಶನ್ನೇ ?



ಮಂಗಳೂರು : ಶಾಸಕ ಪುತ್ರಿ ಅಪಹರಣ - ಹಲ್ಲೆ

ಗೊಬೆಲ್ಸ್ ಮೊರೆ ಹೋದ ಯಡಿಯೂರಪ್ಪ



ಸಾಹಿತ್ಯ ಸಮ್ಮೇಳನ : ಅಧ್ಯಕ್ಷರು ಬೀಸಿದ ಚಾಟಿ ಏಟು

ಮಾಧ್ಯಮ ಧರ್ಮಾಧಿಕಾರಿ ಎಂಬ ಫ್ಯಾಸಿಸ್ಟ್ ಬಯಕೆ

ಒಂದು

ನೋಟ



ಡಾ. ಜಿ. ಭಾಸ್ಕರ ಮಯ್ಯ

ಮತಾಂತರ

ಎಂಬ ದುರ್ಗಮ ಅರಣ್ಯದಲ್ಲಿ ಒಂದು ಪಯಣ

ಜಾತಿ ವ್ಯವಸ್ಥೆ ಭಾರತದಲ್ಲಿ ಎಂದು ಆರಂಭವಾಯಿತು ಎಂದು ನಿಶ್ಚಿತವಾಗಿ ಹೇಳುವುದು ಅಸಾಧ್ಯ. ಆದರೆ ಇಂಥ ಒಂದು ವ್ಯವಸ್ಥೆ ಇಷ್ಟೊಂದು ಬಲಿಷ್ಠವಾಗಿ ಪ್ರಪಂಚದ ಯಾವುದೇ ದೇಶದಲ್ಲಿ ಬೆಳೆದು ಬರಲಿಲ್ಲ. ಪ್ರಾಚೀನ ಕಾಲದಲ್ಲಿ ಕಸುಬು ಹಾಗೂ ಕುಲಕಸುಬಿನ ಆಧಾರದಲ್ಲಿ ನಾಲ್ಕು ವಿಭಾಗಗಳಿದ್ದವು. ಇರಾನಿನಲ್ಲಿ ಈ ವ್ಯವಸ್ಥೆಯಿತ್ತು. ಗ್ರೀಸ್‌ನಲ್ಲಿ ಮನುಷ್ಯರ ನಾಲ್ಕು ವಿಭಾಗಗಳನ್ನು ಪ್ಲೇಟೊ ಹೇಳುತ್ತಾನೆ. ಭಾರತದಲ್ಲಿ ಇದನ್ನು ವರ್ಣವ್ಯವಸ್ಥೆಯೆಂದು ಭಾವಿಸಲಾಗಿದೆ. ಆದರೆ ಇದೊಂದು 'ಸುಂದರ' ಕಲ್ಪನೆಯಷ್ಟೇ ಹೊರತು ವಾಸ್ತವವಲ್ಲ. ಸಾಮಾನ್ಯವಾಗಿ ವೈದಿಕ ಸಂಸ್ಕೃತಿಯೇ ವರ್ಣಾಶ್ರಮ ಸಂಸ್ಕೃತಿಯ ಮೂಲಾಧಾರವೆಂದು ಆಗಾಗ್ಗೆ ಕೆಲವು ಪಂಡಿತರೆನ್ನಿಸಿಕೊಂಡವರು, ಪ್ರಗತಿಶೀಲರೆನ್ನಿಸಿಕೊಂಡವರು ವಾದಿಸುತ್ತಾರೆ. ವೇದಗಳಲ್ಲಿ ವರ್ಣವ್ಯವಸ್ಥೆಯೂ ಇಲ್ಲ; ಜಾತಿ ವ್ಯವಸ್ಥೆಯೂ ಇಲ್ಲ; ಸನ್ಯಾಸವೂ ಇಲ್ಲ; ಮಠವೂ ಇಲ್ಲ. ಐಹಿಕ ಜೀವನವನ್ನು ಸುಖವಾಗಿ ಕಳೆಯುವ ಪ್ರಕೃತಿ ಆರಾಧಕರ ಸಂಸ್ಕೃತಿಯೇ ವೇದದ ಸಂಸ್ಕೃತಿ. ಪುರುಷ ಸೂಕ್ತದಲ್ಲಿ ವಿರಾಟ್ ಪುರುಷನ ತಲೆಯಿಂದ ಬ್ರಾಹ್ಮಣರೂ, ಬಾಹುಗಳಿಂದ ಕ್ಷತ್ರಿಯರೂ, ತೊಡೆಯಿಂದ ವೈಶ್ಯರೂ, ಕಾಲಿನಿಂದ ಶೂದ್ರರೂ ಬಂದಿದ್ದಾರೆಂಬ ಪುರುಷ ಸೂಕ್ತಕಾರನ ಹೇಳಿಕೆಯನ್ನು ಟೀಕಿಸಲಾಗುತ್ತದೆ. ವೇದದ ದಶಮಮಂಡಲದಲ್ಲಿ ಬರುವ ಪುರುಷ ಸೂಕ್ತವು ವೇದದ ಭಾಗವೇ ಅಲ್ಲ; ನಂತರ ಸೇರಿಸಲ್ಪಟ್ಟಿದು. ಅದು ಪ್ರಕ್ಷಿಪ್ತವೆಂಬುದಾಗಿ ಕೋಲ್ ಬ್ರೂಕ್, ಮಾಕ್ಸ್‌ಮುಲ್ಲರ್ ಮೊದಲಾದ ಹಲವಾರು ಶ್ರೇಷ್ಠ ವೇದವಿದ್ವಾಂಸರು ಸ್ಪಷ್ಟಪಡಿಸಿರುತ್ತಾರೆ. 'ಮನುಸ್ಮೃತಿ' ಖಂಡಿತವಾಗಿಯೂ ಬ್ರಾಹ್ಮಣವಾದದ ಕಾನೂನು ಗ್ರಂಥ. 'ಅಸ್ಪೃಶ್ಯತೆ'ಯ ವಿರುದ್ಧ ಚಾರಿತ್ರಿಕ ಹೋರಾಟ ನಡೆಸಿದ ಮಹಾಮಾನವತಾವಾದಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ಸುಟ್ಟು ಹಾಕುವ ಮೂಲಕ ಪ್ರತಿಭಟನೆ ಮಾಡಿದ್ದು ಉಚಿತವಾಗಿಯೇ ಇದೆ. ಆದರೆ, ಪ್ರಕ್ಷಿಪ್ತವಾದರೂ 'ಪುರುಷ ಸೂಕ್ತ' ವರ್ಣವ್ಯವಸ್ಥೆಯ ಸರಳೀಕೃತ ಅಭಿವ್ಯಕ್ತಿಯೂ ಅಲ್ಲ; ಅದನ್ನು ಓದದೆ, ಅಧ್ಯಯನ ಮಾಡದೆ ಅಥವಾ ತಪ್ಪಾಗಿ, ಪೂರ್ವಗ್ರಹ ಪೀಡಿತರಾಗಿ ಪುರುಷ ಸೂಕ್ತದ ಮೇಲೆ ದಾಳಿ ನಡೆಸುವವರೇ ಹೆಚ್ಚು. ಇಂತವರಿಗೆ ವೇದವು ಒಂದೇ, ಮನುಸ್ಮೃತಿಯೂ ಒಂದೇ. ವೇದದಲ್ಲಿ ಒಂದೇ ಮನೆಯಲ್ಲಿ ಒಬ್ಬ ಮಂತ್ರಪಠನ ಮಾಡುತ್ತಿದ್ದರೆ, ಇನ್ನೊಬ್ಬ ಗಾಡಿ ಹೊಡೆಯುತ್ತಿದ್ದ, ಮತ್ತೊಬ್ಬ ಬೇಟೆ ಮಾಡುತ್ತಿದ್ದ, ಮಗದೊಬ್ಬ ಚಪ್ಪಲಿ ಹೊಲಿಯುತ್ತಿದ್ದ. ವಸ್ತುಸ್ಥಿತಿಯಲ್ಲಿ ಜಾತಿವ್ಯವಸ್ಥೆಯು ವೇದ ಕಾಲದ ನಂತರದ ವರ್ಗವಿಭಕ್ತ ಸಮಾಜದಲ್ಲಿ ವಿಕಾಸ ಹೊಂದಿದ ಮೇಲಂತಸ್ತು (Super Structure).

ಬರೀ ಶ್ರಮ ವಿಭಜನೆ!?

ವರ್ಣವ್ಯವಸ್ಥೆಯೆಂದರೆ 'Division labour' ಶ್ರಮವಿಭಜನೆಯೆಂಬುದಾಗಿ ಭಗವದ್ಗೀತೆಯ ಶ್ಲೋಕಗಳನ್ನು ಉದಾಹರಿಸಿ ಹಿಂದೂ ಪುನರುತ್ಥಾನವಾದಿಗಳು ವ್ಯಾಖ್ಯಾನಿಸಿರುತ್ತಾರೆ. ಗೀತೆಯಲ್ಲಿ "ಚಾತುರ್ವರ್ಣ್ಯಂ ಮಯಾ ಸೃಷ್ಟಂಗುಣಕರ್ಮ ವಿಭಾಗಶಃ" ಎಂಬ ಶ್ಲೋಕದಲ್ಲಿರುವ 'ಗುಣ ಕರ್ಮ'ವನ್ನು ತೆಗೆದುಕೊಂಡು ಅದು ಕೇವಲ ಶ್ರಮ ವಿಭಜನೆ, ಅದರಲ್ಲಿ ಮೇಲು ಕೀಳು ಎಂಬುದಿಲ್ಲ-ಎನ್ನಲಾಗುತ್ತದೆ. ಆದರೆ, 'ಭಗವದ್ಗೀತೆ'ಯೇ ಒಂದು ಮೋಸದ ಕೃತಿ. ಅದರಲ್ಲಿಯೇ 'ಕ್ಷತ್ರಿಯತ್ವಂ ಸ್ವಭಾವಜಂ' 'ಬ್ರಾಹ್ಮಣತ್ವಂ ಸ್ವಭಾವಜಂ' ಎಂಬ ಮಾತುಗಳಿವೆ. ಅದರರ್ಥ ಅದು ಸ್ವಾಭಾವಿಕವಾಗಿ ಇರುವುದು ಎಂದರ್ಥ. ಕೆಲವೊಮ್ಮೆ ಇದನ್ನು ಸಮರ್ಥಿಸಲು "ಜನ್ಮನಾ ಜಾಯತೇ ಶೂದ್ರ: ಕರ್ಮಾತ್ ದ್ವಿಜ ಇತ್ಯುಚ್ಚತೆ"- ಹುಟ್ಟಿದಾಗ ಎಲ್ಲರೂ ಶೂದ್ರರೇ, ಅವರು ಕರ್ಮದಿಂದ ಬ್ರಾಹ್ಮಣರಾಗುತ್ತಾರೆ ಎಂಬುದು ಇದರ ಅರ್ಥ. ಆದರೆ ಇದು ಒಂದು ಅಪ್ಪಟ ಸುಳ್ಳು. ಏಕೆಂದರೆ ಜನ್ಮದಿಂದ ಬರುವುದೇ ಜಾತಿ. ಈ ಜಾತಿಯನ್ನು ಜ್ಯಾತಂತರ ಮಾಡುವುದು ಅಸಾಧ್ಯ. ಮತಾಂತರ ಸಾಧ್ಯ. ಯಾವ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೀಗೆ ಹೇಳಿದ್ದಾನೆ - ಎನ್ನಲಾಗುತ್ತದೊ ಅವನ ಕಾಲದಲ್ಲೇ ಕ್ಷತ್ರಿಯಕರ್ಮ ಮಾಡುವ ದ್ರೋಣ ಜನ್ಮದ ಲೆಕ್ಕಾಚಾರದಲ್ಲಿ ಬ್ರಾಹ್ಮಣನಾಗಿಯೇ ಪೂಜ್ಯನಾಗಿದ್ದಾನೆ. ಸೂತಪುತ್ರ ಕರ್ಣನಿಗೆ ಕ್ಷತ್ರಿಯನಾಗುವುದು ಸಾಧ್ಯವಾಗಲೇ ಇಲ್ಲ. ಮಹಾಮತಿ, ಧರ್ಮಶಾಸ್ತ್ರಜ್ಞ ವಿಧುರ ಎಂದೂ ಬ್ರಾಹ್ಮಣವೆನ್ನಿಸಿಕೊಳ್ಳಲಿಲ್ಲ. ಅಂದರೆ ಜಾತಿವ್ಯವಸ್ಥೆಯು ಒಂದು ಉದಾತ್ತೀಕೃತವಾದ ರ್‍ಯಾಶನ್‌ಲೈಸ್ಡ್ ಕಲ್ಪನಾಲೋಕವೇ ವರ್ಣವ್ಯವಸ್ಥೆಯಾಗಿದೆಯೇ ಹೊರತು ಅದು ಎಂದೂ ಭೌತಿಕವಾಗಿ ಅಸ್ತಿತ್ವದಲ್ಲಿರಲಿಲ್ಲ.

ಭಯಾನಕ ವಾಸ್ತವ

ಆದರೆ, ಜಾತಿವ್ಯವಸ್ಥೆಯು ಭಾರತದ ಒಂದು ಭಯಾನಕ ಸಾಮಾಜಿಕ ವಾಸ್ತವ. ಇದು ಸ್ಥಗಿತವಾದ ಆರ್ಥಿಕವ್ಯವಸ್ಥೆಯು ಪಾಳೇಗಾರಿ ಸಮಾಜದ ಅನಿವಾರ್ಯ ಅಂಗವಾಗಿ ಬೆಳೆದುಕೊಂಡು ಬಂದಿದೆ. ಇಂದು ಭಾರತದಲ್ಲಿ ಸಹಸ್ರಾರು ಜಾತಿಗಳಿವೆ. ಚಾರಿತ್ರಿಕವಾಗಿ ವಿಭಿನ್ನ ಪರಿಸ್ಥಿತಿಗಳಿಂದ ಅವುಗಳು ಹುಟ್ಟಿಕೊಂಡಿವೆ. ಜಾತಿಗೆ ಅದರದ್ದೇ ಆದ ಅತಿವಿಶಿಷ್ಟ ಗುಣವಿದೆ. ಅದು ಶ್ರೇಣೀಕೃತವಾಗಿದೆ. ಪ್ರತಿಯೊಂದು ಜಾತಿಯೂ ತನಗಿಂತ ಕೆಳಗಿನ ಜಾತಿಯನ್ನು ತಿರಸ್ಕರಿಸುತ್ತದೆ. ತುಳಿಯಲು ಪ್ರಯತ್ನಿಸುತ್ತದೆ. ಅಂತೆಯೇ ಮೇಲು ಜಾತಿಯನ್ನು ಮಾನ್ಯ ಮಾಡುತ್ತದೆ. ಜಾತಿಯಿಂದ ಹೊರನಡೆದರೆ ಇನ್ನೊಂದು ಜಾತಿ ಹುಟ್ಟಿಕೊಳ್ಳುತ್ತದೆ. ಆದರೆ, ಜಾತಿಯ ಒಳಗೆ ಬರಲು ಯಾವುದೇ ಬಾಗಿಲುಗಳಿಲ್ಲ. ಜಾತಿಯ ಗೋಡೆಗಳನ್ನು ಕೆಡೆದು ಹಾಕಲು ಬುದ್ಧ ಮಹಾವೀರರಿಂದ ತೊಡಗಿ ಅಂಬೇಡ್ಕರರ ತನಕ ನಾನಾ ಸಮಾಜ ಸುಧಾರಕರು ಹೋರಾಡಿದ್ದರು. ಆದರೆ, ಜಾತಿಯ ಗೋಡೆಗಳು ಮಾತ್ರ ಭದ್ರವಾಗಿಯೇ ಉಳಿದಿವೆ. ಇದರರ್ಥ ಸುಧಾರಕರ ಆಂದೋಲನಗಳು ವ್ಯರ್ಥವಾಗಿದೆ ಎಂದಲ್ಲ. ಆ ಜನಾಂದೋಲನಗಳಿಂದ ಸಮಾಜದಲ್ಲಿ ಸಾಕಷ್ಟು ಧನಾತ್ಮಕ ಪರಿವರ್ತನೆಗಳಾಗಿವೆ. ಮಾನವೀಯ ಪಂಥಗಳು ಆವಿರ್ಭವಿಸಿವೆ.

ಚರಿತ್ರೆಯಲ್ಲಿ ಜಾತಿವ್ಯವಸ್ಥೆಗೆ ಬಲವಾದ ಪೆಟ್ಟು ಬಿದ್ದಿರುವುದು ಕೇವಲ ಎರಡು ಬಾರಿ ಮಾತ್ರ. ಒಂದು ಜೈನ ಮತ್ತು ಬೌದ್ಧ ಧರ್ಮಗಳ ಆವಿರ್ಭಾವ. ಎರಡನೆಯ ಹೊಡೆತ ಬಿದ್ದಿರುವುದು, ಭಕ್ತಿ ಆಂದೋಲನದಿಂದ. ಭಕ್ತಿ ಆಂದೋಲನ ಮುಖ್ಯವಾಗಿ ಸಮಾಜದಲ್ಲಿ 'ಹೇಯ'ವೆಂದು ಪರಿಗಣಿಸಲ್ಪಟ್ಟ ಜನರ ಹೋರಾಟ. ಅದು ಒಂದು ರೀತಿಯಲ್ಲಿ ಪ್ರಚ್ಛನ್ನವಾದ (ತೋರಿಬರದ, ಗುಪ್ತವಾಗಿರುವ) ವರ್ಗ ಹೋರಾಟವೇ ಆಗಿದೆ. ಆದರೆ, ಈ ಆಂದೋಲನದಿಂದ ಹೊರಹೊಮ್ಮಿದ ಸಂತರು ಬೇರೆ ಬೇರೆ ಜಾತಿಗಳ ಸಂಪತ್ತಾದರು.

ಇಂದು ಬದಲಾದ ಪರಿಸ್ಥಿತಿಗಳಲ್ಲೂ ಆರ್ಥಿಕ ಗತ್ಯಾತ್ಮಕತೆಯೆಂಬುದು ಅತ್ಯಂತ ನಿಧಾನಗತಿಯಲ್ಲಿಯೇ ಇದೆ. ಜನರು ಆಧುನಿಕ ಜೀವನಪದ್ಧತಿಗಳನ್ನು ಸಾಕಷ್ಟು ಅಳವಡಿಸಿಕೊಂಡಿದ್ದಾರೆ. ಆದರೆ, ಆಧುನಿಕ ವಿಚಾರಗಳು ಮಾತ್ರ ಜನರನ್ನು ಪ್ರಭಾವಿಸಿಲ್ಲ.

ದೌರ್ಜನ್ಯ ನಿಂತಿಲ್ಲ

ಜಗತ್ತಿನಲ್ಲಿಯೇ ಭಾರತದ ಮಧ್ಯಮವರ್ಗ ಅತ್ಯಂತ ದೊಡ್ಡ ಪ್ರಮಾಣದ್ದು. ಅದು ಭಾರತವನ್ನು ಸಾಕಷ್ಟು ನಿರಾಶೆಗೊಳಿಸಿದೆ. ಕ್ರಾಂತಿ ಮಾಡುವವರು ಕಾರ್ಮಿಕರು ಮತ್ತು ರೈತರು. ಆದರೆ, ಅದಕ್ಕೆ ಮಾರ್ಗದರ್ಶನವನ್ನು ನೀಡುವವರು ಪ್ರಮುಖವಾಗಿ ಮಧ್ಯಮವರ್ಗದ ಬುದ್ಧಿಜೀವಿಗಳು. ಕಾರ್ಲ್‌ಮಾರ್ಕ್ಸ್‌ರವರು ಕೂಡಾ ಮಧ್ಯಮವರ್ಗದಿಂದ ಬಂದವರು. ಯುರೋಪಿನಲ್ಲಿ ಮಧ್ಯಮವರ್ಗವು ಪಾಳೇಗಾರೀ ಮೌಲ್ಯಗಳ ವಿರುದ್ಧ ದಂಗೆಯೆದ್ದು ಅತ್ಯಂತ ಪ್ರಗತಿಶೀಲ ಪಾತ್ರವನ್ನು ನಿರ್ವಹಿಸಿತ್ತು. ಆದರೆ, ಸ್ವತಂತ್ರಭಾರತದ ಆಧುನಿಕ ವಿಚಾರಗಳ ಸರ್ವಶ್ರೇಷ್ಠ ಪ್ರತಿನಿಧಿಯಾದ ಪಂಡಿತ್ ನೆಹರೂ ಅವರು ಕೂಡಾ ಜಾತಿವ್ಯವಸ್ಥೆಯ ನಾಶಕ್ಕೆ ವಿಶೇಷ ಅಭಿಯಾನದ ಅಗತ್ಯತೆಯನ್ನು ಒಪ್ಪಲಿಲ್ಲ. ಆದರೂ, ಮಹಾರಾಷ್ಟ್ರದ ಜ್ಯೋತಿ ಬಾ ಫುಲೆ, ತಮಿಳುನಾಡಿನ ಪೆರಿಯಾರ್ ಹಾಗೂ ದಲಿತರ ಅತ್ಯುಚ್ಚ ನಾಯಕರಾದ ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ಸಂವಿಧಾನದಲ್ಲಿ ಮೀಸಲಾತಿಯ ಸೌಲಭ್ಯ ದೊರೆಯಿತು. ಈ ಹಿಂದೆ ದಲಿತರಲ್ಲಿ ಮಧ್ಯಮವರ್ಗವೇ ಇರಲಿಲ್ಲ. ಈಗ ಕ್ರಮಕ್ರಮವಾಗಿ ದಲಿತ ಮಧ್ಯಮವರ್ಗವು ವಿಕಾಸಹೊಂದುತ್ತಿದೆ. ದಲಿತರಲ್ಲಿ ಕಾಂಶೀರಾಮ್ (ಈಗ ನಿಧನರಾಗಿದ್ದಾರೆ)' ಮಾಯಾವತಿ ರಾಜಕೀಯ ಶಕ್ತಿಗಳಾಗಿ ಹೊರಹೊಮ್ಮಿದ್ದಾರೆ. ಹಿಂದೀ ಪ್ರದೇಶದಲ್ಲಿ "ಅಪೇಕ್ಷಾ" "ಅಂಬೇಡ್ಕರ್ ಇನ್ ಇಂಡಿಯಾ" ಮೊದಲಾದ ಶ್ರೇಷ್ಠ ದಲಿತ ಸಾಹಿತ್ಯ ಪತ್ರಿಕೆಗಳೇ ಇವೆ. ಆದರೆ, ದಲಿತರ ಒಟ್ಟು ಪರಿಸ್ಥಿತಿಯಲ್ಲಿ ಮಾತ್ರ ಯಾವುದೇ ಬದಲಾವಣೆಯಾಗಿಲ್ಲ. ಇಂದಿಗೂ ಜಜ್ಜಾರ್, ಕೈರ್‌ಲಾಂಜಿ ಮತ್ತು ಕಂಬಾಲಪಲ್ಲಿಯಂತಹ ಭಯಾನಕ ದೌರ್ಜನ್ಯದ ಘಟನೆಗಳು ಮರುಕಳಿಸುತ್ತಲೇ ಇವೆ.

ಪಿರಮಿಡ್ ವ್ಯವಸ್ಥೆ

ಸಮಾಜದಲ್ಲಿ ಏನೇ ಬದಲಾವಣೆಗಳಾಗಲಿ ಜಾತಿವ್ಯವಸ್ಥೆ ಮಾತ್ರ ಈಜಿಪ್ಟಿನ ಪಿರಮಿಡ್ಡಿನ ಹಾಗೆ ಭದ್ರವಾಗಿ ನಿಂತಿದೆ. ಅದಕ್ಕೆ ಮೇಲಿಂದ ಕೆಳಗಿನ ತನಕ ಮೆಟ್ಟಿಲುಗಳು. ಯಾವ ಮೆಟ್ಟಿಲು ಕೂಡಾ ಇನ್ನೊಂದು ಮೆಟ್ಟಿಲನ್ನು ತನ್ನ ಸಮಾನವೆಂದು ಒಪ್ಪಿಕೊಳ್ಳುವುದಿಲ್ಲ. ದಲಿತರು ಗಿರಿಜನರನ್ನು ಒಪ್ಪಿಕೊಳ್ಳುವುದಿಲ್ಲ. ದಲಿತರಲ್ಲೂ ನೂರಾರು ಮೆಟ್ಟಿಲುಗಳಿವೆ. ಕೊರಗ ಸಮುದಾಯವನ್ನು ದಲಿತರು ಸೇರಿಸಿಕೊಳ್ಳುವುದಿಲ್ಲ. ಅಂಬೇಡ್ಕರ್ ನಿಜವಾಗಿಯೂ ದಲಿತರ ಮಹಾ ನೇತಾರ. ಆದರೆ, ಇತಿಹಾಸದ ದುರಂತವೆಂದರೆ ದಾರ್ಶನಿಕ ತೀರಿಕೊಂಡ ಮೇಲೆ ಆತನ ಅನುಯಾಯಿಗಳು ನಾನಾ ಪಂಥಗಳಲ್ಲಿ ವಿಭಜನೆ ಹೊಂದಿಬಿಡುತ್ತಾರೆ. ಕ್ರಿಸ್ತ ಒಬ್ಬನೇ. ಆದರೆ ಕ್ರೈಸ್ತ ಪಂಥಗಳು ಹಲವು. ಮಹಮ್ಮದ್ ಒಬ್ಬರೆ. ಆದರೆ, ಮುಸ್ಲಿಂ ಪಂಥಗಳು ಹಲವು. ಅಂತೆಯೇ ದಲಿತರು ಅಂಬೇಡ್ಕರ್ ಅವರನ್ನು ತಮ್ಮ 'ಮುಕ್ತಿ ದಾತಾ' ಎಂದು ಆರಾಧಿಸುತ್ತಾರೆ. ಆದರೆ, ದಲಿತರಲ್ಲಿ ಅಂಬೇಡ್ಕರ್ ವಾದವಿದೆ, ಭೀಮವಾದವಿದೆ, ಕೆಲವರು ಬಿ.ಎಸ್.ಪಿ, ಕೆಲವರು ಸರ್ವೋದಯ, ಕೆಲವರು ಕಾಂಗ್ರೆಸ್ ಆದರೆ ಕೆಲವರು ಜೆ.ಡಿ.ಎಸ್. ದುರಂತವೆಂದರೆ ದೊಡ್ಡ ಸಂಖ್ಯೆಯಲ್ಲಿ ದಲಿತರು ಮತ್ತು ಆದಿವಾಸಿಗಳು ಸಂಘಪರಿವಾರದಲ್ಲಿ ತಮ್ಮನ್ನು ಗುರುತಿಸಿಕೊಂಡಿರುವುದು. ಗುಜರಾತಿನ ನರಮೇಧದಲ್ಲಿ ಸಂಘಪರಿವಾರದ 'ಹನುಮಾನ್' ಆರಾಧಕ ಆದಿವಾಸಿಗಳ ಪಾತ್ರ ಬಲು ದೊಡ್ಡದು. ಇದು ಈ ದೇಶದ ದುರಂತ. ದಲಿತರು ಮತ್ತು ಅವರ್ಣೀಯರು ಸಂಘಟಿತರಾಗದೇ ಬರಿದೇ 'ಮನುವಾದ' 'ಬ್ರಾಹ್ಮಣವಾದ' ಎಂದು ಹೇಳಿದ್ದನ್ನೇ ಹೇಳುತ್ತಿದ್ದರೆ ಏನು ಪ್ರಯೋಜನ? ಪೇಜಾವರ ಸ್ವಾಮಿ ದಲಿತರ ಜೊತೆಗೆ ಊಟ ಮಾಡಿದ ಕೂಡಲೇ ದಲಿತರ ಬದುಕು ಸುಧಾರಿಸಿ ಬಿಡುತ್ತದೆಯೇ? ಅಥವಾ ಒಬ್ಬ ದಲಿತನು ಪೇಜಾವರ ಶಿಷ್ಯನಾದರೆ ಉಳಿದ ದಲಿತರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಪರಿವರ್ತನೆಯಾಗುತ್ತದೆಯೇ? ಇಷ್ಟಕ್ಕೂ ಪೇಜಾವರ ಸ್ವಾಮಿ ಇದನ್ನೆಲ್ಲಾ ಒಪ್ಪಿಕೊಂಡರೆ ಪೇಜಾವರ ಸ್ವಾಮಿಯನ್ನು ಉಡುಪಿ ಮಾಧ್ವರು ಗಟಾರಕ್ಕೆಸೆಯದೆಯೇ ಬಿಡುತ್ತಾರೆಯೇ?.

(ಮುಂದುವರಿಯುವುದು)

ಶಿರಸ್ತ್ರಾಣದಕ್ಕೀಯ

ಮಾಧ್ಯಮ ಧರ್ಮಾಧಿಕಾರಿ ಎಂಬ ಫ್ಯಾಸಿಸ್ಟ್ ಬಯಕೆ

ಕರ್ನಾಟಕದ ಗೃಹಮಂತ್ರಿ ವಿ.ಎಸ್.ಆಚಾರ್ಯರವರು 'ಮೀಡಿಯಾ ಓಂಬುಡ್ಸ್‌ಮನ್' (ಮಾಧ್ಯಮ ಧರ್ಮಾಧಿಕಾರಿ?!) ನೇಮಕ ಮಾಡುವ ಇಂಗಿತವನ್ನು ಮಂಗಳೂರಿನಲ್ಲಿ ಇತ್ತೀಚೆಗೆ ಬಹಿರಂಗಪಡಿಸಿದ್ದಾರೆ. ಇದು ಖಂಡನೀಯ. ಮುಖ್ಯಮಂತ್ರಿಗಳು ಅಸಮ್ಮತಿ ಸೂಚಿಸಿದರೆಂದು ಹೇಳಲಾದ ಬಳಿಕವೂ ಗೃಹಸಚಿವರು ವಿಷಯವನ್ನು ಸಾರ್ವಜನಿಕ ಚರ್ಚೆಗೆ ಬಿಟ್ಟಿದ್ದೇವೆ ಎನ್ನುತ್ತಿರುವುದು ಸರ್ಕಾರದ, ಪ್ರಥಮತ: ಸಂಘ ಪರಿವಾರದಲ್ಲಿ ತೀರ್ಮಾನ ಏನಿದೆ ಎಂಬುದನ್ನು ತೋರಿಸುತ್ತದೆ. ಇಂದಲ್ಲ ನಾಳೆ ಕಾರ್ಯಗತಕ್ಕೆ ಕಾದು ಕುಳಿತಿರುವ ನಿರ್ಧಾರವಿದು ಎಂಬುದರಲ್ಲಿ ಅನುಮಾನವೇ ಇಲ್ಲ. ಇನ್ನೂ ಸರ್ಕಾರದ ಪರ ಇಬ್ಬರು ಪ್ರಮುಖರೇ ವಿರೋಧ ಎಂಬಂತೆ ಆಡುವುದು ಕೂಡ 'ಏಕೋದ್ದೇಶದ ದ್ವಿಮುಖ ಪಾತ್ರಾಭಿನಯ'ವಾಗಿದೆ.

ಮಾಧ್ಯಮಗಳನ್ನು ನಿಯಂತ್ರಣಕ್ಕೆ ಒಳಪಡಿಸಬೇಕೆಂಬುದೇ ಈ ಓಂಬುಡ್ಸ್‌ಮನ್‌ನ ಮೂಲ ಉದ್ದೇಶವಾಗಿದೆ. ಇಂತಹ ನಿಯಂತ್ರಣ ಅತ್ಯಗತ್ಯವಾಗಿದೆಯೆಂದೂ, ಕಳೆದ ಆರು ತಿಂಗಳ ಹಿಂದೆಯೇ ಬಿಜೆಪಿ ಶಾಸಕ ರಘುಪತಿ ಭಟ್‌ರ ಹೆಂಡತಿ ಪದ್ಮಪ್ರಿಯಾಳ ಅಸಹಜ ಸಾವು (ಕೊಲೆ?)ನ ಸಂದರ್ಭದಲ್ಲಿಯೇ ಇಂತಹ ನಿಯಂತ್ರಣದ ಚಿಂತನೆ ಹುಟ್ಟಿತೆಂದು ಗೃಹಸಚಿವರು ಹೇಳಿರುವುದು ಅಧಿಕಾರಕ್ಕೆ ಬಂದ ಹೊಸ್ತಿನಲ್ಲಿಯೇ ಮೊದಲ ಪ್ರಾಶಸ್ತ್ಯವನ್ನಾಗಿರಿಸಿಕೊಂಡಿದ್ದರ ಸೂಚನೆಯಾಗಿದೆ.

ಈಗಾಗಲೇ ಕರಾವಳಿ ಪ್ರದೇಶದ ಹಾಗೂ ರಾಜ್ಯದ ಬಹುತೇಕ ಪ್ರಮುಖ ಟಿ.ವಿ, ಪತ್ರಿಕೆ ಇತ್ಯಾದಿ ಮಾಧ್ಯಮಗಳನ್ನು ಹಣ; ಅಧಿಕಾರ, ಆಮಿಷ ಹಾಗೂ ಬಹುರಾಷ್ಟ್ರೀಯ ಕಂಪನಿಗಳು, ಬಂಡವಾಳಗಾರರ ಬಲದಿಂದ (ಕೆಲವು ಧರ್ಮಾಧಿಕಾರಿಗಳ ತೋಳಿನಿಂದ) ನಿಯಂತ್ರಿಸುತ್ತಾ ಸತ್ಯದ ನಿತ್ಯ ಕೊಲೆಯು ನಡೆಯುವಂತೆ ನೋಡಿಕೊಳ್ಳಲಾಗಿದೆ. ಮಾಧ್ಯಮಗಳೇ ಹೇಳಿಕೊಳ್ಳುವಂತೆ ಪ್ರಜಾಪ್ರಭುತ್ವದ ನಾಲ್ಕನೆಯ ಸ್ತಂಭವಾಗುವ ಬದಲು ಜನರ ಧ್ವನಿಯಾಗುವ ಬದಲು ಯಜಮಾನನ ಧ್ವನಿಯಾಗುವಂತೆ ನೋಡಿ ಕೊಳ್ಳಲಾಗುತ್ತಿದೆ. ಇದನ್ನು ಒಪ್ಪದ ಸೊಪ್ಪು ಹಾಕದ ನಿಷ್ಠುರ ಪತ್ರಿಕೆ, ಮಾಧ್ಯಮಗಳ ವರದಿಗಾರರಿಗೆ ಎಲ್ಲಾ ಬಗೆಯ ಬೆದರಿಕೆ, ಕಿರುಕುಳ, ಧಾಳಿಗಳನ್ನು ನಡೆಸಿ ಹದ್ದುಬಸ್ತಿಗೆ ತರುವ ಪ್ರಯತ್ನಗಳು ನಡೆದೇ ಇವೆ. ಎಲ್ಲಾ ನೀತಿ, ಎಲ್ಲೆಗಳನ್ನು ಮೀರಿ ಕರಾವಳಿ ಅಲೆ ಪತ್ರಿಕೆಯ ಮೇಲೆ ನಡೆದಿರುವ ನಗ್ನ ಧಾಳಿ ಇದಕ್ಕೆ ಜ್ವಲಂತ ಉದಾಹರಣೆ. ಭೂಗತ ಲೋಕದ ಕ್ರಿಮಿನಲ್‌ಗಳು, ಅಕ್ರಮ ದಂಧೆಗಾರರು, ದರ್ಮ ಉದ್ಧರಿಸುವ ಸ್ವಯಂಘೋಷಿತರು, ಪಟ್ಟಭದ್ರರು ಸಂಘ ಪರಿವಾರದ ಛತ್ರಿಯಡಿ ಒಂದಾಗಿ ಧಾಳಿ ನಡೆಸುತ್ತಿದ್ದಾರೆ. ಶಿವಮೊಗ್ಗ, ಕೊಡಗು, ಬೆಂಗಳೂರು, ಮಂಗಳೂರು ಇತ್ಯಾದಿ ಕಡೆ ಪತ್ರಕರ್ತರಿಗೆ ಪೊಲೀಸರಿಂದ, ಸ್ವಯಂಘೋಷಿತ ನಿಯಂತ್ರಕರಿಂದಲೂ ಬೆದರಿಕೆಗಳು ಬಂದಿವೆ. ಇಂತಹ ತಮ್ಮ ಪ್ರಯತ್ನಕ್ಕೆ ಧರ್ಮಾಧಿಕಾರಿ ನೇಮಕ ಎಂಬುದು ಒಂದು ಅಧಿಕೃತ ಸರ್ಕಾರಿ ಮುದ್ರೆಯೊಂದಿಗೆ ಸಾಗಬೇಕು ಎಂಬುದು ಪರಿವಾರದ ಬಯಕೆ.



ಪದ್ಮಪ್ರಿಯಾ ಸಾವಿನ ಸಂದರ್ಭದಲ್ಲೇ ಇಂತಹ ಯೋಚನೆ ಬಂದಿತೆಂಬುದರಲ್ಲಿ ಮನಗಾಣಬೇಕಾದ ಕೆಲವು ಸಂಗತಿಗಳಿವೆ. ಬಿಜೆಪಿ ಶಾಸಕ ಭಟ್ಟನ ನಡವಳಿಕೆಯೇ ಹಲವಾರು ಅನುಮಾನಗಳಿಗೆ ಇಂಬುಕೊಟ್ಟಿತ್ತು. ಇವರನ್ನು ರಕ್ಷಿಸಲು ಇನ್ನೊಬ್ಬರನ್ನು ಬಲಿಪಶು ಮಾಡಲಾಗುತ್ತಿದೆಯೆಂದು ಕೂಗು ಕೇಳಿಬಂತು. ಇಡೀ ಘಟನೆ ತನಿಖೆಯನ್ನು (ಎಲ್ಲಾ ವಿದ್ಯಮಾನಗಳನ್ನು) ಸ್ವತ: ಗೃಹಸಚಿವ ಆಚಾರ್ಯರೆ ಅಲ್ಲಿ ಬೀಡುಬಿಟ್ಟು ನಿರ್ದೇಶಿಸಿದ್ದು ವಾಸ್ತವಗಳನ್ನು ಮುಚ್ಚಿ ಮರೆಮಾಡಲು ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಂಡ ಆರೋಪಗಳು ದಟ್ಟವಾಗಿ ಕೇಳಿಬಂದವು. ಮುಂದೆ ಕರಾವಳಿಯಲ್ಲಿ ಮಂಗಳೂರು ಮತ್ತು ಕರ್ನಾಟಕದ ಇತರೆಡೆಗಳಲ್ಲಿ ಚರ್ಚ್‌ಗಳು, ಕ್ರಿಶ್ಚಿಯನ್ನರ ಮೇಲೆ ಬಜರಂಗದಳ ನಡೆಸಿದ ಧಾಳಿಗಳು ಅದರಲ್ಲಿ ಬಿಜೆಪಿ, ಸರ್ಕಾರ ಪರೋಕ್ಷವಾಗಿರುವುದು ಪ್ರಸ್ತಾಪಿತ ವಾಯಿತು. ಇಂತಹವುಗಳನ್ನು ಹೊರ ಜಗತ್ತಿಗೆ ತೆರೆದುತೋರಿಸಿದ್ದು ಸ್ವಲ್ಪವಾದರೂ

ಪುಟ 12ಕ್ಕೆ

ಅಪಹರಿಸಲಾಗದ ಸಾಹಿತ್ಯ ಸಮ್ಮೇಳನ



75ನೇ ಸಾಹಿತ್ಯ ಸಮ್ಮೇಳನ ಚಿತ್ರದುರ್ಗದಲ್ಲಿ ಸಮಾರೋಪಗೊಂಡು ವಾರವೊಂದು ಕಳೆದಿದೆ. ರಪರಪನೆ ಮಳೆ ಸುರಿದು ನಿಂತ ಬಳಿಕವೂ ಟಪಟಪ ಎಂದು ಕೆಲಕಾಲ ಹನಿಗಳು ಉದುರುವಂತೆ ಸಮ್ಮೇಳನದ ಯಶಸ್ಸು ಗೊಂದಲಗಳ ಸುತ್ತ ಮಾತು ವಾದ ವಿವಾದಗಳು ನಡೆದಿವೆ. ಚರ್ಚೆಗಳು ಅಗತ್ಯ. ಆದರೆ ಹಾದಿ ತಪ್ಪಿಸಬಯಸುವುದರ ಬಗ್ಗೆ ಎಚ್ಚರವೂ ಅಷ್ಟೇ ಅನಿವಾರ್ಯ.

ಹಾಗೆ ನೋಡಿದರೆ ಈ ಸಮ್ಮೇಳನದ ಸ್ಥಳ, ದಿನಾಂಕಗಳ ನಿಗದಿ, ಸಮ್ಮೇಳನಾದ್ಯಕ್ಷರ ಆಯ್ಕೆ, ಗೋಷ್ಠಿಗಳು, ನಿರ್ಣಯಗಳು ಹೀಗೆ ಹಲವು ಪ್ರಮುಖ ಅಂಶಗಳ ಬಗ್ಗೆ ಆರಂಭದಿಂದಲೂ ವಿವಾದಗ್ರಸ್ತಗೊಳಿಸುವ ಯತ್ನಗಳು ನಡೆದೇ ಇದ್ದವು. ಕೆಲವರಂತೂ ಈ ಸಮ್ಮೇಳನ ತಮ್ಮ ಮೂಗಿನ ನೇರದ ಮನದೊಳಗಿನ ಗುಪ್ತ ಅಜೆಂಡಾಗಳಿಗೆ ಅನುಗುಣವಾಗಿ ತಿರುಗಿಸುವುದರತ್ತಲೇ ಕೌಶಲ್ಯ, ಪ್ರತಿಭೆಗಳನ್ನು ಬಳಸಿದರು. ಸಮ್ಮೇಳನ ಆರಂಭಗೊಂಡಾಗಲೂ ಅಧ್ಯಕ್ಷರ ಭಾಷಣದಿಂದ ಹಿಡಿದು ಊಟ, ಅಡಿಗೆ ಮನೆಯವರೆಗೂ ಎಲ್ಲವನ್ನು ಗೊಂದಲಮಯಗೊಳಿಸ ಬಯಸಿದರು. ನಮ್ಮ ರಾಜ್ಯದ ಟಿ.ವಿ., ಪತ್ರಿಕೆಗಳಂತಹ ಮಾಧ್ಯಮಗಳು ಸಾಮಾಜಿಕವಾದ ಕಲಾಪ, ಚರ್ಚೆಗಳಿಗಿಂತ ಉಪ್ಪಿನ ಕಾಯಿಯಲ್ಲಿ ಉಪ್ಪು ರುಚಿಯ ಮೀಮಾಂಸೆಯಲ್ಲಿನ ಗೊಂದಲಗಳನ್ನೇ ಪ್ರಧಾನವಾಗಿಸಿದರು. ಮಾಧ್ಯಮಗಳ ವರದಿಗಾರರು, ಮಾಧ್ಯಮಗಳ ಪ್ರಸಾರದ ವಿವರಗಳನ್ನು ಗಮನಿಸಿದರೆ ಸಾಕಾಗುತ್ತಿತ್ತು. ಅವರ ನಿಜ ಆಸಕ್ತಿಯ ಪೂರ್ವ ನಿರ್ಧಾರಗಳು. ಆದ್ದರಿಂದಲೇ ಅಧ್ಯಕ್ಷರು ಬರೆದುಕೊಂಡು ಬಂದಿದ್ದ ಭಾಷಣ ಓದದೇ ಹಾಗೆಯೇ 'ತೋಚಿದ' ಮಾತುಗಳನ್ನಾಡಿದರು. ಇದು 'ಮುಖ್ಯಮಂತ್ರಿಗಳಿಗೆ, ಸಚಿವರಿಗೆ ಮುಜುಗರ' ಉಂಟು ಮಾಡಿತು. ಇವರು ಯದ್ವಾತದ್ವಾ ವಿದ್ವಾಂಸರು, ಸಾಹಿತ್ಯವೇ 'ಮಾತಿನಲ್ಲಿ ಕಾಣಲಿಲ್ಲ'. ಗೋಷ್ಠಿಗಳಲ್ಲಿಯೂ ಕನ್ನಡ, ಕನ್ನಡಿಗರ ಬದುಕು, ಅಭಿವೃದ್ಧಿ ಚಿಂತನೆ, ಮಹಿಳಾ ಯೋಜನೆ, ಸಲ್ಲದ ಸಂಗತಿಗಳಾಗಿಬಿಟ್ಟವು. ಇನ್ನು ಅಡಿಗೆ ಮನೆ, ಊಟದ ಕಥೆಯೋ 'ಗೊಂದಲ, ಹಾಹಾಕಾರ... ಇದಕ್ಕೆ ಮಠಾದೀಶರ ಮನಸ್ತಾಪ ಬಳಸುವುದಕ್ಕೂ ಹಿಂಜರಿಯಲಿಲ್ಲ ಹೀಗೆ.

ಆದರೆ... ಅಂದಾಜಿಗಿಂತ ಅಧಿಕ ಸಂಖ್ಯೆಯಲ್ಲಿ ಜನತೆ ಉತ್ಸಾಹದಿಂದ ಹರಿದುಬಂದದ್ದೇ ಅಸ್ತವ್ಯಸ್ತತೆಗೆ ಕಾರಣವಾಯಿತು ಎಂಬುದನ್ನು ಇವರು ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ಅಂದರೆ ಸಂಘಟಕರು ಕಲಿಯಬೇಕಾದ್ದು, ತಿದ್ದುಕೊಳ್ಳಬೇಕಾದ್ದು ಇಲ್ಲವೇ ಇಲ್ಲ ಎಂದರ್ಥವೇನೂ ಅಲ್ಲ. ಸಮ್ಮೇಳನದ ಸಂದರ್ಭಕ್ಕೆ ಅದರ ಪ್ರಸಾರದಲ್ಲಿ ಒತ್ತು ಏನು ಇರಬೇಕು ಎಂಬುದು ಅಷ್ಟೆ.

ಬಹಳ ಮುಖ್ಯವಾಗಿ ಸಮ್ಮೇಳನಾದ್ಯಕ್ಷರಾದ ಹಿರಿಯ ವಿದ್ವಾಂಸ ಎಲ್.ಬಸವರಾಜುರವರ ಭಾಷಣ ಕಟು ಸತ್ಯವನ್ನೇ ಬಯಲಿಗಿಟ್ಟಿತು. ಸಾಹಿತ್ಯ, ಸಂಸ್ಕೃತಿ ಚಿಂತನೆಯೊಟ್ಟಿಗೆ ಕನ್ನಡ ಕರ್ನಾಟಕದ ಜನತೆಯ ಸಾಮಾಜಿಕ, ಆರ್ಥಿಕ ಬದುಕನ್ನು ತೆರೆದಿಟ್ಟಿತು. ಇಂತಹ ಸಮ್ಮೇಳನವೇ ಆಗಲಿ, ಸಾಹಿತ್ಯವೇ ಆಗಲಿ ಅಧಿಕಾರಸ್ಥರ ಸುತ್ತ ಗಿರಕಿ ಹೊಡೆವ, ಆಣತಿ ಪಾಲಿಸುವ ಆಶ್ರಯಿಗಳಾಗುವುದನ್ನು ಝಾಡಿಸಿ ಸ್ವಾಭಿಮಾನ ಎತ್ತಿಹಿಡಿದು ಕರ್ನಾಟಕದ ಜನತೆಯ 'ಆತ್ಮಸಾಕ್ಷಿಗೆ' ದನಿಯಾಯಿತು. ನೊಂದವರ, ದುರ್ಬಲರ, ಶೋಷಿತರ ಧ್ವನಿಯಾಗಿ ಮಾರ್ದನಿಸಿತು. ಸರ್ಕಾರದ ಚುಕ್ಕಾಣಿ ಹಿಡಿದು ಅಧಿಕಾರ ಅನುಭವಿಸುವವರಿಗೆ ಚಾಟಿ ಏಟು ಆಗಿತ್ತು. ವೇದಿಕೆಯಲ್ಲಿದ್ದ ಮುಖ್ಯಮಂತ್ರಿ, ಮಂತ್ರಿಗಳಿತ್ಯಾದಿ ವಂದಿಮಾಗಧರಿಗೆ ಕಿರಿ ಕಿರಿಯಾಗುತ್ತಿದ್ದರೆ, ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಜನತೆ ಅಧ್ಯಕ್ಷರ ಭಾಷಣದ ಅಂಶಗಳಿಗೆ ಚಪ್ಪಾಳೆ ತಟ್ಟಿ ಅಪಾರ ಸ್ಪಂದಿಸಿ ಬೆಂಬಲಿಸಿ ಅಂಗೀಕರಿಸಿದ್ದರು.

ಇದೇ ಹಿನ್ನೆಲೆಯಲ್ಲಿ ಆ ಸಂದರ್ಭಕ್ಕೆ ಟಿವಿ ಚಾನೆಲ್ ಚರ್ಚೆಯಲ್ಲಿ ಭಾಗವಹಿಸಿದ್ದ ಕ.ಸಾ.ಪ.ದ ನಿಕಟಪೂರ್ವ ಅಧ್ಯಕ್ಷರಾದ ಪ್ರೊ.ಚಂ.ಪಾ ರವರು 'ಅಧ್ಯಕ್ಷರು ಮಾತು ಮೊಟಕುಗೊಳಿಸುವಂತೆ ವೇದಿಕೆಯಿಂದಲೇ ಒತ್ತಡ



ಬಂದಿತ್ತಲ್ಲ' ಎಂದು ಕೇಳಿದಾಗ ಇವರ ಭಾಷಣಕ್ಕೆ ವೇದಿಕೆಯಿಂದ ಆಕ್ಷೇಪ ಬಂದಿದ್ದರೆ. ಒಂದು ವೇಳೆ ಅವರ (ಡಾ. ಚಿ.ಮೂ) ಅಧ್ಯಕ್ಷರಾಗಿದ್ದರೆ ವೇದಿಕೆಯಲ್ಲಿದ್ದವರು ಆಕ್ಷೇಪಿಸದಿದ್ದರೂ, ಎದುರಿನ ಜನರ ಪ್ರತಿಕ್ರಿಯೆ ಈಗಿನದಕ್ಕಿಂತ ಖಂಡಿತ ಭಿನ್ನವಿರುತ್ತಿತ್ತು ಎಂದರು.

ಗಮನಿಸಬೇಕಾದ ಸಂಗತಿಯೆಂದರೆ ಇಡೀ ಕನ್ನಡ ಸಾಹಿತ್ಯ ಸಮ್ಮೇಳನವನ್ನೇ ಸಂವಿಧಾನೇತರ ಶಕ್ತಿಯಾಗಿರುವ ಸಂಘ ಪರಿವಾರವು ಅಪಹರಿಸಲು ನಡೆಸಿದ ಪ್ರಯತ್ನಗಳು. ಅದು ಅಧ್ಯಕ್ಷರ ಆಯ್ಕೆಯಿಂದ ಹಿಡಿದು ಗೋಷ್ಠಿ, ವಿನ್ಯಾಸ ಇತ್ಯಾದಿಗಳಿಗೆ ಸರ್ಕಾರದ 2 ಕೋಟಿ ರೂ.ಗಳ ಅನುದಾನದ ಹಂಗು, ಅಧಿಕಾರ ಬಳಕೆ ಮಾಡಿಕೊಂಡು ಅನ್ಯಮತದ್ವೇಷ ಸಾಧನೆಗೆ, ಮತಾಂತರ, ಭಯೋತ್ಪಾದನೆಯಂತಹ ಏಕಪಕ್ಷೀಯ ವಿಶ್ಲೇಷಣೆ ಪ್ರಸರಣಗಳ ಅಜೆಂಡಾ ಜಾರಿಗೆ ಯತ್ನಿಸಿದರೂ ಅದು ಫಲಿಸದೇ ವಿಫಲವಾದದ್ದು. ಯಾವಾಗ ಇದು ಅಸಾಧ್ಯವಾಗುತ್ತಿದೆ ಎಂದೆನ್ನಿಸುತ್ತಿರುವಾಗ ಅಲ್ಲಿ ಎರಡು ಪ್ರಮುಖ ಮಠಾಧೀಶರ ನಡುವಿನ ಭಿನ್ನಾಭಿಪ್ರಾಯಗಳನ್ನೇ ದುರುಪಯೋಗಪಡಿಸಿಕೊಳ್ಳುವವರೆಗೂ ಹೋದದ್ದು ಈ

ಪುಟ 11ಕ್ಕೆ

ಜೋಯ್ಡಾ ರೈತರಿಂದ ಯಶಸ್ವಿ ದಿಟ್ಟ ಹೋರಾಟ

'ಅವರು ಕೊಡೋದಿಲ್ಲ ನಾವು ಬಿಡೋದಿಲ್ಲ'

ಜೋಯ್ಡದ ಜನರನ್ನು ಕತ್ತಲಲ್ಲಿಟ್ಟ ಅಧಿಕಾರಶಾಹಿ, ಧನದಾಹಿಗಳಿಗೆ ಪ್ರಬಲ ಹೋರಾಟದ ಮೂಲಕ ಏಟುಕೊಟ್ಟ ಕರ್ನಾಟಕ ಪ್ರಾಂತ ರೈತ ಸಂಘದ ಚಳುವಳಿಯ ಒಂದು ವರದಿ ಇದೆ. ಕಳೆದ 10, 12 ವರ್ಷಗಳಿಂದ ಜಾಗೃತ ರೈತ ಸಮುದಾಯ ಬೇಡಿಕೆ ಇಟ್ಟು ಮೂಲ ಸೌಕರ್ಯ ಕೇಳುತ್ತಿದ್ದಾರೆ. ಅದಕ್ಕಾಗಿ ನಿರಂತರ ಚಳುವಳಿಯ ದಾರಿ ಬಿಟ್ಟಿಲ್ಲ.

ಹಿಮ್ಮುಖಿ ಬೆಳವಣಿಗೆ

ಜೋಯ್ಡದ ಒಂದು ಸಣ್ಣ ಭಾಗ ಸ್ವಲ್ಪ ಅಭಿವೃದ್ಧಿ ಕಂಡಿದೆ. ಬಹುದೊಡ್ಡ ಭಾಗ ಏನನ್ನು ಕಂಡಿಲ್ಲ. ಶಿಕ್ಷಣವಿಲ್ಲ, ಉದ್ಯೋಗಕ್ಕೆ ತಕ್ಕ ಫಲ ಸಿಗ್ತಿಲ್ಲ. ಆರೋಗ್ಯದ ಸೌಕರ್ಯವಿಲ್ಲ; ಸತ್ತರೆ ಸಾಯಲಿ ಎನ್ನುವ ಬಂಡವಾಳಶಾಹಿಯ ನಿರ್ಲಕ್ಷ್ಯ. ಹಳ್ಳಿ ಹಳ್ಳಿ ಸಂಪರ್ಕಿಸಿ, ಕಾರವಾರ, ಬೆಳಗಾಂ ರಾಜ್ಯ ಹೆದ್ದಾರಿ ಸಂಪರ್ಕಿಸಲಿಕ್ಕೂ ರಸ್ತೆ ಸೇತುವೆಗಳಿಲ್ಲ; ಅನಾಗರಿಕ ಅವಸ್ಥೆಯಲ್ಲಿಟ್ಟೇ ಸೌಂದರ್ಯ ಪ್ರಜ್ಞೆ ಮೆರೆಯುವ ಸರ್ಕಾರದ ಧನದ್ದಾಹಿಗಳು. ರಾಜ್ಯಕ್ಕೆ ಬೆಳಕು ನೀಡುವ ಕಾಳಿ ನದಿಯನ್ನು ಒಡಲಲ್ಲಿಟ್ಟು, ಅಣೆಕಟ್ಟೆಗೆ ವಿದ್ಯುದಾಗರಕ್ಕೆ ತನ್ನ ಮೂಲಭೂಮಿ ಬಿಟ್ಟು ನಿರಾಶ್ರಿತರಾದರು. ಕತ್ತಲ ಕೋಣೆಯಲ್ಲಿ ನೂಕಿದರು ಆಳುವವರು. ಉಳ್ಳವರ ಗದ್ದೆ, ತೋಟದ ಕೆಲಸ, ದನ ಮೇಯಿಸುವುದು; ಕೆಲಸ ಇಲ್ಲಿ ಸಿಗದಿದ್ರೆ, ಪ್ರಗತಿಯಲ್ಲಿರುವ ಗೋವಾದತ್ತ ಮುಖ ಮಾಡುತ್ತಾರೆ ಈ ಭಾಗದ ಜನತೆ. ಬಹುತೇಕ ಆದಿವಾಸಿ ಗಳಾಗಿ ಇಂದೂ ಬದುಕುತ್ತಿರುವ ಕುಣುಬಿ ಜನರೇ ಹೆಚ್ಚು ಇಲ್ಲಿ.

ರಾಜ್ಯದಲ್ಲಿ ಅತ್ಯಂತ ದೊಡ್ಡ ತಾಲ್ಲೂಕುಗಳಲ್ಲಿ ಒಂದು ಮತ್ತು ಅಭಿವೃದ್ಧಿಯಲ್ಲಿ -10 ಪಾಯಿಂಟ್ ಸಿಕ್ಕಿದೆ. (ಮೈನಸ್ ಟೆನ್ ಗ್ರೋಥ್)

ಆದಿವಾಸಿಗಳಿಗೆ ಹಕ್ಕಿಲ್ಲ - ಕಳ್ಳರ ಲೂಟಿ

ರೈತರ ಅತಿಕ್ರಮಣ ಭೂಮಿ ಮತ್ತು ಕುಂಬ್ರಿ ಭೂಮಿಯು ಸಕ್ರಮವಾಗಿಲ್ಲ. ಆದರೆ ಜಿಲ್ಲೆಯಲ್ಲಿ ಭತ್ತದ ಕಣಜಗಳಲ್ಲೊಂದು ಜೋಯ್ಡ ತಾಲ್ಲೂಕು ವನವಾಸಿಗಳಿಗೆ ಅರಣ್ಯ ಉತ್ಪನ್ನದ ಮೇಲೆ ಹಕ್ಕಿಲ್ಲ. ಆದರೆ ಸಂಪದ್ಭರಿತ ಅರಣ್ಯ ಅದರ ಉತ್ಪನ್ನಗಳನ್ನು ಧನದಾಹಿಗಳು, ಅರಣ್ಯ ಕಳ್ಳರು ಲಪಟಾಯಿಸುತ್ತಿದ್ದಾರೆ. ಪಶ್ಚಿಮ ಘಟ್ಟದ ಸಸ್ಯ ಸಂಕುಲಗಳ ರಕ್ಷಣೆಗೋಸ್ಕರ ಹೆಚ್ಚು ಪ್ರಶಸ್ಥ ಸ್ಥಳ ಜೋಯ್ಡಾ. ಕಾಡು ಪ್ರಾಣಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ನೆಪ ಹೇಳಿ ವನ್ಯಜೀವಿ ಸಂರಕ್ಷಣೆಗೆ ಜಾಗ ಜೋಯ್ಡಾ, ಅಪರೂಪದ ಹುಲಿ ನಶಿಸುತ್ತಿದೆ ಎಂದು ಜೋಯ್ಡ ಅರ್ಧ ಭಾಗವನ್ನು ಹುಲಿಯೋಜನೆ (ಟೈಗರ್ ಪ್ರೊಜೆಕ್ಟ್) ಗೆ ಬಿಡಲಾಗುವುದು. ಇಲ್ಲಿ ಮನುಷ್ಯೇತರ ಜೀವ ಸಂಕುಲದ ಬಗ್ಗೆ ಕಾಳಜಿ. ಆದರೆ ಮನುಷ್ಯರು ಎಲ್ಲಿಗೆ?



ಅವರ ರಕ್ಷಣೆಗಾಗಿ ಏನಾದರೂ ಯೋಜನೆ ಜೋಯ್ಡಕ್ಕೆ ಬಂದಿದೆಯೇ? ಈ ಹಿಂದೆಯೇ ಜಾರಿಯಾಗಬೇಕಾಗಿದ್ದ ಬರಗೂರು ರಾಮಚಂದ್ರಪ್ಪ ನೇತೃತ್ವದ ಗಡಿನಾಡ ವರದಿಯಾಗಲಿ, ಡಾ.ನಂಜುಂಡಪ್ಪ ನೇತೃತ್ವದ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಬರಬೇಕಾದ ಪ್ಯಾಕೇಜ್ ಆಗಲೀ ಇನ್ನು ಯಾಕೆ ಜಾರಿಯಾಗುತ್ತಿಲ್ಲ? ಹತ್ತಾರು ಕಾಮಗಾರಿಗಳು ಅರ್ಧದಲ್ಲೇ ನಿಂತಿವೆ. ಹಣ ನುಂಗಿ ನೀರು ಕುಡಿದಾಗಿದೆ. ಮುಂದೇನು? ಹಾಗಾಗಿ ಜನರ ಬದುಕು ಸಂಕಷ್ಟದಲ್ಲಿರುವುದರಿಂದಾಗಿ ಜನತೆಯ ಮುಖ್ಯ ಬೇಡಿಕೆಗಳನ್ನಿಟ್ಟು ಪ್ರಾಂತ ರೈತ ಸಂಘದ ಜೋಯ್ಡ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಸುಮಾರು 15 ಕಿ.ಮೀ ಪಾದಯಾತ್ರೆ ಮೆರವಣಿಗೆ ಮ... ಅನಿರ್ದಿಷ್ಟಾವಧಿ ಧರಣ ಸತ್ಯಾಗ್ರಹಕ್ಕೆ ಕುಂತೇಬಿಟ್ಟ... ರೈತರು.

ಖೊಟ್ಟೆ ಆಶ್ವಾಸನಾ ದಿವೂ ನಕಾ

ತಮ್ಮತಮ್ಮ ಊರುಗಳಿಂದ ರಾತ್ರಿಯಲ್ಲಾ ನಡೆದ... ಬೆಳಗಿನ ಜಾವ ಕುಂಬಾರವಾಡ ಹತ್ತಿರದ ಕಿರುವತ್ತಿ... ಬಂದು ಸೇರಿದ ರೈತರು, ಮಹಿಳೆಯರು, ಮಕ್ಕಳ... ಕೆಂಬಾವುಟ ಹಿಡಿದು 'ಉಠಾವೊ ಝೆಂಡಾ ಭಂಡಾಚಾ' ಎಂದು ಪಾದಯಾತ್ರೆ ಶುರು ಮಾಡಿದರು. ಖೊಟ್ಟೆ ಆಶ್ವಾಸನಾ ದಿವೂ ನಕಾ, ಲೋಕಾನಾ ಫಸವೂ ನಕಾ, ಸುಳ್ಳು ಆಶ್ವಾಸನೆ ನೀಡಬೇಡಿ, ಜನರನ್ನು ವಂಚಿಸಬೇಡಿ, ಆಮಚಿ ಮಾಂಗಣಿ ಪೂರಿ ಕರಾ ನಹಿತರ ಖರ್ಚಿ ಖಾಲಿ ಕರಾ, ಹುಲಿ ಯೋಜನೆ ಬೇಡ, ಅತಿಕ್ರಮಣ ಭೂಮಿ ಸಕ್ರಮವಾಗಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನಾ ಜಾರಿ ಆಗಲಿ, ಶಿಕ್ಷಣ ವ್ಯವಸ್ಥೆ ಸುಧಾರಿಸಿ, ನಿಂತಿ... ಕಾಮಗಾರಿ ಪುನರಾರಂಭಿಸಿ ಜೋಯ್ಡದ ಸಮ... ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಿ, ವಿದ್ಯುತ್ ರಸ್ತೆ, ಸೇತುವೆ ಕಾಮಗಾರಿ ಪ್ರಾರಂಭಿಸಿ, ಇತ್ಯಾದಿ ಮುಖ್ಯ ಬೇಡಿಕೆ ಈಡೇರಿಕೆಗೆ ಹೋರಾಟದ ದಾರಿ ಕ್ರಮಿಸಿದರು. ಮಕ್ಕಳು ಮರಿ ಕಟ್ಟಿಕೊಂಡೇ ಬಂದರು ಅನಿರ್ದಿಷ್ಟಾವಧಿ ಹೋರಾಟಕ್ಕೆ ಬೇಕಾದ ಸಾಮಾನು ಅಕ್ಕಿ, ಕಾಯಿ, ಕಟ್ಟಿಗೆ, ಪಾತ್ರೆ ಸಮೇತ ಠಿಕಾಣಿ ಹೂಡಿದರು. ತಮ್ಮನ್ನು ಅಜ್ಞಾನದಲ್ಲಿಟ್ಟು ಮೋಸ ಮಾಡಿದ ಪುಡಾರಿಗಳ ತಂತ್ರ ಬಯಲುಗೊಳಿಸಿದರು.

ಜನವರಿ 12 ರಿಂದ ಅನಿರ್ಧಿಷ್ಟಾವಧಿ ಧರಣಿ ತಹಶೀಲ್ದಾರ್ ಕಛೇರಿ ಎದುರು ಪ್ರಾರಂಭವಾಗಿ ...

ಪುಟ 10 ರಿಂದ

ನೂರೆಂಟು ಪ್ರಶ್ನೆಗಳು....

ಕ್ಷಾತ್ರ

• ಶ್ರೀ

ನೀವ ಒಂದು ಜೋಕ್ ಕೇಳಿರ ಬಹುದು. ಒಂದು ಸಮಾರಂಭ. ಅದಕ್ಕೆ ಒಬ್ಬ ಭಾಷಣಕಾರರನ್ನು ಕರೆದಿದ್ದರು. ಆತ ಭಾಷಣ ಶುರು ಮಾಡಿದವನು ನಿಲ್ಲಿಸಲೇ ಇಲ್ಲ. ಜನ ಎಲ್ಲ ಖಾಲಿಯಾದರು. ಒಬ್ಬ ಧಡಿಯ ದೊಣ್ಣೆ ಹಿಡಿದುಕೊಂಡು ಶತಪಥ ವೇದಿಕೆ ಮುಂದೆ ತಿರುಗುತ್ತಿದ್ದ. ಕಡೆಗೆ ಭಾಷಣಕಾರ ಅವನನ್ನು ಕೇಳಿದ "ಏನಪ್ಪ ಏನು ಸಮಸ್ಯೆ?" ಎಂದು. ಆ ಧಡಿಯ "ನೀವು ಬಾಸ್ಣ ಮಾಡಿ ಸೋಮಿ, ಪಾಪ ನಿಮ್ ಕೆಲ್ಸ ನೀವು ಮಾಡ್ತಿದಿರಾ. ಅದ್ಯಾವ ತಲೆಕೆಟ್ ನನ್ಮಗ ನಿಮ್ಮನ್ನ ಕರ್ಕೊ ಬಂದನಲ್ಲ ಅವನ್ನ ಹುಡುಕ್ತಿದೀನಿ" ಅಂದ್ನಂತೆ. ಈಗ ಇದೇ ಜೋಕನ್ನ ಚಿತ್ರದುರ್ಗದಲ್ಲಿ ಸ್ವಲ್ಪ ರೀಮೇಕ್ ಮಾಡ್ಕೊಂಡು ಹೇಳ್ಕೋತಿದಾರಂತೆ. "ಎಂತೆಂಥ ಘನ 'ವಿಧ್ವಂಸರು' ನಿಕ್ಕರ್ ಹಾಕಿಕೊಂಡು ಸಮ್ಮೇಳಾಧ್ಯಕ್ಷರಾಗಲು ತುದಿಗಾಲಲ್ಲಿ ಕ್ಯೂ ನಿಂತಿದ್ದರು ಅವರನ್ನೆಲ್ಲ ಬಿಟ್ಟು, ರಾಜಕಾರಣಿಗಳು, ಮಠಾಧೀಶರ ಮುಖಕ್ಕೆ ಮಂಗಳಾರತಿ ಎತ್ತಿದ ಈ ಬಸವರಾಜರನ್ನು ಸಮ್ಮೇಳನಾಧ್ಯಕ್ಷ ಮಾಡಿದವರ್‍ಯಾರು?" ಅಂತ ಕೆರಳಿದ ಕೇಸರಿಗಳು ಹುಡುಕಾಡುತ್ತಿದ್ದಾರಂತೆ.

ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಕೇಂದ್ರ, ಸರ್ಕಾರದ ಕಾರ್ಯಕ್ರಮ. ಕೇಂದ್ರದ ಸಲಹೆಯಂತೆ ನಾವು ಅದನ್ನು ಮಾಡ್ತಿದೀವಿ ಅಷ್ಟೇ ಅಂತ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಮಾತು ಮಾತಿಗೂ ಕೇಂದ್ರದ ಮಲತಾಯಿ ಧೋರಣೆ, ಕೇಂದ್ರ ಮಲತಾಯಿ ಧೋರಣೆ ಅಂತ ಜಪ ನೆಪ ಮಾಡುವ ಇವರ ಮೇಲೆ, ಬೇರೆ ಯಾವ ರಾಜ್ಯದ ಮೇಲೂ ಇಲ್ಲದ ಪ್ರೀತಿ ಆ ಮಲತಾಯಿಗೆ ಬಂದದ್ದಾದರೂ ಹೇಗೆ? ಏಕೆ?. ಭಯೋತ್ಪಾದನೆ ಕರ್ನಾಟಕದಲ್ಲಿ ಮಾತ್ರ ಇದೆಯೇ? ಅಥವಾ ಕರ್ನಾಟಕದ ವಿದ್ಯಾರ್ಥಿಗಳು ಮಾತ್ರ ಭಯೋತ್ಪಾದನೆ ಬಗ್ಗೆ ಏನೂ ಅರಿಯದ ದಡ್ಡರೇ? ವಿದ್ಯಾರ್ಥಿಗಳು ಎಂದರೆ ಯಾರು? ಎಬಿವಿಪಿ ಎಂಬ ನಿಕ್ಕರ್ ಹಾಕಿಕೊಂಡವರು ಮಾತ್ರ ವಿದ್ಯಾರ್ಥಿಗಳೇ? ಅಥವಾ ಅವರು ಮಾತ್ರ ಜಾಗೃತಿ ಇಲ್ಲದವರಾದ್ದರಿಂದ ಅವರ ಜಾಗೃತಿ ಅಭಿಯಾನವೇ? ಅನ್ಯ ಧರ್ಮೀಯರೊಡನೆ ಮಾತನಾಡುವವರನ್ನು ಹಿಡಿದು ಧರ್ಮದೇಟು ಹಾಕುವುದೇ ಇವರಲ್ಲಿ ಮೂಡಿರುವ ಜಾಗೃತಿಯೇ? ಜನ ಸಾಮಾನ್ಯರ ಬೆವರಿನ ಹಣವನ್ನು ಹೀಗೆ ಪಕ್ಷದ ಪುಂಡು ಪಡೆಗೆ, ಮಠಗಳಿಗೆ ಪ್ರಸಾದದ ಹಾಗೆ ಹಂಚುವ ಬದಲು ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ದಕ್ಷರನ್ನು ನೇಮಕ ಮಾಡಬಾರದೆ? ಪೊಲೀಸ್ ಇಲಾಖೆಯಲ್ಲಿ ನಿಮ್ಮ ಕೇಸರೀ ಕಮಲದ ಕೈ ಇಕ್ಕಿ ರಾಜಕೀಯಕ್ಕೆ ಬಳಸುವ ಬದಲು ಅವರಿಗೆ ಸೂಕ್ತ ತರಬೇತಿ, ಅಗತ್ಯ ಉಪಕರಣಗಳನ್ನು ನೀಡಿದರೆ ಭಯೋತ್ಪಾದನೆ ನಿರ್ಮೂಲನ ಸಾಧ್ಯವಿಲ್ಲವೇ? ಪೊಲೀಸರೆಲ್ಲ ಚರ್ಚು, ಪಬ್ಬು, ಪ್ರೇಮಿಗಳ ಕಾವಲಿಗೆ ನಿಂತರೆ, ಭಯೋತ್ಪಾದನೆ ನಿಯಂತ್ರಣ ಹೇಗೆ ಸಾಧ್ಯ? ನಿಮ್ಮಲ್ಲಿ ಇಷ್ಟೊಂದು ಜಾಗೃತಿ ಮೂಡಿದ ಮೇಲೆ ಕೇಂದ್ರ ಎನ್‌ಎಸ್‌ಜಿ ಪಡೆ ಕೊಡಲಿಲ್ಲ ಎಂದು ಅಳುವುದು ಯಾಕೆ? ಹೀಗೆ ನೂರೆಂಟು ಪ್ರಶ್ನೆಗಳನ್ನು ಕೇಳುವವರನ್ನು, ಪತ್ರಿಕೆಗಳನ್ನೂ, ಮಾಧ್ಯಮಗಳನ್ನೂ ನಿಯಂತ್ರಣ ಮಾಡುವುದು ಭಯೋತ್ಪಾದನೆಯಲ್ಲವೇ?

●●●

ಕಪಿ ಸೈನ್ಯದ ಮೂರು ಎಪಿಸೋಡುಗಳು ಹೊರಬಂದಿವೆ. (ಚರ್ಚ್ ಧಾಳಿ , ಪಬ್ ಧಾಳಿ, ಪ್ರೇಮಿಗಳ ಮೇಲೆ ಧಾ(ತಾ)ಳಿ. ಇನ್ನು ಹಿಡನ್ ಅಜೆಂಡಾದ ಮುಂದಿನ ಇಪಿಸೋಡುಗಳಲ್ಲಿ ಏನಿರಬಹುದು?

1. ಟೀ ವಿ ಯಲ್ಲಿ ಅಶ್ಲೀಲ ಚಾನಲ್ ಗಳನ್ನು ನೋಡುವವರ ಮನೆ ಮೇಲೆ ಧಾಳಿ.

2. ಸಿನಿಮಾಗಳಲ್ಲಿ ಅಶ್ಲೀಲ ದೃಶ್ಯ/ ಐಟಂ ಸಾಂಗ್ ಬಂದಾಗ ಕಣ್ಣು ಮುಚ್ಚಿಕೊಳ್ಳದ ಹೆಣ್ಣುಗಳಿಗೆ ದೊಣ್ಣೆ ಪೆಟ್ಟು. ಇಷ್ಟೇನಾ ಎನ್ನಬೇಡಿ. ಇನ್ನೂ ಇದೆ. ಎಲ್ಲ ಹೇಳಿಬಿಟ್ಟರೆ ಹಿಡನ್ ಹೇಗಾದೀತು?

ಕಡೇ ಮಾತು, ಕರ್ನಾಟಕದಲ್ಲಿ ತಾಲಿಬಾನ್ ಎಂದು ಕೆಲವರು ಹೇಳುತ್ತಿದ್ದಾರೆ. ಅದನ್ನು ಧಾಳಿಬಾನ್ ಮತ್ತು ತಾಳಿಬಾನ್ ಎಂದೂ ಹೇಳಬಹುದೇ?

ಂದಸ್ಸು, ಕಾವ್ಯ, ಅಲಂಕಾರ, ಪತ್ರಿಮೆ ಇಂಥದ್ದೇನನ್ನೋ ಮಾತನಾಡುತ್ತಾರೆ, ಹಲವು ಾರಿ ಸಮ್ಮೇಳನಗಳಲ್ಲಿ ಆಗುವಂತೆ, ಗಡಿ ವಿವಾದ, ಕನ್ನಡ ಜಾರಿ ಇತ್ಯಾದಿ ಇತ್ಯಾದಿ ಕುರಿತು ತನಾಡುತ್ತಾರೆಂದು ನಿರೀಕ್ಷಿಸಿದ್ದವರಿಗೆ ಚಿತ್ರದುರ್ಗ ಕನ್ನಡ ಸಾಹಿತ್ಯ ಸಮ್ಮೇಳನದ ್ಯಕ್ಷರ ಭಾಷಣ ಚಾಟಿ ಏಟು ಬೀಸಿದಂತೆ ಆಗಿದೆ. ದಲಿತರ ಬದುಕು, ಶಿಕ್ಷಣದ ಪ್ರಶ್ನೆ, ಾತೀವಾದ ಮುಂತಾದ ಪ್ರಶ್ನೆಗಳನ್ನೆತ್ತುವ ಮೂಲಕ ಜನರ ಬದುಕನ್ನು ಸಾಹಿತ್ಯ ಚರ್ಚೆಯ ೇಂದ್ರ ಸ್ಥಾನಕ್ಕೆ ತಂದಿದೆ ಅಧ್ಯಕ್ಷರ ಭಾಷಣ



ಸಾಮಾಜಿಕ ನ್ಯಾಯವನ್ನು ಕೇಂದ್ರಸ್ಥಾನಕ್ಕೆ ತಂದ ಚಾಟಿ ಏಟಿನ ಭಾಷಣ


ದಲಿತರನ್ನು ಕಡೆಗಣಿಸುವ ಸರ್ಕಾರ ಬೇಕಿಲ್ಲ

- ಎಲ್.ಬಸವರಾಜು

ಸಾಹಿತ್ಯಕ್ಕೂ ಸರ್ಕಾರಕ್ಕೂ ಸಂಬಂಧ ಇಲ್ಲ. ಸರ್ಕಾರದ ಹಂಗಿನಲ್ಲಿ ಸಾಹಿತ್ಯ ಬೆಳೆಯಬೇಕಿಲ್ಲ. ಹಿಂದೆ ರಾಜ, ಮಹಾರಾಜರನ್ನು ಆಶ್ರಯಿಸಿದ್ದ ಹಿತ್ಯ ಏನೇನು ಉದ್ಧಾರ ಆಗಿಲ್ಲ. 'ಸ್ವಾತಂತ್ರ್ಯ ಂದು 60 ವರ್ಷಗಳಾದರೂ ದಲಿತರ ಸ್ಥಿತಿ ದಯನೀಯವಾಗಿದೆ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ಸಿಗುತ್ತಿಲ್ಲ. ತಿನ್ನಲು ಅನ್ನ ಇಲ್ಲ. ಇರಲು ಮನೆ ಇಲ್ಲ. ಕೇಂದ್ರ, ರಾಜ್ಯದಲ್ಲಿ ಇದುವರೆಗೆ ಅಧಿಕಾರ ನಡೆಸಿದ ಸರ್ಕಾರ ಇದ್ಯಾವುದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ದಲಿತರನ್ನು ಕಡೆಗಣಿಸುವ ಸರ್ಕಾರ ನಮಗೆ ಬೇಕಿಲ್ಲ. ಅಂಥ ಸರ್ಕಾರಕ್ಕೆ ಉಳಿಗಾಲವಿಲ್ಲ.....

ಸರ್ಕಾರ ನೆಲ, ಜಲ, ವಿದ್ಯುತ್ ಹಾಗೂ ಶಿಕ್ಷಣ ವಲಯವನ್ನು ಖಾಸಗೀಕರಣ ಮಾಡುತ್ತಿದೆ. ಉದಾರೀಕರಣ, ಜಾಗರೀಕರಣದ ಕಪಿಮುಷ್ಟಿಯಲ್ಲಿ ಸಿಕ್ಕಿ ಈಗಾಗಲೇ ನಲುಗಿದ್ದೇವೆ. ಕಳ್ಳಕಾಕರು, ಮಠಾಧೀಶರು ಹಾಗೂ ಉಳ್ಳವರಿಂದಾಗಿ ಶಿಕ್ಷಣ ವ್ಯವಸ್ಥೆ ಹಾಳಾಗಿದೆ. ್ವವಿದ್ಯಾಲಯಗಳಲ್ಲಿ ಬಿಕರಿ ಆಗುತ್ತಿರುವ ಡಾಕ್ಟರೇಟ್ ಪದವಿಗಳೇ ಇದಕ್ಕೆ ನಿದರ್ಶನ. ಇದು ನಾಚಿಕೆಗೇಡಿನ ಸಂಗತಿ. ನಾನು ಮಠಾಧೀಶರಿಗೆ ಶತ್ರುವಲ್ಲ. ಇಲ್ಲಿ ನಾನು ಬಂಡಾಯದ ಮಾತುಗಳನ್ನು ಆಡುತ್ತಿಲ್ಲ.....

ಜನರ ಬದುಕಿಗೆ ಸಂಬಂಧಿಸಿದ ನೆಲ, ಜಲ ಹಾಗೂ ವಿದ್ಯುತ್ ಕ್ಷೇತ್ರವನ್ನು ರಾಷ್ಟ್ರೀಕರಣ ಮಾಡಬೇಕು. ಬಿಜೆಪಿ ಬಂಡವಾಳಶಾಹಿ ಪರ ಎಂಬ ಭಾವನೆ ಜನರಲ್ಲಿದೆ. ಅದನ್ನು ಬದಲಾಯಿಸಿ....



ಪರಿಶಿಷ್ಟ ಜಾತಿ ಹಾಗೂ ವರ್ಗದ ಮಕ್ಕಳಿಗೆ ಪ್ರತಿ ತಾಲ್ಲೂಕು ಮಟ್ಟದಲ್ಲಿ ಸುಸಜ್ಜಿತವಾದ ಪ್ರತ್ಯೇಕ ವಸತಿ ಶಾಲೆಗಳನ್ನು ತೆರೆದು ಶಿಕ್ಷಣ ಕೊಡಿಸಿ. ಊಟದ ವ್ಯವಸ್ಥೆ ಮಾಡಿ. ಈ ಕೆಲಸವನ್ನು ಕಳ್ಳರಿಗೆ ವಹಿಸಬೇಡಿ.....

ಬ್ರಾಹ್ಮಣರಿಂದ ಏನೂ ಆಗೋದಿಲ್ಲ. ಬಹಳ ವರ್ಷದ ಹಿಂದೆಯೇ ಇದು ಗೊತ್ತಾಗಿದೆ. ರಾಮಾಯಣ ಬರೆದವನು ವಾಲ್ಮೀಕಿ. ಬೇಡ ಸಮುದಾಯಕ್ಕೆ ಸೇರಿದವನು. ಚಿತ್ರದುರ್ಗ ಜಿಲ್ಲೆಯ ಬಹುತೇಕರು ಅದೇ ಜನಾಂಗಕ್ಕೆ ಸೇರಿದವರು. ಅವರ ಸ್ಥಿತಿ ಸ್ವಲ್ಪವೂ ಸುಧಾರಣೆ ಕಂಡಿಲ್ಲ. ಪಂಪ ಮಹಾಕವಿ ಜೈನ ಸಮಾಜದವನು ಆ ಸಮಾಜಕ್ಕೆ ಮಾತ್ರ ಆತನನ್ನು ಸೀಮಿತಗೊಳಿಸಿದ್ದು ದುರದೃಷ್ಟಕರ. ಅವನ 'ಪಂಪ ಭಾರತ' ಮಹಾಕಾವ್ಯವನ್ನು ಬ್ರಾಹ್ಮಣರು ಓದಲಿಲ್ಲ. ವೀರಶೈವರೂ ಮುಟ್ಟಲಿಲ್ಲ. ಬೆರಳೆಣಿಕೆಯಷ್ಟು ಜೈನರು ಮಾತ್ರ ತೀರ್ಥಂಕರರ ಚರಿತ್ರೆ ಓದಿದ್ದಾರೆ.....

ಸಾಹಿತ್ಯವೆನ್ನುವುದು ಸರ್ಕಾರದಿಂದ ನಿರ್ಣಯವಾಗುವಂಥದ್ದಲ್ಲ ಅದು ತೀರಾ ಭಾವನಾತ್ಮಕ ವಿಚಾರ. ಇದನ್ನೆಲ್ಲ ಜನರೇ ನೇರವಾಗಿ ತಮ್ಮದೇ ಸಂಘ-ಸಂಸ್ಥೆಗಳ ಮೂಲಕ ನಿರ್ವಹಿಸಬೇಕು. ಯಾವುದೇ ಕಾರಣಕ್ಕೂ ಸರ್ಕಾರ ಹಸ್ತಕ್ಷೇಪ ಮಾಡಬಾರದು. ಹಲವು ಧಾರ್ಮಿಕ ವಿಚಾರಗಳಿಗೆ ಸರ್ಕಾರ ಪ್ರವೇಶ ಮಾಡುವುದು ಹೇಗೆ ಸಾಧ್ಯವಿಲ್ಲವೋ ಹಾಗೆ ಇಂಥ ಭಾವನಾತ್ಮಕ, ಆವೇಶಭರಿತ ವಿಷಯಗಳ ಗೊಡವೆಗೆ ಹೋಗದಿರುವುದು ಜನಕ್ಕೂ; ಜನಪರ ಸರ್ಕಾರಕ್ಕೂ ಶೋಭೆ ಬರುವಂತಹದ್ದು.

ಮಠಾಧೀಶರು ಪ್ರಶ್ನಾತೀತರೆ?

- ಕೀ.ರಂ

ಶಿಕ್ಷಕರನ್ನು, ರಾಜಕಾರಣಿಗಳನ್ನು ಪ್ರಶ್ನಿಸುವುದಾದರೆ ಮಠಾಧೀಶರನ್ನೇಕೆ ಪ್ರಶ್ನಿಸಬಾರದು. ಮಠಾಧೀಶರೇನು ಪ್ರಶ್ನಾತೀತರೇ?

ಪ್ರೊ.ಎಲ್.ಬಸವರಾಜು ಅವರು ಶೋಷಿತರು ಮತ್ತು ಸಾಂಸ್ಕೃತಿಕ ಸಮುದಾಯದ ದನಿಯಾಗಿ ಸಾರ್ವತ್ರಿಕವಾಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ವಾಮೀಜಿಗಳಿಂದ ಹಗುರವಾದ ಮಾತನ್ನು ನಿರೀಕ್ಷಿಸಿರಲಿಲ್ಲ. ಟೀಕೆಗಳನ್ನು ಮಠಾಧೀಶರು ಆತ್ಮಾವಲೋಕನಕ್ಕೆ ಬಳಸಿಕೊಳ್ಳಬೇಕೇ ಹೊರತು ರಾಜಕಾರಣಿಗಳ ರೀತಿ ಮಾತನಾಡಬಾರದು.

ಮಠಾಧೀಶರನ್ನು ವಿರೋಧಿಸುವುದನ್ನು ಮತ್ತು ಪ್ರೊ.ಎಲ್.ಬಸವರಾಜು ಅವರು ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವುದನ್ನು ತಳಕು ಹಾಕಿ ಮಾತನಾಡುವುದು ಕ್ರೂರವಾದದ್ದು. ಅಧ್ಯಕ್ಷ ಸ್ಥಾನವನ್ನು ಪ್ರೊ.ಎಲ್.ಬಸವರಾಜು ಅವರು ಕೇಳಿ ಪಡೆದಿದ್ದು ಅಲ್ಲ.

ಕವಿ ಸಾಹಿತಿ ಯಾವುದೇ ವ್ಯಕ್ತಿಯ ಅಡಿಯಾಳು ಅಲ್ಲ, ರಾಜಕೀಯಕ್ಕೂ ಅಡಿಯಾಳು ಅಲ್ಲ. ಅದೇ ಅವನ ದೊಡ್ಡತನ. ಲೇಖಕ ಎಲ್ಲದರ ವಿಮರ್ಶಕ. ಮಠಾಧೀಶರನ್ನು ವಿಮರ್ಶಿಸುವ ಹಕ್ಕು ಸಹ ಇದೆ. ಆದ್ದರಿಂದ ಮಠಾಧೀಶರು ಸಿಟ್ಟು ಪ್ರದರ್ಶಿಸುವುದರಲ್ಲಿ ಅರ್ಥವಿಲ್ಲ.

- ಖ್ಯಾತ ವಿಮರ್ಶಕ
ಪ್ರೊ.ಕಿ.ರಂ.ನಾಗರಾಜ

ಅಲಂಕರಿಸಿದ್ದೇಕೆ?

- ತರಳಬಾಳು ಶ್ರೀ

ಸಾಹಿತ್ಯ ಸಮ್ಮೇಳನಕ್ಕೆ ಮಠಾಧೀಶರು ಬರುವುದು ಬೇಡ ಎಂದು ಅಖಿಲ ಭಾರತ 75ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಪ್ರೊ.ಎಲ್.ಬಸವರಾಜು ಅವರು ಹೇಳುವುದಾದರೆ, ಚಿತ್ರದುರ್ಗದಲ್ಲಿ ಮಠಾಧೀಶರುಗಳೇ ಸಮ್ಮೇಳನ ಸಂಘಟಿಸುತ್ತಿದ್ದಾರೆ ಎಂದು ತಿಳಿದ ಮೇಲೂ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದಾದರೂ ಏಕೆ? ಆ ಸ್ಥಾನವನ್ನು ತಿರಸ್ಕರಿಸಿ ಮೈಸೂರಿನಲ್ಲೇ ಇರಬಹುದಾಗಿತ್ತು. ಇಲ್ಲಿಗೆ ಬರಬಾರದಿತ್ತು"

"ಬಸವರಾಜು ಅವರು 'ಮಠಾಧೀಶರು ನಮ್ಮ ಶತ್ರು' ಎಂದು ಏಕೆ ಮಾತನಾಡಿದ್ದಾರೋ ನಮಗೆ ಗೊತ್ತಿಲ್ಲ. ಸಾಹಿತಿಗಳು ಒಂದು ಸ್ಥಾನಮಾನ ಪಡೆದಿದ್ದರೆ ಅದು ಮಠಾಧೀಶರು ನಡೆಸುತ್ತಿರುವ ಶಾಲೆ, ಕಾಲೇಜುಗಳಿಂದ. ಬಸವರಾಜು ಬಿಸಿರಕ್ತದ ಯುವಕರಾಗಿದ್ದಾಗ ಈ ಹೇಳಿಕೆ ನೀಡಿದ್ದರೆ ಸೂಕ್ತ ಇತ್ತು

ಬಸವರಾಜು ಅವರಿಗೆ ಮಠಗಳು ಶತ್ರುಗಳಾಗಿದ್ದರೆ, ಅವರು ರಚಿಸಿರುವ ಕೃತಿಯನ್ನು ಚಿತ್ರದುರ್ಗದ ಬೃಹನ್ಮಠದಿಂದ ಪ್ರಕಟಿಸಿರುವುದಾದರೂ ಏಕೆ? ಅವರ 'ಶಬ್ಧಮಣಿ ದರ್ಪಣ', 'ಶೂನ್ಯ ಸಂಪಾದನೆ' ಕೃತಿಗಳ ಬಿಡುಗಡೆಗೆ ಮಲ್ಲಿಕಾರ್ಜುನ ಪ್ರಕಟಿಸಿರುವುದಾದರೂ ಏಕೆ? ಅವರ 'ಶಬ್ಧಮಣಿ ದರ್ಪಣ', 'ಶೂನ್ಯ ಸಂಪಾದನೆ' ಕೃತಿಗಳ ಬಿಡುಗಡೆಗೆ ಮಲ್ಲಿಕಾರ್ಜುನ ಮುರುಘರಾಜೇಂದ್ರ ಶ್ರೀಗಳ ಕೊಡುಗೆ ಇದೆ ಎಂಬುದನ್ನು ಮರೆಯಬಾರದು ಎಂದರು. "ಹಲವರು ನಮಗೆ ಸಮ್ಮೇಳನವನ್ನು ಬಹಿಷ್ಕರಿಸಿ ಎಂದು ಕೇಳಿಕೊಂಡಿದ್ದರು. ಬಸವರಾಜು ಅವರುನೀಡಿರುವ ಹೇಳಿಕೆಯನ್ನು ಕಡೆಗಣಿಸಿ ಹೋಗದಿರಬಹುದಿತ್ತು. ಹಾಗೆ ಮಾಡಿದ್ದರೆ ಅವರ ಹೇಳಿಕೆಗೆ ಮನ್ನಣೆ ನೀಡಿದಂತಾಗುತ್ತಿತ್ತು"

- ತರಳಬಾಳು ಜಗದ್ಗುರು ಡಾ.
ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ



ಕೆಣಕಿದರೆ....

- ಸಿ.ಎಂ.

ಕನ್ನಡ ನೆಲ, ಜಲ, ಗಡಿ ರಕ್ಷಣೆಗೆ ಸರ್ಕಾರ ಬದ್ಧ. ಈ ವಿಷಯದಲ್ಲಿ ರಾಜಿ ಪ್ರಶ್ನೆಯೇ ಇಲ್ಲ. ಯಾರಾದರೂ ಕನ್ನಡಿಗರನ್ನು ಕೆಣಕಿ ಸಾಧನೆ ಮಾಡುತ್ತೇವೆ ಎಂದು ಭಾವಿಸಿದರೆ ತಕ್ಕ ಶಾಸ್ತಿ ಮಾಡಬೇಕಾದೀತು.

ನನ್ನ ಆದ್ಯತೆ ಕನ್ನಡ. ನನ್ನ ಉಸಿರು ಕನ್ನಡ. ಐದೂವರೆ ಕೋಟಿ ಕನ್ನಡಿಗರ ಸೇವಕ ನಾನು. ನಮ್ಮನ್ನು ಕೆಣಕಿ ಏನೋ ಸಾಧಿಸುತ್ತೇವೆಂಬ ಹಠ ಬೇಡ. ನಮ್ಮ ಒಳ್ಳೆಯತನ ಅಪಾರ್ಥ ಮಾಡಿಕೊಳ್ಳದೇ ಸಹಕರಿಸಿ.

- ಮುಖ್ಯಮಂತ್ರಿ
ಬಿ.ಎಸ್.ಯಡಿಯೂರಪ್ಪ

ಚಿಂತಕರು, ಸಾಹಿತಿಗಳು, ವಿವಿಧ ವಿಭಾಗಗಳ ಜನರು ಮಂಗಳೂರಿನಲ್ಲಿ ನಡೆಯುತ್ತಿರುವ ಆತಂಕಕಾರಿ ವಿದ್ಯಮಾನಗಳ ಕುರಿತು ಪ್ರತಿಭಟಿಸಿದ್ದಾರೆ.

ಕೋಮುವಾದಿಗಳಿಂದ ಕರಾವಳಿಯನ್ನು ರಕ್ಷಿಸಲು ಚಿಂತಕರ ಕರೆ

ಸಮುದಾಯ ಮತ್ತು ಮಾನವತಾ ವೇದಿಕೆಗಳಿಂದ ಪ್ರತಿಭಟನೆ

ಮಂಗಳೂರಿನಲ್ಲಿ ಹಿಂದುತ್ವ ಕೋಮುವಾದಿಗಳ ದುಷ್ಕೃತ್ಯಗಳನ್ನು ಆಯಾಯ ಸಂದರ್ಭದಲ್ಲಿ ಪ್ರಗತಿಪರ ಸಂಘಟನೆಗಳು ಖಂಡಿಸುತ್ತಾ ಬಂದಿವೆ. ವಿವಿಧ ರಾಜಕೀಯ ಸಂಘಟನೆಗಳಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಸಂಘಟನೆಗಳು ಚರ್ಚುಗಳ ಮೇಲಿನ ದಾಳಿಯನ್ನು, ಪಬ್‌ನಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆದ ದಾಳಿಯನ್ನು ಖಂಡಿಸಿವೆ. ಮತಾಂತರದ ನೆಪವನ್ನು ಚರ್ಚುಗಳ ದಾಳಿ ಸಂಬಂಧ ಕೇಸರಿ ಸಂಘಟನೆಗಳು ಎತ್ತಿ ತೋರಿಸುತ್ತಿದ್ದ ಸಂದರ್ಭದಲ್ಲಿ 'ಮತಾಂತರ ಒಂದು ಸಮಸ್ಯೆಯೇ' ಎಂದ ವಿಚಾರ ಸಂಕಿರಣವನ್ನು ಮಂಗಳೂರು ಸಮಯದಾಯವು ನವೆಂಬರ್ 19 ರಂದು ಏರ್ಪಡಿಸಿತ್ತು.

ಪಬ್‌ನಲ್ಲಿ ನಡೆದ ದಾಂಧಲೆಯ ಬಳಿಕ ಮಂಗಳೂರು, ಉಡುಪಿಯ ಪ್ರಗತಿಪರ ವ್ಯಕ್ತಿಗಳು, ಸಾಹಿತಿ ಕಲಾವಿದರು, ಮಾನವ ಹಕ್ಕುಗಳ ಪ್ರತಿಪಾದಕರು, ಸಂವಿಧಾನ ರಕ್ಷಿಸಿ ಚಳುವಳಿಯ ಕಾರ್ಯಕರ್ತರು ಸಂಘ ಪರಿವಾರಕ್ಕೆದುರಾಗಿ ವ್ಯಾಪಕ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಆ ಘಟನೆಯ ಬೆನ್ನಿಗೇ ಶಾಸಕ ಪುತ್ರಿಯ ಅಪಹರಣ ಮತ್ತು ಮುಸ್ಲಿಂ ವಿದ್ಯಾರ್ಥಿಯ ಮೇಲೆ ಹಲ್ಲೆ, ಮಂಗಳೂರಿನ ಪ್ರಗತಿಪರ ಸಾಹಿತಿ ಕಲಾವಿದರನ್ನು ಕ್ರುದ್ಧರಾಗುವಂತೆ ಮಾಡಿತ್ತು. ಹೀಗಾಗಿ ಫೆಬ್ರವರಿ 7 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಸಮುದಾಯ ಮತ್ತು ಮಾನವತಾ ವೇದಿಕೆಗಳು ಜಂಟಿಯಾಗಿ ಏರ್ಪಡಿಸಿದ ಬಹಿರಂಗ ಪ್ರತಿಭಟನೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ವಿ.ವಿ. ಅಧ್ಯಾಪಕರು, ಕಾಲೇಜು ಅಧ್ಯಾಪಕರು, ನ್ಯಾಯವಾದಿಗಳು, ಮಾನಹಕ್ಕು ಹೋರಾಟಗಾರರು, ಸಾಹಿತಿಗಳು ಭಾಗವಹಿಸಿದ್ದರು.

ಫೆಬ್ರವರಿ 6 ರ ಸಾಯಂಕಾಲವಷ್ಟೇ ವಿದ್ಯಾರ್ಥಿಗಳ ಅಪಹರಣ ನಡೆದು ಮರುದಿನ ಪತ್ರಿಕೆಗಳಲ್ಲಿ ಘಟನೆ ವರದಿಯಾಗಿತ್ತು. ಕೇವಲ ದೂರವಾಣಿ ಸಂದೇಶಗಳಿಂದಲೇ ನೂರಾರು ಮಂದಿಯನ್ನು ಸಾಯಂಕಾಲದ ಪ್ರತಿಭಟನೆಗೆ ಆಹ್ವಾನಿಸಿದರೂ, ವಿಷಯ ತಿಳಿದವರು ತಾವೇ ಇನ್ನೊಬ್ಬರಿಗೆ ತಿಳಿಸಿ ಪ್ರತಿಭಟನೆ 250 ಕ್ಕೂ ಮೀರಿ ಜನ ಸೇರಿಕೊಂಡಿದ್ದರು. ಈ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಪಿ.ಯು.ಸಿ.ಎಲ್.ನ ಪಿ.ಬಿ.ಡೇಸಾ, ಮಂಗಳೂರು ವಿ.ವಿ.ಯ ಡಾ.ಸಬೀಹಾ ಭೂಮಿಗೌಡ, ಉದಯಕುಮಾರ್ ಇರ್ವತ್ತೂರ್, ಡಾ.ಬಿ.ಶಿವರಾಮಶೆಟ್ಟಿ, ಸೈಂಟ್ ಆಗ್ನಿಸಾ ಕಾಲೇಜಿನ ಪ್ರೊ.ಭೂಮೇಗೌಡ, ಗಣಪತಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಚಂದ್ರಕಲಾ ನಂದಾವರ, ಹಂಪಿ ವಿಶ್ವವಿದ್ಯಾನಿಲಯದ ಡಾ. ಚಂದ್ರಪೂಜಾರಿ, ಬೊಕ್ಕಪಟ್ಣ ಸರ್ಕಾರಿ ಕಾಲೇಜಿನ ಡಾ.ವಾಸುದೇವ ಬೆಳ್ಳೆ, ಕೊಡಿಯಾಲ ಬೈಲಾ ಕಾಲೇಜಿನ ಡಾ. ನಿತ್ಯಾನಂದಶೆಟ್ಟಿ ಸಂಘ ಪರಿವಾರದ ದುಷ್ಕೃತ್ಯಗಳನ್ನು ಖಂಡಿಸಿ ಮಾತನಾಡಿದರು. ಬರಹಗಾರರಾದ ಪ್ರೊ.ಇಸ್ಮಾಯಿಲ್, ಹಮೀದ್ ಮಂಜೇಶ್ವರವರ, ಪ್ರಾಧ್ಯಾಪಕರಾದ ಡಾ.ರಾಜೇಂದ್ರ ಉಡುಪ, ಮಕ್ಕಳ ಹಕ್ಕುಗಳ ಹೋರಾಟಗಾರ ರೆನ್ನಿ ಡಿ'ಸೋಜ, ಕರಾವಳಿ ಲೇಖಕಿ ವಾಚಕಿಯರ ಸಂಘದ ಕಾರ್ಯದರ್ಶಿ ಮಂಜುಳಾ ಸುಕುಮಾರಿ, ನ್ಯಾಯವಾದಿಗಳಾದ ರಾಮಚಂದ್ರ ಸಂಧ್ಯಾ ಆಚಾರಾ, ಸಮುದಾಯದ ಕಲಾವಿದರಾದ ಸಂಜೀವ್ ಬಳ್ಕೂರ್, ಸಂವಿಧಾನ ಚಳುವಳಿಯ ಲೋಲಾಕ್ಷ ಮೊದಲಾದ ಮಂಗಳೂರಿನ ಗಣ್ಯ ಪ್ರಗತಿಪರ ಚಿಂತಕರಲ್ಲದೆ ವಿದ್ಯಾರ್ಥಿ, ಯುವಜನ, ಮಹಿಳಾ ದಲಿತ ಚಳುವಳಿಗಳ ಮುಖಂಡರೂ, ಬೆಂಬಲಿಗರೂ ಹಾಜರಿದ್ದರು.

ಸಭೆಯಲ್ಲಿ ಮಾತನಾಡಿದ ಚಿಂತಕರು ಕೆಲವು ಬಹುಮುಖ್ಯ ಪ್ರಶ್ನೆಗಳನ್ನು ಮುಂದಿಟ್ಟರು. ಬಿಜೆಪಿ ಆಡಳಿತವನ್ನು ತಾನು ನಡೆಸುತ್ತಿದೆಯೇ ಅಥವಾ ಬೇರಾರಿಗೋ ಬಿಟ್ಟುಕೊಟ್ಟಿದೆಯೇ? ಶ್ರೀರಾಮ ಸೇನೆ ಭಜರಂಗದಳಗಳು ನೈತಿಕ ಪೊಲೀಸರ ಕರ್ತವ್ಯ ನಿರ್ವಹಿಸಲು ಅವರಿಗೆ ಅಧಿಕಾರ ಕೊಟ್ಟವರು ಯಾರು? ಕಾನೂನು, ಪೊಲೀಸ್ ಹಾಗೂ ನ್ಯಾಯಾಲಯದ ಕೆಲಸಗಳನ್ನು ನಿರ್ವಹಿಸಲು ಇಲಾಖೆಗಳು ಇಲ್ಲವೇ? ಪ್ರಜಾಪ್ರಭುತ್ವ ಬಂದು 60 ವರ್ಷಗಳನ್ನು ನಾವು ಆಚರಿಸುತ್ತಿರುವ ಸಂದರ್ಭದಲ್ಲಿ, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆದರ್ಶಗಳಿಗೆ ವಿರುದ್ಧವಾಗಿ ವರ್ತಿಸುವ ದುಷ್ಟರನ್ನು, ಸಂಘಟನೆಗಳನ್ನು ನಿರ್ಬಂಧಿಸಲು ಆಡಳಿತಕ್ಕೆ ಅಧಿಕಾರವಿಲ್ಲವೇ ಅಥವಾ ಮುನಸ್ಸಿಲ್ಲವೇ? ದುಷ್ಕರ್ಮಿಗಳನ್ನು ಬೆಂಬಲಿಸುತ್ತಾ ಹೋದರೆ ಭಾರತ ದೇಶ ಉಳಿಯಬಲ್ಲುದೇ ಎಂಬ ಆತಂಕವನ್ನು ಅವರುಗಳು ವ್ಯಕ್ತಪಡಿಸಿದರು.

ದಕ್ಷಿಣ ಕನ್ನಡ ಜಿಲ್ಲೆ ಬುದ್ಧಿವಂತರ ಜಿಲ್ಲೆಯೆಂದು ಹೊರಗಿನ ಜಿಲ್ಲೆಗಳಲ್ಲಿ ಗುರುತಿಸಲ್ಪಟ್ಟಿದೆ. ಮಹಿಳೆಯರು, ಅಲ್ಪಸಂಖ್ಯಾತರು, ವಿದ್ಯಾರ್ಥಿಗಳು ಇಲ್ಲಿ ಸುರಕ್ಷಿತರಲ್ಲವಾದರೆ ಇದು ದ.ಕ. ಜಿಲ್ಲೆಗೆ ಕೆಡುಕಲ್ಲವೇ? ತಾವು ಎಳವೆಯಲ್ಲಿ ಕಂಡ ಸೌಹಾರ್ದಮಯ ದಕ್ಷಿಣ ಕನ್ನಡ ಇದೇನಾ ಎಂದು ತಮಗೆ ಖೇದವಾಗುತ್ತಿದೆ. ಬಿಜೆಪಿ ಮತ್ತು ಕೇಸರಿ ಸಂಘಟನೆಗಳ ಮಾರ್ಗದರ್ಶಕರು 'ನಮ್ಮ ಸಂಸ್ಕೃತಿ' ಎಂದು ಬಾಯ್ತುಂಬ ಹೇಳಿಕೊಳ್ಳುವ ಸಂಸ್ಕೃತಿ ಇದೇನಾ ಎಂದು ಪ್ರಶ್ನಿಸಿದರು. ತಮ್ಮ ವಿದ್ಯಾರ್ಥಿಗಳಾಗಿ ಕಾಲೇಜು ಶಾಲೆ ತೊರೆದ ಹುಡುಗರೇ ಹಲ್ಲೆ ದಾಂಧಲೆ ಮಾಡುತ್ತಾ ಜೈಲು ಸೇರುವುದೋ ಅಂಗಹೀನರಾಗುವುದೋ ಇತ್ಯಾದಿ ವೃತ್ತಾಂತ ತಿಳಿದಾಗ, ನಮ್ಮ ಯುವಕರಿಗೆ ಯಾರು ದುರ್ಬೋಧೆ ಮಾರುತ್ತಿದ್ದಾರೆಂದು ತಮಗೆ ದು:ಖವಾಗುತ್ತಿದೆ ಎಂದು ಮಾತನಾಡಿದ ಅಧ್ಯಾಪಕರು ನುಡಿದರು.

ರಾಮಾಯಣದಲ್ಲಿ ನಾವು ಶ್ರೀರಾಮನನ್ನು ವಿಮರ್ಶೆಗೊಳಪಡಿಸಿ ದಾಗಲೂ ಅವನಲ್ಲಿ ಹಲವು ಉತ್ತಮ ಅಂಶಗಳನ್ನು ಕಂಡಿದ್ದೇವೆ. ಚಿಕ್ಕಮ್ಮನ ಮಾತಿಗೆ ಕಾಡಿಗೆ ತೆರಳಿದ, ತನ್ನದಲ್ಲದ ತಪ್ಪಿಗೆ ಕಲ್ಲಾದ ಅಹಲ್ಯೆಯನ್ನು ಉದ್ಧರಿಸಿದ, ಶ್ರಮಿಕರ ಶ್ರಮದಿಂದ ಕಟ್ಟಲಾದ ಸುವರ್ಣಲಂಕೆಯನ್ನು ನಾಶಗೊಳಿಸಲು ಒಪ್ಪದ ಶ್ರೀರಾಮ ನಿಜವಾಗಿಯೂ ಉತ್ತಮನೇ. ಹೆಣ್ಮಕ್ಕಳು, ದುರ್ಬಲರ ಮೇಲೆ ದಾಳಿ ಮಾಡುವವರು ತಮ್ಮ ದುಷ್ಟಪಡೆಗೆ ರಾಮನ ಹೆಸರನ್ನಿಟ್ಟುಕೊಂಡು ರಾಮನಿಗೇ ಅವಮಾನ ಮಾಡುತ್ತಿದ್ದಾರೆ ಎಂಬ ನೋವೂ ಅಲ್ಲಿ ವ್ಯಕ್ತವಾಯಿತು.

ಸಮುದಾಯಮತ್ತು ಮಾನವತಾ ವೇದಿಕೆ ನಡೆಸಿದ ಪ್ರತಿಭಟನೆಯಲ್ಲಿ ಪ್ರಥಮ ಬಾರಿಗೆ ಬರಹಗಾರರು, ಚಿಂತಕರು ಒಂದೇ ಕಡೆ ಬಹಿರಂಗವಾಗಿ ಮಾತನಾಡಿದ್ದಾರೆ. ಧ್ವನಿವರ್ಧಕ ಅನುಮತಿ ಇರಲಿಲ್ಲವಾದರೂ ಹ್ಯಾಂಡ್ ಮೈಕಿನಲ್ಲಿ ಜೋರಾಗಿ ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಮಂಗಳೂರಿನ ಜನ ಇದರಿಂದಲಾದರೂ ಎಚ್ಚೆತ್ತು ಸಂಘ ಪರಿವಾರ ಹುನ್ನಾರಗಳನ್ನು ಗುರುತಿಸಬಹುದೆಂದು ನಿರೀಕ್ಷಿಸಲಾಗಿದೆ. ಈ ಪ್ರತಿಭಟನಾ ಸಭೆಯ ಪ್ರಾರಂಭದಲ್ಲಿ ಸಮುದಾಯದ ಕಾರ್ಯದರ್ಶಿ ವಾಸುದೇವ ಉಚ್ಚಿಲ್ ಪ್ರಸ್ತಾವನೆಗೈದು ಸ್ವಾಗತಿಸಿದರು. ಮಾನವತಾ ವೇದಿಕೆಯ ಅಧ್ಯಕ್ಷರು ಹಾಗೂ ಖ್ಯಾತ ನ್ಯಾಯವಾದಿಗಳಾದ ಯಶವಂತ ಮರೋಳಿ ವಂದಿಸಿದರು.

ಅಪಹರಿಸಲಾಗದ ಸಾಹಿತ್ಯ ಸಮ್ಮೇಳನ

ಪುಟ 3 ರಿಂದ

ಪರಿವಾರದ ಆಕ್ಟೋಪಸ್ ಕೈಗಳು ಸಾಹಿತ್ಯ ಕ್ಷೇತ್ರವನ್ನು ಬಿಡದೆ ವ್ಯಾಪಿಸಲು ನಡೆಸುತ್ತಿರುವ ಯತ್ನಗಳ ಪ್ರಮಾಣವನ್ನು ತೋರಿಸುತ್ತದೆ.

ಆದರೆ ಅಲ್ಲಿ ನೆರೆದಿದ್ದ ಜನತೆ, ಮುಖ್ಯವಾಗಿ ಕನ್ನಡದ ಸಾಹಿತಿ, ಬರಹಗಾರರು ಕೋಮುವಾದಿಗಳಾಗಲು ಸಿದ್ಧರಿಲ್ಲ ಎಂಬುದನ್ನು ಅದಕ್ಕೆ ಪ್ರತಿರೋಧ ಒಡ್ಡುವ ಧರ್ಮ ನಿರಪೇಕ್ಷತೆ ಸಾಮರಸ್ಯ ಎತ್ತಿಹಿಡಿದು ಬದ್ಧತೆ ತೋರಿದರು. ಅಂತಹ ನಿರ್ಣಯಗಳನ್ನು ಅಂಗೀಕರಿಸಿದರೆ ಜನಸ್ಪಂದನವೂ ಇದೇ ಉತ್ತರವನ್ನೇ ನೀಡಿತು. ಕನ್ನಡದ ಸಾಹಿತಿಗಳು ಮೂರ್ಖರು ಎಂದೆಲ್ಲಾ ಜರೆದು ಅಧಿಕಾರದ ಮದದಿಂದ ದಕ್ಕಿಸಿಕೊಳ್ಳಬಯಸಿದ ಗಣಿಧಣಿಗಳಿಗೆ ಈ ಬಗ್ಗೆ ಚಕಾರ ಎತ್ತದ ಮುಖ್ಯಮಂತ್ರಿಗಳಿಗೆ ಪರೋಕ್ಷ ಮಂಗಳಾರತಿಯಿದು. ಆದಾಗ್ಯೂ ಸಾಹಿತಿಗಳಿಂದ ಒಂದು ಖಂಡನಾ ನಿರ್ಣಯ ಬಹಿರಂಗ ಪ್ರತಿಭಟನೆ ಬರಬೇಕಿತ್ತು.

ಇಷ್ಟಾದ ಮೇಲೆ ಇದೀಗ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳ ಬಗ್ಗೆ ಅಪಸ್ವರ ಎದ್ದಿದೆ. ಅವುಗಳ ಜಾರಿಗೆ ಯತ್ನಿಸುವುದಾಗಿ ಆರಂಭದಲ್ಲಿ ಮಾತನಾಡಿದ್ದ ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರು (ಕನ್ನಡದ ಭಾಷಾಂಧತೆ ಬಳಸಲು ಯತ್ನಿಸಿದ್ದ) ನಂತರದಲ್ಲಿ ಆದಾಗದು, ಇದಾಗದು ಎನ್ನುತ್ತಿದ್ದಾರೆ. ಇನ್ನೂ ಶಿಕ್ಷಣದ ದಂಧೆಯಲ್ಲಿ ಪರಿಣತಿ ಪಡೆದಿರುವುದನ್ನೇ ಶಿಕ್ಷಣ ತಜ್ಞರೆಂಬ ಲೇಬಲ್ ಹಚ್ಚಿಕೊಂಡಿರುವ ವಿಧಾನ ಪರಿಷತ್ ಸದಸ್ಯ ದೊರೆಸ್ವಾಮಿ (ಪೀಎಸ್ ಸಮೂಹ) ಶಿಕ್ಷಣದ ರಾಷ್ಟ್ರೀಕರಣದ ಮಹತ್ವದ ನಿರ್ಣಯಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ ಖಂಡಿಸಿದ್ದಾರೆ.

ಕನ್ನಡದ ನಿಘಂಟು ವಿದ್ವಾಂಸರಾಗಿರುವ ಪ್ರೊ.ಜಿ.ವೆಂಕಟಸುಬ್ಬಯ್ಯನವರು 'ಸಾಹಿತ್ಯ ಅಧಿಕಾರಸ್ಥರ ರಾಜಾಶ್ರಯದಲ್ಲಿ ಬೆಳೆಯಬೇಕಿಲ್ಲ, ಜನತೆಯೇ ಅದನ್ನು ಬೆಳೆಸಬಲ್ಲರು, ಬೆಳೆಸಬೇಕು' ಎಂಬ ಸಮ್ಮೇಳನಾಧ್ಯಕ್ಷರ ಅಭಿಪ್ರಾಯಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಾಹಿತ್ಯ ಹಿಂದೆಲ್ಲಾ ರಾಜಾಶ್ರಯದಲ್ಲೇ ಬೆಳೆದಿದೆ. ಈಗಲೂ ಹಾಗೆ ಇರಬೇಕೆಂಬ ಸನಾತನ ವಾದ ಮಂಡಿಸಿದ್ದಾರೆ. ಹೀಗೆಲ್ಲ ವಾದಿಸುವ ಇವರಿಬ್ಬರೂ ಸಂಘ ಪರಿವಾರದ ಬೇರುಗಳಿಗೆ ಜೋತುಬಿದ್ದವರು ಎಂಬುದು ಗಮನಾರ್ಹ.

ಇಷ್ಟೆಲ್ಲಾ ಆದ ಬಳಿಕವೂ ಅಂತಹುದೇ ಫ್ಯಾಸಿಸ್ಟ್ ಶಕ್ತಿಗಳ ಸಾಹಿತ್ಯ, ಸಂಸ್ಕೃತಿ ಸಂಸ್ಥೆಗಳನ್ನು ತನ್ನ ಬಿಗಿಮುಷ್ಟಿಗೆ ತಂದುಕೊಳ್ಳಲು ಯತ್ನ ಕೈಬಿಡುವುದಿಲ್ಲ. ಇದು ನಿರಂತರ ಹೋರಾಟ. ಭಾಷೆ, ಸಂಸ್ಕೃತಿ ಸಾಮರಸ್ಯ ಕಾಯುವಲ್ಲಿನ ಯತ್ನಗಳು ಇನ್ನೂ ಹೆಚ್ಚಬೇಕಿದೆ.

ಈಗಲೂ ಇಲ್ಲ ಮಹಿಳಾ ಮೀಸಲು !?



ಪ್ರಸಕ್ತ ಪಾರ್ಲಿಮೆಂಟಿನ ಕೊನೆಯ ಅಧಿವೇಶನ ಶುರುವಾಗಿದೆ. ಆದರೆ ಈಗಲೂ ಕೂಡ ಪಾರ್ಲಿಮೆಂಟ್‌ನಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡಿಸುವ ಲಕ್ಷಣವೇನೂ ಕಾಣುತ್ತಿಲ್ಲ.

ಈಗಿನ ಯುಪಿಎ ಸರ್ಕಾರ ಸ್ಥಾಪನೆಯಾದಾಗ ರೂಪುಗೊಂಡ ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಪಾರ್ಲಿಮೆಂಟ್ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಸ್ಥಾನಗಳನ್ನು ಮೀಸಲಿಡುವ ಒಂದು ಅಂಶವು ಪ್ರಧಾನವಾಗಿತ್ತು.

ರಾಜ್ಯಸಭೆಯಲ್ಲಿ ಬಾರಿ ಹೋರಾಟದಿಂದಲೇ ಮಸೂದೆಯನ್ನು ಮಂಡಿಸಲಾಗಿದೆ. ಆದರೆ ಅದಕ್ಕಿನ್ನೂ ಪಾರ್ಲಿಮೆಂಟಿನ ಅಂಗೀಕಾರ ದೊರೆಯಬೇಕಿದೆ.

ಮಸೂದೆಯನ್ನು ಪಾರ್ಲಿಮೆಂಟಿನ ಸ್ಥಾಯಿ ಸಮಿತಿ (standing committee)ಗೆ ಒಪ್ಪಿಸಲಾಗಿದೆ.



ಈ ಸಮಿತಿಯು ಇನ್ನು ವರದಿಯನ್ನು ಕೊಟ್ಟಿಲ್ಲ. ಈ ವರದಿಯನ್ನು ತುರ್ತಾಗಿ ನೀಡಬೇಕಾದ ಅಗತ್ಯವಿದೆ. ಸಮಿತಿಯು ಮೂಲ ಮಸೂದೆಯನ್ನು ದುರ್ಬಲಗೊಳಿಸದೇ ಈಗಿರುವ ಮಸೂದೆಯ ಸ್ವರೂಪವನ್ನೇ ಉಳಿಸಿಕೊಳ್ಳಬೇಕಾದ ಅಗತ್ಯವೂ ಇದೆ. ಸರ್ವಸಮ್ಮತಿ ಹೆಸರಿನಲ್ಲಿ ವಿಳಂಬ ಆಗುವುದನ್ನು ತಪ್ಪಿಸಬೇಕಿದೆ.

ಮಸೂದೆಯನ್ನು ಇದೇ ಅಧಿವೇಶನದಲ್ಲೆ ಅಂಗೀಕರಿಸಬೇಕೆಂದು ಒತ್ತಾಯಿಸಿ ವಿವಿಧ ಮಹಿಳಾ ಸಂಘಟನೆಗಳು ಫೆಬ್ರವರಿ 12 ರಂದು ದೆಹಲಿಯಲ್ಲಿ ಬೃಹತ್ ರ್‍ಯಾಲಿ ನಡೆಸಿವೆ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (AIDWA) ಬಿ.ಎಂ.ಎ, ಬಿಜಿವಿಎಸ್, ಸಮತಾ, ಸಿಡಬ್ಲ್ಯು.ಎಸ್, ಜಿಒಎಸ್ ಸೇರಿದಂತೆ ಹಲವಾರು ಸಂಘಟನೆ ಪಾಲ್ಗೊಂಡಿದ್ದವು. ಮಂಗಳೂರಿನಲ್ಲಿ ಮಹಿಳೆಯರ ಮೇಲೆ ನಡೆದಿರುವ ನಿರಂತರ ದಾಳಿಯನ್ನು ಖಂಡಿಸಲಾಗಿದೆ.

ವಿದೇಶಿ ನೇರ ಬಂಡವಾಳಕ್ಕೆ ಹಿಂಬಾಗಿಲು ತೆರೆದ ಯುಪಿಎ

ಇತಿಹಾಸದಿಂದ ಕಾಂಗ್ರೆಸ್ ಪಾಠ ಕಲಿಯುವುದಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗುತ್ತಿದೆ. ತೀವ್ರ ಆರ್ಥಿಕ ಉದಾರೀಕರಣ ನೀತಿಗೆ ಜೋತುಬಿದ್ದ ಎನ್‌ಡಿಎ ಕಳೆದ ಚುನಾವಣೆಯಲ್ಲಿ ಮಣ್ಣುಮುಕ್ಕಿತು. ಅಲ್ಲದೆ ಈಗ ಇಂತಹ ಉದಾರೀಕರಣ ನೀತಿಗಳನ್ನು ವಿವೇಚನಾರಹಿತವಾಗಿ ಒಪ್ಪಿಕೊಂಡ ಅನೇಕ ದೇಶಗಳು ಅಮೇರಿಕಾ ಆರ್ಥಿಕತೆಯ ಕುಸಿತದಿಂದ ಉಂಟಾಗಿರುವ ಜಾಗತಿಕ ಬಿಕ್ಕಟ್ಟಿನಲ್ಲಿ ತತ್ತರಿಸಿಹೋಗಿವೆ. ಆದರೆ ಭಾರತ ಅಷ್ಟು ತೀವ್ರ ಬಿಕ್ಕಟ್ಟಿಗೆ ಸಿಲುಕಿಲ್ಲ. ಉದಾರೀಕರಣದ ನೀತಿಗಳಿಗೆ ಎಡಪಕ್ಷಗಳು ಒಡ್ಡಿದ ಪ್ರತಿರೋಧವೇ ಅದಕ್ಕೆ ಕಾರಣ.

ಈಗ ಸರ್ಕಾರ ಉಳಿಯಲು ಎಡಪಕ್ಷಗಳ ಬೆಂಬಲ ಅನಿವಾರ್ಯವಲ್ಲ ಎಂಬ ಸ್ಥಿತಿಯಲ್ಲಿ ಕಾಂಗ್ರೆಸ್ ನೇತೃತ್ವ ಯುಪಿಎ ಸರ್ಕಾರ ಮತ್ತೊಂದು ಉದಾರೀಕರಣ ನೀತಿಯ ಜಾರಿಗೆ ಕೈಯಿಟ್ಟಿದೆ.

ವಿದೇಶಿ ನೇರ ಬಂಡವಾಳ ಹೂಡಿಕೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ಉದಾರೀಕರಿಸುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ. ಆದರೆ ನೇರವಾಗಿ ಈ ವಿಷಯದಲ್ಲಿ ಜನರನ್ನೆದುರಿಸಲು ಅದು ಸಿದ್ಧವಿಲ್ಲ. ಹಿಂಬಾಗಿಲು ತೆರೆದು ವಿದೇಶಿ ನೇರ ಬಂಡವಾಳಕ್ಕೆ ಅದು ಅವಕಾಶ ನೀಡುತ್ತಿದೆ.

"ಭಾರತೀಯರು ಒಡೆತನ ಹೊಂದಿರುವ ಅಥವಾ ಭಾರತೀಯರ ನಿಯಂತ್ರಣದಲ್ಲಿರುವ" ಕಂಪನಿಗಳ ಬಂಡವಾಳ ಹೂಡಿಕೆಯನ್ನು ಇನ್ನು ಮುಂದೆ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಎಂದು ವರ್ಗೀಕರಿಸದಿರಲು ತೀರ್ಮಾನಿಸಲಾಗಿದೆ. ಹೀಗಾಗಿ ಮುಂದೆ ವಿದೇಶಿ ನೇರ ಬಂಡವಾಳವು ಈ ಭಾರತೀಯರ ಒಡೆತನದ ನಿಯಂತ್ರಣದ ಕಂಪನಿಗಳ ಮೂಲಕ ವಾಮಮಾರ್ಗದಲ್ಲಿ ಭಾರತವನ್ನು ಪ್ರವೇಶಿಸಬಹುದು.

ಭಾರತದಲ್ಲಿ ಚಿಲ್ಲರೆ ವ್ಯಾಪಾರ ಸೇರಿದಂತೆ ಹಲವಾರು ವಿಭಾಗಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ ಮೇಲೆ ನಿಷೇಧ, ಮಿತಿ, ನಿಯಂತ್ರಣ ಇದೆ. ಅಲ್ಲದೆ ವಿಮಾರಂಗದಲ್ಲಿ ಈಗ ವಿದೇಶಿ ಶೇ.26 ಬಂಡವಾಳದ ಮಿತಿ ಇರುವುದನ್ನು ಇದು ಉಲ್ಲಂಘಿಸಬಹುದಾಗಿದೆ. ಈ ಸಂಬಂಧದ ಕಾನೂನು ತಿದ್ದುಪಡಿ ಮಸೂದೆಯೊಂದು ಪಾರ್ಲಿಮೆಂಟಿನಲ್ಲಿ ಇನ್ನೂ ಬಾಕಿ ಇರುವಾಗಲೇ ಈ ಹಿಂಬಾಗಿಲ ತಂತ್ರ ಅನುಸರಿಸಲಾಗಿದೆ.

ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಇದು ಜಗತ್ತಿಗೆ ಸಕಾರಾತ್ಮಕ ಸೂಚನೆ ನೀಡುತ್ತದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ಜೂಜುಕೋರ ವಿದೇಶಿ ನೇರ ಬಂಡವಾಳ ಹರಿದುಬಂದು ಏನು ಅನಾಹುತ ಸಂಭವಿಸಬಹುದು ಎಂಬ ಬಗ್ಗೆ ಮಾತ್ರ ಸರ್ಕಾರ ಏನೂ ಹೇಳುತ್ತಿಲ್ಲ.

ರ್‍ಯಾಗಿಂಗ್ ವಿಕೃತಿ ತಡೆಗೆ ಕ್ರಮ ಸ್ವಾಗತಾರ್ಹ

ರ್‍ಯಾಗಿಂಗ್ ಎನ್ನುವುದು ಒಂದು ವಿಕೃತಿ. ಶಾಲಾ, ಕಾಲೇಜುಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಪಕವಾಗಿ ಈ ವಿಕೃತಿ ಹರಡಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಹಿರಿಯ, ಬಲಾಢ್ಯ, ವಿದ್ಯಾರ್ಥಿಗಳೆನಿಸಿಕೊಂಡವರು ಕಿರಿಯರು, ಹೊಸಬರು ಮುಂತಾದವರನ್ನು ಮಾನಸಿಕವಾಗಿ, ದೈಹಿಕವಾಗಿ ಹಿಂಸಿಸಿ ಕುರುಕುಳ ನೀಡಿ ಸಂತೋಷ ಪಡುವುದೇ ರ್‍ಯಾಗಿಂಗ್.

ಸಾಮಾಜಿಕ ಪ್ರಜ್ಞೆಯಾಗಲಿ, ಅಧ್ಯಯನದ ಕಳಕಳಿಯಾಗಲಿ, ಸಹಪಾಠಿಗಳೊಂದಿಗೆ ಸ್ನೇಹಭಾವದಿಂದ ವರ್ತಿಸಬೇಕೆಂಬ ವಿವೇಕವಿಲ್ಲದ ಯುವಜನ ನಡೆಸುವ ರ್‍ಯಾಗಿಂಗ್‌ಗೆ ಸೂಕ್ಷ್ಮ ಮನಸ್ಥಿತಿಯ ಎಷ್ಟೋ ಅಮಾಯಕ ವಿದ್ಯಾರ್ಥಿಗಳ ಶಿಕ್ಷಣ ಬಲಿಯಾಗಿದೆ. ಹಲವು ಪ್ರಕರಣಗಳಲ್ಲಿ ಅಮೂಲ್ಯ ಪ್ರಾಣಹಾನಿಯೂ ಆಗಿ ಹೋಗಿದೆ.

ಹಣದ ಮದ, ಅಧಿಕಾರ, ಪ್ರಭಾವ ಮುಂತಾದ ಗರ್ವದಿಂದ ದುಷ್ ಪ್ರೇರಿತರಾದ ಶ್ರೀಮಂತ ವಿಭಾಗದ ವಿದ್ಯಾರ್ಥಿಗಳು ರ್‍ಯಾಗಿಂಗ್ ಪ್ರವೃತ್ತಿಯಲ್ಲಿ ಹೆಚ್ಚು ಹೆಚ್ಚು ತೊಡಗಿದ್ದಾರೆಂಬುದು ಒಂದು ಗಮನಿಸಬಹುದಾದ ಅಂಶ.

ಈ ರ್‍ಯಾಗಿಂಗ್ ನಿಯಂತ್ರಣದ ನಿಟ್ಟಿನಲ್ಲಿ ದೇಶದ ಸುಪ್ರಿಂ ಕೋರ್ಟ್ ಒಂದು ಸ್ವಾಗತಾರ್ಹ ಕ್ರಮ ಕೈಗೊಂಡಿದೆ. ಅದು ಈ ವಿಷಯದ ಕುರಿತು ನೇಮಿಸಲಾಗಿದ್ದ ರಾಘವನ್ ಸಮಿತಿಯ ವರದಿಯನ್ನು ಜಾರಿ ಮಾಡಬೇಕೆಂದೂ ಶಿಕ್ಷಣ ಸಂಸ್ಥೆಗಳನ್ನು ರ್‍ಯಾಗಿಂಗ್ ಮುಕ್ತ ಮಾಡಲು ಕ್ರಮ ವಹಿಸಬೇಕೆಂದು ಆದೇಶ ನೀಡಿದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ಪಿಡುಗು ನಿಯಂತ್ರಣಕ್ಕಾಗಿ ಸುಪ್ರಿಂ ಕೋರ್ಟ್ ನಿರ್ದೇಶನದಿಂದಲೇ ಈ ಸಮಿತಿ ರಚನೆಯಾಗಿತ್ತು.

ಶಾಲೆ, ಉನ್ನತ ಶಿಕ್ಷಣ ಸಂಸ್ಥೆಗಳು, ಜಿಲ್ಲಾಡಳಿತ, ವಿಶ್ವವಿದ್ಯಾಲಯ, ರಾಜ್ಯ ಸರ್ಕಾರ ಕೇಂದ್ರೀಯ ಸಂಸ್ಥೆಗಳು ಹೀಗೆ ಆರು ಹಂತಗಳಲ್ಲಿ ಸಮಿತಿಯು ಜವಾಬ್ದಾರಿ ಹಂಚಿಕೆಗೆ ಸೂಚಿಸಿದೆ.



ವಿದ್ಯಾರ್ಥಿಗಳ ಪ್ರವೇಶ ಪಡೆಯುವಾಗಲೇ ತಿಳುವಳಿಕೆ ನೀಡುವುದು, ರ್‍ಯಾಗಿಂಗ್ ಮುಕ್ತವಾದ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹಕ ಅನುದಾನ ನೀಡುವುದು, ಸಮಿತಿಯ ಈ ಶಿಫಾರಸ್ಸುಗಳನ್ನು ಜಾರಿ ಮಾಡಲು ಮುಂದಾಗದ ಶಿಕ್ಷಣ ಸಂಸ್ಥೆಗಳ ಮಾನ್ಯತೆ ರದ್ದು ಮಾಡುವುದು ಸಹ ಶಿಫಾರಸ್ಸಿನಲ್ಲಿ ಸೇರಿದೆ.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಶಿಫಾರಸ್ಸನ್ನು ಸ್ವಾಗತಿಸಿದೆ ಮತ್ತು ರ್‍ಯಾಗಿಂಗ್ ಪಿಡುಗನ್ನು ನಿವಾರಿಸಲು ವಿದ್ಯಾರ್ಥಿ ಸಮುದಾಯ, ಮಾಧ್ಯಮಗಳು ಹಾಗೂ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ಸೂಚಿಸಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ದಿವಾಳಿಕೋರತನದ ಎರಡು ಮುಖಗಳು

ಕಾಂಗ್ರೆಸ್ ಮತ್ತು ಬಿಜೆಪಿ ದೇಶಕ್ಕೆ ನಾಯಕತ್ವ ನೀಡಲು ತಮಗೆ ಜನಾದೇಶ ಕೇಳಲಾರಂಭಿಸಿವೆ. ಇವೆರಡೂ ಚುನಾವಣಾ ಸ್ಪರ್ಧೆ ತಮ್ಮ ನಡುವೆ ಮಾತ್ರ ಎಂದು ಬಿಂಬಿಸುವ ತವಕದಲ್ಲಿವೆ. ಆದರೆ ಅವರ ದಿಲ್ಲಿ ಮತ್ತು ನಾಗಪುರ ಅಧಿವೇಶನಗಳು ಅವುಗಳ ದಿವಾಳಿಕೋರತನವನ್ನು ಪ್ರದರ್ಶಿಸಿವೆ. ಇಂತಹ ಸನ್ನಿವೇಶದಲ್ಲಿ ಒಂದು ಜನಪರ ಪರ್ಯಾಯವನ್ನು ಪ್ರಸ್ತುತ ಪಡಿಸುವ ಕೆಲಸ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳದ್ದು ಎನ್ನುತ್ತಾರೆ ಇಂತಹ ಪರ್ಯಾಯಕ್ಕೆ ಶ್ರಮಿಸುತ್ತಿರುವ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್‌ರವರು

ಕಾಂಗ್ರೆಸ್ ಮತ್ತು ಬಿಜೆಪಿ ಸುಮಾರಾಗಿ ಒಂದೇ ಸಮಯಕ್ಕೆ ತಮ್ಮ ರಾಷ್ಟ್ರೀಯ ಅಧಿವೇಶನಗಳನ್ನು ನಡೆಸಿವೆ. ಬಿಜೆಪಿಯ ರಾಷ್ಟ್ರೀಯ ಮಂಡಳಿ ಸಭೆ ನಾಗಪುರದಲ್ಲಿ ನಡೆದರೆ, ಕಾಂಗ್ರೆಸ್ ದಿಲ್ಲಿಯಲ್ಲಿ ತನ್ನ ಬ್ಲಾಕ್ ಮಟ್ಟದ ಅಧ್ಯಕ್ಷರುಗಳ ಒಂದು ಸಮಾವೇಶ ನಡೆಸಿತು. ಕಳೆದ ಭಾನುವಾರ ಈ ಎರಡೂ ಪಕ್ಷಗಳ ಮುಖಂಡರು ತಂತಮ್ಮ ಚುನಾವಣಾ ವೇದಿಕೆಗಳನ್ನು ಪ್ರಕಟಿಸಿದ್ದನ್ನು ಕಂಡೆವು.

ಆರೆಸ್ಸೆಸ್ ಮುಖ್ಯಾಲಯವಿರುವ ನಗರದಲ್ಲಿ ನಡೆದ ಬಿಜೆಪಿ ಸಭೆ ತನ್ನ ಕರ್ತವ್ಯವೆಂಬಂತೆ 'ಅಯೋಧ್ಯೆಯಲ್ಲಿ ರಾಮ ದೇವಸ್ಥಾನ'ದ ಘೋಷಣೆ ಎತ್ತಿತು. ಆದರ ಹಳೆಯ ಕೋಮುವಾದೀ ಅಜೆಂಡಾದಲ್ಲಿ ಹೆಚ್ಚೇನೂ ಬದಲಾಗಿಲ್ಲ ಎಂಬುದನ್ನು ಇದು ಎತ್ತಿ ತೋರಿದೆ. ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಮತ್ತೆ ಅದೇ 'ನೈಜ ಜಾತ್ಯಾತೀತತೆ' ಮತ್ತು 'ಖೋಟಾ ಜಾತ್ಯಾತೀತತೆ'ಯ ನಡುವಿನ ಹೋರಾಟದ ರಾಗ ಆಲಾಪಿಸಿದರು. ಭಯೋತ್ಪಾದನೆಯ ವಿಷಯದಲ್ಲಿ ಅದಕ್ಕೆ ಹಿಂದುತ್ವ ಶಕ್ತಿಗಳು ಹಾಕಿದ ಅಚ್ಚಿನಿಂದ, ಮುಸ್ಲಿಂ ಸಮುದಾಯದ ಮೇಲೆ ಗುರಿಯಿಡುವ ಅಭ್ಯಾಸದಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ನರೇಂದ್ರ ಮೋದಿ ಮುಂಬೈ ದಾಳಿಯ ಸ್ಥಳೀಯ ಶಾಮೀಲುಗಾರರನ್ನು ಹಿಡಿಯಬೇಕು ಎಂದು ಆಗ್ರಹಿಸಿದರು. ಯುಪಿಎ ಸರಕಾರ 'ಅಲ್ಪಸಂಖ್ಯಾತರ ತುಷ್ಟೀಕರಣ' ನಡೆಸಿದೆ ಎಂಬ ಆರೋಪಗಳ ಎಂದಿನ ಸ್ತೋತ್ರ ಪಠಣವಿತ್ತು.

ಭಯೋತ್ಪಾದನೆಯ ಬಗ್ಗೆ ತನ್ನ ಕೋಮುವಾದೀ ನಿಲುವಿನಿಂದ ಏನೂ ಲಾಭ ದಕ್ಕದು ಎಂದು ಅರಿತುಕೊಂಡ ಬಿಜೆಪಿ ಜನಗಳ ಆರ್ಥಿಕ ಸಂಕಟಗಳ ಮೇಲೆ ಗಮನ ಕೇಂದ್ರೀಕರಿಸಲು ಯತ್ನಿಸಿತು. ಆದರೆ ಪ್ರಸಕ್ತ ಆರ್ಥಿಕ ಬಿಕ್ಕಟ್ಟನ್ನು ಎದುರಿಸುವುದು ಹೇಗೆ ಎಂಬುದನ್ನು ವಿವರಿಸಲು ಅದಕ್ಕಾಗಲೇ ಇಲ್ಲ. ಏಕೆಂದರೆ ಬಿಜೆಪಿಗೆ ಕಾಂಗ್ರೆಸ್ ಅನುಸರಿಸುತ್ತಿರುವ ನವ-ಉದಾರವಾದಿ ನೀತಿಗಳ ಬಗ್ಗೆ ನಿಜವಾಗಿ ಏನೇನೂ ಭಿನ್ನಾಭಿಪ್ರಾಯವಿಲ್ಲ.

ಬಿಜೆಪಿಯ ಪೇಚು

ಬಲಪಂಥೀಯ ಆರ್ಥಿಕ ಕಣ್ಣೋಟದಲ್ಲಿ



ಮುಳುಗೆದ್ದಿರುವ ಬಿಜೆಪಿಯ ಅಧ್ಯಕ್ಷರು ತನ್ನ ಪಕ್ಷದ ಆರ್ಥಿಕ ಧೋರಣೆಯನ್ನು ಮುಂದಿಡಲು ಗಾಂಧಿವಾದಿ ತತ್ವಜ್ಞಾನದ ವೇಷ ತೊಡಬೇಕಾಗಿ ಬಂತು. ಗಾಂಧಿವಾದವನ್ನು ಅವರು ಅಪ್ಪಿಕೊಂಡದ್ದಂತೂ ಒಂದು ವಿಕಟ ದೃಶ್ಯವಾಗಿತ್ತು. ಏಕೆಂದರೆ ಗಾಂಧೀಜಿಯ ನಡೆ-ನುಡಿಗಳಿಗೆಲ್ಲಾ ಬದ್ಧ ವಿರೋಧಿಗಳಾದ ಹೆಡ್ಗೆವಾರ್ ಮತ್ತು ಗೋಲ್ವಲ್ಕರ್‌ಗೆ ಈ ಮುಖಂಡರು ಭಕ್ತಿಪೂರ್ವಕವಾಗಿ ಪ್ರಣಾಮ ಅರ್ಪಿಸಿದ್ದರು. ಎಲ್.ಕೆ.ಅಡ್ವಾಣಿ ಯಾವರಂತೂ ತಾನು ಜಾತ್ಯಾತೀತತೆಯ ಬಗ್ಗೆ ಮೊದಲು ಕಲಿತದ್ದು ಗೋಲ್ವಲ್ಕರ್‌ರಿಂದ, ಗಾಂಧೀಜಿಯವರ ಹತ್ಯೆಯ ನಂತರ ಎಂದು ಒಪ್ಪಿಕೊಂಡರು.

ನಾಗಪುರದಲ್ಲಿ ಬಿಜೆಪಿ ಅಧಿವೇಶನ ಅದು ಒಂದೆಡೆ ಹಿಂದುತ್ವಕ್ಕೆ ಬದ್ಧವಾಗಿರಬೇಕಾಗಿದ್ದು ಇನ್ನೊಂದೆಡೆ ಸಮಾಜದ ವಿಶಾಲ ವಿಭಾಗಗಳನ್ನು ಮತ್ತು ರಾಜಕೀಯ ಶಕ್ತಿಗಳನ್ನು ಆಕರ್ಷಿಸಬಲ್ಲ ಒಂದು ರಾಷ್ಟ್ರೀಯ ಪಕ್ಷ ಎಂದು ತೋರ್ಪಡಿಸಿಕೊಳ್ಳಬೇಕಾದ ವೈರುಧ್ಯದಲ್ಲಿ ಸಿಲುಕಿಕೊಂಡಿರುವ ಪಕ್ಷ ಎಂಬುದನ್ನು ದೃಢಪಡಿಸಿದರೆ, ದಿಲ್ಲಿಯಲ್ಲಿ ಕಾಂಗ್ರೆಸ್ ಏರ್ಪಡಿಸಿದ ಜಾತ್ರೆ ಕೂಡಾ ಆ ಪಕ್ಷವೂ ಎಂತಹ ಶೋಚನೀಯ ಸ್ಥಿತಿಯಲ್ಲಿದೆ ಎಂಬುದನ್ನು ಬಯಲು ಮಾಡಿತು.

ಕಾಂಗ್ರೆಸ್ ಈ ಸಮಾವೇಶ ನಡೆಸಿದ್ದು ಮುಂಬರುವ ಚುನಾವಣಾ ಸಮರಕ್ಕೆ ತನ್ನ ಪಡೆಗಳನ್ನು ಸಜ್ಜುಗೊಳಿಸಲು. ಕಾಂಗ್ರೆಸ್ ನೇತೃತ್ವದ ಸರಕಾರ ತನ್ನ ಅಧಿಕಾರಾವಧಿಯ ಕೊನೆಯನ್ನು ತಲುಪುತ್ತಿರುವಂತೆ, ದೇಶವನ್ನು ಸಮಸ್ಯೆಗಳು ಎಲ್ಲೆಡೆಗಳಿಂದ ಮುತ್ತಿಕೊಂಡಿವೆ. ಆರ್ಥಿಕವು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಹೆಚ್ಚೆಚ್ಚು ಸಂಕಟಗಳನ್ನು ಎದುರಿಸುತ್ತಿದೆ; ಅಲ್ಪ ಸಂಖ್ಯಾತರ ಮೇಲೆ ಗುರಿಯಿಟ್ಟಿರುವ ಕೋಮುವಾದಿ ಶಕ್ತಿಗಳ ಚಟುವಟಿಕೆಗಳು ನಡೆಯುತ್ತಲೇ ಇವೆ; ನಾಡನ್ನು ಭಯೋತ್ಪಾದಕ ಹಿಂಸಾಚಾರ ಬೆಂಬತ್ತಿದೆ. ಮನಮೋಹನ ಸಿಂಗ್ ಸರಕಾರ ಭಾರತವನ್ನು ಒಂದು ಸಾಮರಿಕ, ಮಿಲಿಟರಿ ಮತ್ತು ಆರ್ಥಿಕ ಸಂಬಂಧಗಳ ಜಾಲದ ಮೂಲಕ ಅಮೆರಿಕಾಕ್ಕೆ ಕಟ್ಟು ಬೀಳುವಂತೆ ಮಾಡಿದೆ. ಇದು ಜನಗಳ ಬದುಕಿನ ಮೇಲೆ ಮತ್ತು ರಾಷ್ಟ್ರೀಯ ಸಾರ್ವಭೌಮತೆಯ ಮೇಲೆ ಹಾನಿಕಾರಕ ಪರಿಣಾಮ ಉಂಟು ಮಾಡಲಿದೆ.

ಕಾಂಗ್ರೆಸ್‌ನ ಟೊಳ್ಳು ದಾವೆ

ಕಾಂಗ್ರೆಸ್ ನೇತೃತ್ವದ ಸರಕಾರದ ಆಳ್ವಿಕೆಯಲ್ಲಿ 'ಆಮ್ ಆದ್ಮಿ'(ಜನಸಾಮಾನ್ಯ)ಯ ಮೇಲೆ ಗಮನ ಕೇಂದ್ರೀಕರಿಸಲಾಗಿದೆ ಎಂದು ಸಮಾವೇಶ ಹೇಳಿಕೊಂಡಿದೆ. ಆದರೆ ಜನಸಾಮಾನ್ಯರು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳು ಹೆಚ್ಚುತ್ತಿರುವಾಗ ಈ ದಾವೆ ಎಷ್ಟು ಟೊಳ್ಳು ಎಂಬುದು ಕಾಣುತ್ತದೆ. ಜಾಗತಿಕ ಬಿಕ್ಕಟ್ಟಿನ ಪರಿಣಾಮ ಕಾಣುವ ಮೊದಲೆ ಕಾಂಗ್ರೆಸ್ ಆಳರಸರ ಪ್ರೀತಿಯ ನವ-ಉದಾರವಾದಿ ನೀತಿಗಳಿಂದಾಗಿ ಸೂಪರ್ ಶ್ರೀಮಂತರು ಮತ್ತು ಬಡವರ ನಡುವೆ ಹಿಂದೆಂದೂ ಕಾಣದ ಕಂದಕ ಏರ್ಪಟ್ಟಿರುವುದನ್ನು ದೇಶ ಕಾಣಬೇಕಾಗಿ ಬಂದಿದೆ.

ಮನಮೋಹನಸಿಂಗ್ ಸರಕಾರ ಅಮೆರಿಕನ್ ಬಂಡವಾಳಶಾಹಿಯ ವಿನಿಯಂತ್ರಣ(ಇದ್ದ ನಿಯಂತ್ರಣಗಳನ್ನು ತೆಗೆದು ಹಾಕುವ) ಮಾದರಿಯನ್ನು ಅನುಕರಿಸಿದೆ. ಇದರ ಫಲವೆಂದರೆ ಎನ್ರೋನ್‌ನಿಂದ ಸತ್ಯಂವರೆಗಿನ ಹಗರಣಗಳು. 'ಆಪ್ತ ಬಂಡವಾಳಶಾಹಿ'ಯ ಮೂಲಕ ದೊಡ್ಡ ಬಂಡವಾಳಶಾಹಿಗಳು ಸಂಪನ್ಮೂಲಗಳನ್ನು ಬಾಚಿಕೊಂಡು ಅಪಾರ ಲಾಭ ಗಿಟ್ಟಿಸಲು ಅವಕಾಶ ಕಲ್ಪಿಸುವುದು ಯುಪಿಎ ಸರಕಾರದ ಮುಖ್ಯ ಲಕ್ಷಣವಾಗಿ ಬಿಟ್ಟಿದೆ. ಅತಿ ಶ್ರೀಮಂತ ಸ್ತರಕ್ಕೆ ಸಂಪತ್ತು ಹಿಂದೆಂದೂ ಕಾಣದ ಪ್ರಮಾಣದಲ್ಲಿ ವರ್ಗಾವಣೆಗೊಂಡಿದೆ. ವಿಶ್ವದ ಅತಿ ಶ್ರೀಮಂತರಲ್ಲಿ ಅತಿ ಶ್ರೀಮಂತ ಭಾರತೀಯರು ಕಾಣಸಿಕ್ಕರೆ, ವಿಶ್ವದ ಅತಿ ಬಡವರಲ್ಲಿ ಅತಿ ಬಡವ ಭಾರತೀಯರು ಕಾಣಸಿಗುತ್ತಾರೆ.

ಕಳೆದ ಕೆಲವು ತಿಂಗಳಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪ್ರಭಾವದಿಂದಾಗಿ ಸಂಘಟಿತ ವಲಯದಲ್ಲಿ, ಪಾರಂಪರಿಕ ಉದ್ದಿಮೆಗಳಲ್ಲಿ ಮತ್ತು ಸೇವಾ ವಲಯದಲ್ಲಿ ಲಕ್ಷಾಂತರ ಉದ್ಯೋಗಗಳು ಮಾಯವಾಗಿವೆ. 2008ರ ಕೊನೆಯ ಮೂರು ತಿಂಗಳಲ್ಲಿ ಐದು ಲಕ್ಷ ಉದ್ಯೋಗಗಳು ನಷ್ಟಗೊಂಡಿವೆ ಎಂದು ಇತ್ತೀಚಿನ ಒಂದು ಕಾರ್ಮಿಕ ಇಲಾಖೆಯ ಅಧ್ಯಯನದಲ್ಲಿ ಕಂಡು ಬಂದಿದೆ. ಇದು ತುಂಬಾ ಕೆಳಗಿನ ಅಂದಾಜು. ಮಾರ್ಚ್ 2009ರ ಅಂತ್ಯದೊಳಗೆ ಕನಿಷ್ಟ ಒಂದು ಕೋಟಿ ಉದ್ಯೋಗಗಳು ನಷ್ಟಗೊಳ್ಳಬಹುದೆಂದು ಅಂದಾಜು ಮಾಡಲಾಗಿದೆ.

ಈ ಬಿಕ್ಕಟ್ಟಿನ ದೊಡ್ಡ ಹೊರೆ ರೈತಾಪಿ ಜನಗಳ ಮೇಲೆ ಬೀಳಲಿದೆ. ವಾಣಿಜ್ಯ ಬೆಳೆಗಳ ಬೆಲೆಗಳು ಕುಸಿಯುತ್ತಿವೆ. ರೈತರಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಸಂಕಟ ಮತ್ತೊಮ್ಮೆ ಆತ್ಮಹತ್ಯೆಗಳು ಹೆಚ್ಚಲು ಕಾರಣವಾಗುತ್ತಿವೆ. ಮೋದಿ ಆಳ್ವಿಕೆಯ ಗುಜರಾತಿನಲ್ಲಿ ಮುತ್ತುಗಳು ಮತ್ತು ವಜ್ರದ ವ್ಯಾಪಾರದಲ್ಲಿ 70 ಕ್ಕೂ ಹೆಚ್ಚು ಉದ್ಯೋಗಹೀನ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈಗ ಎದ್ದು ಕಾಣುತ್ತಿರುವ ಸಂಗತಿಯೆಂದರೆ, ಆರ್ಥಿಕ ಬಿಕ್ಕಟ್ಟು ಕೋಟ್ಯಂತರ ಉದ್ಯೋಗಗಳು ಮತ್ತು ಬದುಕುಗಳನ್ನು ತಟ್ಟುತ್ತಿರುವಾಗ ಇದನ್ನು ಎದುರಿಸುವಲ್ಲಿ ಭಿನ್ನವಾದುದೇನನ್ನೂ ಮುಂದಿಡಲು ಕಾಂಗ್ರೆಸಿಗೂ ಆಗುತ್ತಿಲ್ಲ, ಬಿಜೆಪಿಗೂ ಆಗುತ್ತಿಲ್ಲ.



ಶೇರು ಮಾರುಕಟ್ಟೆ ಮಾದರಿಯ ಗುಲಾಮರಿವರು

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರು ಏನೂ ಆಗಿಲ್ಲ ಎಂಬಂತೆ ನಟಿಸಲು ಪ್ರಯತ್ನಿಸಿದರು, ಬ್ಯಾಂಕುಗಳನ್ನು ರಾಷ್ಟ್ರೀಕರಿಸುವ ಇಂದಿರಾ ಗಾಂಧಿಯವರ ಧೀರ ನಿರ್ಣಯ ಭಾರತದ ಹಣಕಾಸು ವಲಯ ಈ ಜಾಗತಿಕ ಬಿಕ್ಕಟ್ಟನ್ನು ಎದುರಿಸಿ ನಿಲ್ಲಲು ನೆರವಾಯಿತು ಎಂದು ಹೇಳಿಕೊಂಡರು. ಸಾರ್ವಜನಿಕ ವಲಯವನ್ನು ಕಟ್ಟುವ ಜವಹರಲಾಲ್ ನೆಹರೂರವರ ಪರಂಪರೆ ತಮ್ಮದು ಎಂದು ಹೇಳಿಕೊಳ್ಳಲು ಕೂಡಾ ಅವರು ಯತ್ನಿಸಿದರು. ಈ ಪರಂಪರೆ ಆರ್ಥಿಕಕ್ಕೆ ಶಕ್ತಿ ನೀಡುವ ಒಂದು ಮೂಲಭೂತ ಅಂಶವಾಗಿದೆ ಎಂದು ಅವರು ಹೇಳಿರುವುದೇನೋ ನಿಜ. ಆದರೆ ಕಾಂಗ್ರೆಸ್ ಅಧ್ಯಕ್ಷರು ಇಲ್ಲಿ ಹೇಳದೇ ಇರುವ ಸಂಗತಿಯೂ ಕಣ್ಣಿಗೆ ರಾಚುವಂತದ್ದು, ಅದನ್ನು ಉಪೇಕ್ಷಿಸುವಂತಿಲ್ಲ. ಎಡ ಪಕ್ಷಗಳು ತಡೆಯ ಇದ್ದಿದ್ದರೆ ಕಾಂಗ್ರೆಸ್ ಅಧ್ಯಕ್ಷರು ಯಾವ ಸಾರ್ವಜ ವಲಯದ ಪಾತ್ರವನ್ನು ಒಪ್ಪಿಕೊಳ್ಳುತ್ತಾರೋ ಅದೇ ಬಿಹೆಚ್‌ಇಎಲ್ ಮತ್ತಿತರ ಪ್ರಧಾನ ಸಾರ್ವಜನಿಕ ವಲಯದ ಘಟಕಗಳ ಶೇರುಗಳನ್ನು ಮಾರಿಯೇ ಬಿಡುತ್ತಿತ್ತು. ಹಣಕಾಸು ವಲಯವನ್ನು ಉದಾರೀಕರಣದ ಮೂಲಕ ಮತ್ತು ವಿದೇಶಿ ಹಣಕಾಸು ಬಂಡವಾಳಕ್ಕೆ ತೆರೆದು ಬುಡಮೇಲು ಮಾಡಲು ಸಕಲ ಪ್ರಯತ್ನ ನಡೆಸಿದ್ದು ಇದೇ ಕಾಂಗ್ರೆಸ್ ಮುಖಂಡತ್ವದ ಯುಪಿಎ ಸರಕಾರ. ಕಳೆದ ನಾಲ್ಕು ವರ್ಷಗಳಲ್ಲಿ ಎಡಪಕ್ಷಗಳ ಎಡೆಬಿಡದ ವಿರೋಧವಿಲ್ಲದಿದ್ದರೆ ಕಾಂಗ್ರೆಸ್ ವಿದೇಶಿ ಬ್ಯಾಂಕ ಭಾರತೀಯ ಖಾಸಗಿ ಬ್ಯಾಂಕುಗಳನ್ನು ನುಂಗಿಬಿಡಲು ನೆರವಾಗುವಲ್ಲಿ, ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಸರಕಾರದ ಹೂಡಿಕೆಯನ್ನು ಶೇಕಡಾಕ್ಕೆ ಇಳಿಸಿ ದುರ್ಬಲಗೊಳಿಸಿ, ಅಂತಿಮವಾಗಿ ಅವುಗಳ ಖಾಸಗೀಕರಣಕ್ಕೆ ಬುನಾದಿ ಹಾಕುವಲ್ಲಿ ಯಶಸ್ವಿಯಾಗುತ್ತಿತ್ತು.

ಈಗಲೂ ವಿದೇಶಿ ಬ್ಯಾಂಕುಗಳು ಭಾರತೀಯ ಖಾಸಗಿ ಬ್ಯಾಂಕುಗಳಲ್ಲಿ 74 ಶೇಕಡಾ ಪಾಲು ಹೊಂದಲು ಅನುಕೂಲ ಕಲ್ಪಿಸುವ ಮತ್ತು ಮತದಾನದ ಹಕ್ಕುಗಳ ಮೇಲಿನ ಮಿತಿಯನ್ನು ತೆಗೆಯುವ ಶಾಸನಗಳನ್ನು ಯುಪಿಎ ಸರಕಾರ ಸಂಸತ್ತಿನ ಮುಂದೆ ಇಟ್ಟಿದೆ. ಜಾಗತಿಕ ಹಣಕಾಸು ಬಿಕ್ಕಟ್ಟು ವಿಶ್ವಕ್ಕೆ ಹೊಡೆತ ಕೊಟ್ಟ ಮೇಲೂ, ಅಮೆರಿಕಾದಲ್ಲಿ

ಪುಟ 15ಕ್ಕೆ

ಸಂಘ ಪರಿವಾರದ ಷಡ್ಯಂತ್ರ ಸಿಪಿಎಂ ಶಾಸಕರ ಪುತ್ರಿಯ ಅಪಹರಣ

ಬಸ್ಸಿನಲ್ಲಿ ಮುಸ್ಲಿಂ ಸ್ನೇಹಿತೆಯ ಸಹೋದರನೊಂದಿಗೆ ಮಾತನಾಡುತ್ತಿದ್ದಾಳೆಂಬ ಕಾರಣಕ್ಕೆ ಮಂಜೇಶ್ವರದ ಸಿಪಿಐ(ಎಂ) ಶಾಸಕರ ಪುತ್ರಿಯನ್ನು ಮುಸ್ಲಿಂ ಹುಡುಗನನ್ನು ಅಪಹರಿಸಿ ದೌರ್ಜನ್ಯ ನಡೆಸಲಾಯಿತು. ಈ ಪ್ರಕರಣದಲ್ಲಿ ಸಂಘ ಪರಿವಾರದ ಪಾತ್ರವನ್ನು ಮರೆಮಾಚಲು, ಅಪರಾಧವನ್ನು ಸಿಪಿಐ(ಎಂ) ಮತ್ತು ಎಡ ಸಂಘಟನೆಗಳ ತಲೆಗೆ ಸುತ್ತಲು ಹೊರಟಿರುವ ಪರಿಯನ್ನು ನೋಡಿದರೆ ಇದೊಂದು ಆಳವಾದ ಷಡ್ಯಂತ್ರ ಎಂಬುದು ಗೊತ್ತಾಗುತ್ತದೆ. ರಾಜ್ಯದ ಮುಖ್ಯಮಂತ್ರಿಗಳು ಹಸಿ ಹಸಿ ಸುಳ್ಳುಗಳನ್ನು ಪೋಣಿಸಿ ಪ್ರಧಾನಿಗೆ ಪತ್ರ ಬರೆಯುತ್ತಾರೆ... ಮಾಹಿತಿದಾರರನ್ನು ಬಿಟ್ಟರೆ, ನಿಜವಾದ ಅಪರಾಧಿಗಳನ್ನು ಬಂಧಿಸುವುದು ಇಲ್ಲ... ಇದು ಎಲ್ಲಿಗೆ ಹೋಗಿ ತಲುಪಬಹುದು? ನಿಜವಾದ ಅಪರಾಧಿಗಳನ್ನು ಸುಲಭಕ್ಕೆ ಜಾಮೀನು ಸಿಗದ ಯುಎಪಿಎ (ಅನ್‌ಲಾಫುಲ್ ಪ್ರಿವೆನ್‌ಷನ್‌ಆಕ್ಟ್) ಅಡಿಯಲ್ಲಿ ಬಂಧಿಸಿ ಸರಿಯಾದ ತನಿಖೆ ನಡೆಸಿ, ಉಗ್ರವಾಗಿ ಶಿಕ್ಷಿಸಿ ಎಂಬಒತ್ತಾಯದ ಹೋರಾಟ ತೀವ್ರಗೊಳ್ಳಬೇಕಿದೆ.

ಸುದಿ

ಬಿ. ಮಾಧವ

ಕೇರಳದ ಮಂಜೇಶ್ವರ ಕ್ಷೇತ್ರದ ಸಿಪಿಐ(ಎಂ) ಶಾಸಕ ಸಿ.ಹೆಚ್. ಕುಂಞಂಬು ಅವರ ಪುತ್ರಿ, 17 ವರ್ಷ ಪ್ರಾಯದ ಬಾಲಕಿ ಶ್ರುತಿಯನ್ನು ಫೆಬ್ರವರಿ 6 ರಂದು ಮಂಗಳೂರಿನ ಪಂಪ್‌ವೆಲ್ ವೃತ್ತದ ಬಳಿ ಸಂಘ ಪರಿವಾರದ ಗೂಂಡಾಗಳೂ ಬಸ್ಸಿನಿಂದ ಹೊರಗೆಳೆದು ಅಮಾನುಷವಾಗಿ ಥಳಿಸಿ ಅಪಹರಿಸಿದ ಕುರಿತು ದೇಶದೆಲ್ಲೆಡೆ ಮಾಧ್ಯಮಗಳಲ್ಲಿ ಆಕ್ರೋಶ ವ್ಯಕ್ತವಾಗಿದೆ. ತನ್ನ ಮುಸ್ಲಿಂ ಗೆಳತಿಯ ಸಹೋದರನಾದ ಶಬೀಬ್‌ನ ಜೊತೆ ಬಸ್ಸಿನಲ್ಲಿ ಮಾತಾಡಿದ್ದಳು ಎಂಬುದೇ ಸಂಘ ಪರಿವಾರದ ದೃಷ್ಟಿಯಲ್ಲಿ ಶ್ರುತಿ ಮಾಡಿದ ಅಪರಾಧ ಶ್ರುತಿಯೊಂದಿಗೆ ಮಾತನಾಡಿದ ಅಪರಾಧಕ್ಕಾಗಿ ಶಬೀಬ್‌ನನ್ನು ಶ್ರುತಿಯ ಜೊತೆಗೆ ಬಸ್ಸಿನಿಂದ ಎಳೆದು ಹಾಕಿ ರಿಟೋದಲ್ಲಿ ಬಲವಂತವಾಗಿ ತಳ್ಳಿ, ಅಜ್ಞಾತ ಸ್ಥಳವೊಂದಕ್ಕೆ ಕೊಂಡು ಹೋಗಿ ಅಲ್ಲಿ ಗೂಂಡಾಗಳಿಂದ ಹಲ್ಲೆಯು ನಡೆಸಲಾಯಿತು. ಕನ್ನಡದಲ್ಲಿ ನಿರಂತರವಾಗಿ ಬೈಯುತ್ತಿದ್ದ ಗೂಂಡಾಗಳಲ್ಲಿ ಶ್ರುತಿ ಪದೇ ಪದೇ ಹೇಳಿದರು: ;ನನಗೆ ಕನ್ನಡ ಗೊತ್ತಿಲ್ಲ. ನನಗೆ ಗೊತ್ತಿರುವುದು ಮಲಯಾಳಂ ಮತ್ತು ಇಂಗ್ಲೀಷ್ ಮಾತ್ರ. ನೀವು ಏನು ಹೇಳುತ್ತೀರೆಂದು ನನಗೆ ಅರ್ಥವಾಗುತ್ತಿಲ್ಲ" ಆದರೂ ಬೈಗಳ ಸುರಿಮಳೆ, ಥಳಿತ, ಮುಂದುವರಿದಿತ್ತು. ಕೊನೆಗೂ ಅಜ್ಞಾತ ಸ್ಥಳಕ್ಕೆ ತಲುಪಿದಾಗ, ಕೇಸರಿ ಬಾವುಟಗಳು ಹಾರಾಡುತ್ತಿದ್ದ ವಸತಿ ಸಮುಚ್ಛಯದಿಂದ ಅನೇಕ ಯುವಕರೂ, ಮಹಿಳೆಯರೂ ಹೊರಗೆ ಬಂದರು. ಅವರಲ್ಲಿ ಒಬ್ಬಾಕೆ ಶ್ರುತಿಯನ್ನು ಇಂಗ್ಲಿಷ್‌ನಲ್ಲಿ ಗದರಿಸತೊಡಗಿದಳು. ನೀನು ಹಿಂದೂ ಆಗಿದ್ದು, ಮುಸ್ಲಿಮನ ಜತೆಗೆ ಮಾತನಾಡಬಾರದೆಂದು ಗೊತ್ತಿಲ್ಲವೇ? ಇಲ್ಲಿ ಏನೆಲ್ಲಾ ನಡೆಯುತ್ತಿದೆ ಎಂದು ನಿನಗೆ ಗೊತ್ತಾ? ಎಂದು ಕೇಳಿದಳು. ನಂತರ ಶ್ರುತಿಯನ್ನು ಅದೇ ರಿಕ್ಷಾದಲ್ಲಿ ವಾಪಸ್ಸು ಕೊಂಡು ಹೋಗಿ ಅದೇ ಪಂಪ್‌ವೆಲ್ ವೃತ್ತದ ಬಳಿ ಬಿಟ್ಟು ಹೋದರು. ಶಬೀಬ್‌ನನ್ನು ಹೊಡೆಯುತ್ತಲೇ ಇದ್ದ ಗೂಂಡಾಗಳು ಸುಮಾರು ಎರಡು ತಾಸುಗಳ ಬಳಿಕ ಆತನನ್ನು ಮುಖ್ಯರಸ್ತೆಗೆ ಕೊಂಡುಹೋಗಿ ಅಲ್ಲಿ ಬಿಟ್ಟರು.



ಶ್ರುತಿ ಮಂಗಳೂರಿನ ಸ್ಟೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಪಿಯುಸಿ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿ. ಮಂಗಳೂರು ನಗರದ ಕಂಕನಾಡಿಯ ಹಾಸ್ಟೆಲ್‌ಒಂದರಲ್ಲಿ ವಾಸ. ಕಾಸರಗೋಡಿನ ತನ್ನ ಮನೆಗೆ ಹೋಗಿದ್ದ ಅವಳು, ಮರುದಿನ ಪರೀಕ್ಷೆ ಇದ್ದ ಕಾರಣ ಬಸ್ಸಿನಲ್ಲಿ ಬಂದಿದ್ದಳು. ಗೂಂಡಾಗಳ ವಶದಲ್ಲಿದ್ದಾಗ ತನ್ನ ಮನೆಗೊಂದು ಪೋನ್ ಮಾಡಲು ಶ್ರುತಿಗೆ ಅನುಮತಿ ನೀಡಿದ್ದರು. 'ನೀನು ಹಿಂದೂ, ನೀನು ಬೇಕಾದರೆ ಪೋನ್ ಮಾಡು, ಆದರೆ ಆತ ಮುಸ್ಲಿಂ. ಆತನಿಗೆ ಅವಕಾಶ ಇಲ್ಲ.' ಎಂದರಂತೆ ಗೂಂಡಾಗಳು. 'ನನ್ನನ್ನು ಅಪಹರಿಸಲಾಗಿದೆ' ಎಂದಷ್ಟೇ ತನ್ನ ತಾಯಿಗೆ ತಿಳಿಸಲು ಅವಳಿಗೆ ಸಾಧ್ಯವಾಯಿತು. ಕುಂಞಂಬು ಅವರ ಮನೆಯಲ್ಲಿ ಕ್ಷಣ ಕ್ಷಣಕ್ಕೂ ಆತಂಕ. ತಮ್ಮ ಮಗಳನ್ನು ಹುಡುಕುವುದಾದರೂ ಎಲ್ಲಿ? ಯಾರೊಂದಿಗೆ ಹೇಳುವುದು? ಸಂಘ ಪರಿವಾರದ ಹೃದಯ ಹೀನ ಜನರು ಈ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲಾರರು. ಉಸ್ತುವಾರಿ ಸಚಿವ ಕೃಷ್ಣ ಪಾಲೇಮಾರ್‌ಗೆ ಇದೊಂದು ಸಣ್ಣ ವಿಷಯ!



ಗೂಂಡಾಗಳಿಂದ ಬಿಡುಗಡೆಗೊಂಡ ಶ್ರುತಿ ಹಾಸ್ಟೆಲ್‌ಗೆ ಹೋಗುವ ಸ್ಥಿತಿಯಲ್ಲಿರಲಿಲ್ಲ. ಆಘಾತದಿಂದ ಚೇತರಿಸಿಕೊಳ್ಳಲು ಅವಳಿಗೆ ಸಮಯ ಬೇಕಿತ್ತು. ತನ್ನ ತಂದೆಯ ಸ್ನೇಹಿತ, ಮಂಗಳೂರಿನ ಬಿಜೈ ನಿವಾಸಿ ಅಡ್ವೋಕೇಟ್ ಜೋಸ್ ಅವರ ಮನೆ ಆಕೆಗೆ ಗೊತ್ತಿತ್ತು. ರಿಕ್ಷಾ ಹತ್ತಿ ಅಲ್ಲಿಗೆ ಹೋದಳು. ಸುದ್ದಿ ತಿಳಿದ ಕುಂಞಂಬು ಮತ್ತು ಅವರ ಸಂಗಾತಿಗಳೂ ಮಂಗಳೂರಿನ ಅನೇಕ ಸಂಗಾತಿಗಳೂ ಅಲ್ಲಿಗೆ ಧಾವಿಸಿದರು. ಐ.ಜಿ., ಎಸ್ಪಿ* ಮೊದಲಾದ ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಲಾಯಿತು. ತಕ್ಷಣ ಕ್ರಮ ಕೈಗೊಳ್ಳುವ ಭರವಸೆಗಳಿಗೆ ಕೊರತೆಯಿರಲಿಲ್ಲ.

ವ್ಯಾಪಕ ಪ್ರತಿಭಟನೆ:

ಅಂದು ರಾತ್ರಿಯಿಂದಲೇ, ಮಂಗಳೂರಿನಲ್ಲಿ ಪ್ರತಿಭಟನೆಗಳು ಆರಂಭವಾದವು. ರಾತ್ರಿ ಹತ್ತು ಗಂಟೆಗೆ ಕೆಎಸ್‌ಆರ್‌ಟಿಸಿ. ಬಸ್ ನಿಲ್ದಾಣದ ಮುಂದೆ ಡಿವೈಎಫ್‌ಐ ಕಾರ್ಯಕರ್ತರು ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ಮರುದಿನ, ಫೆಬ್ರವರಿ 7 ರಂದು ಡಿವೈಎಫ್‌ಐ ನೇತೃತ್ವದಲ್ಲಿ ಮಂಗಳೂರನ್ನು ಒಳಗೊಂಡು ಇಡೀ ರಾಜ್ಯದಲ್ಲಿ ಪ್ರತಿಭಟನೆಗಳು ನಡೆದವು. ಶ್ರುತಿ ಕಲಿಯುತ್ತಿರುವ ಸ್ಟೇಂಟ್ ಎಲೋಶಿಯಸ್ ಕಾಲೇಜಿನ ವಿದ್ಯಾರ್ಥಿಗಳು ಬೆಳಗ್ಗೆ

ಪುಟ 12ಕ್ಕೆ

ಫಿಕ್ಸಿಂಗ್ ಕಾರ್ಯತಂತ್ರ !

ಶುಕ್ರವಾರದ ಘಟನೆಗೆ ಸಂಬಂಧಿಸಿ ಐದು ಮಂದಿಯನ್ನು ಬಂಧಿಸಲಾಗಿದೆ ಎಂಬ ಸುದ್ದಿ ಶನಿವಾರ ಸಂಜೆಗೆ. ಮಾಧ್ಯಮದಲ್ಲಿ ವರದಿಯಾಯಿತು. ಕಾಸರಗೋಡಿನಿಂದ ಮಂಗಳೂರಿಗೆ ಶ್ರುತಿ ಪ್ರಯಾಣಿಸಿದ ಬಸ್ಸಿನ ಚಾಲಕ, ನಿರ್ವಾಹಕ, ಟೈಂ ಕೀಪರ್, ಮೆಕ್ಯಾನಿಕ್ ಮತ್ತು ಮಂಗೂರಿನ ಒಬ್ಬ ವ್ಯಕ್ತಿ ಬಂಧಿತರು. ಶ್ರುತಿ ಮತ್ತು ಶಬೀಬ್‌ನನ್ನೂ ಬಸ್ಸಿನಿಂದ ಹೊರಕ್ಕೆಳೆದು, ಥಳಿಸಿ, ಅಪಹರಿಸಿ ರಿಕ್ಷಾದಲ್ಲಿ ಕೊಂಡು ಹೋದವರನ್ನಾಗಲಿ, ರಿಕ್ಷಾದ ಹಿಂದಿನಿಂದ ಬಂದ ಬೈಕ್‌ಗಳಲ್ಲಿ ಹಿಂಬಾಲಿಸಿದವರನ್ನಾಗಲಿ, ಅಜ್ಞಾನ ಸ್ಥಳದಲ್ಲಿ ಮನೆಗಳಿಂದ ಹೊರಬಂದು ಹೊಡೆದ ಮತ್ತು ಬೈಗಳ ಸುರಿಮಳೆಗೈದ ಪುರುಷ-ಮಹಿಳಾ ಭಜರಂಗಿಗಳನ್ನಾಗಲೀ ಬಂಧಿಸಲಿಲ್ಲ. ಬಸ್ಸಿನ ಸಿಬ್ಬಂದಿಗಳಾದ ನಾಲ್ವರು ಬಂಧಿತರು ಹೊರಗಿನ ಗೂಂಡಾಗಳಿಗೆ ಸಂದೇಶ ಕಳುಹಿಸಿ, ಅವರು ಪಂಪ್‌ವೆಲ್ ವೃತ್ತದ ಬಳಿ ಕಾದು ನಿಂತು ದಾಳಿ ಮಾಡುವಂತೆ ವ್ಯವಸ್ಥೆ ಮಾಡುವುದರಲ್ಲಿ ಪಾತ್ರ ವಹಿಸಿದ್ದರು. ಮುಂದಿನ ದಾಳಿಗಳ ಕಾರ್ಯಾಚರಣೆ ನಡೆಸಿದವರು. ಮುಂದಿನ ದಾಳಿಗಳ ಕಾರ್ಯಾಚರಣೆ ನಡೆಸಿದವರು ಮಂಗಳೂರಿನ ಪ್ರಕಾಶನ ಜತೆಗೆ ಇತರರು ಅನೇಕರಿದ್ದರು. ಅವರನ್ನು ಹುಡುಕಿ ಬಂಧಿಸುವ ಯಾವ ಕ್ರಮವನ್ನು ಪೋಲಿಸರು ಕೈಗೊಳ್ಳಲಿಲ್ಲ. ಘಟನೆಗಳು ನಡೆದಾಗ ಕೆಲವರನ್ನು ಬಂಧಿಸಿ ಫಿಕ್ಸ್ ಮಾಡುವುದು ಮಂಗಳೂರಿನ ಪೋಲೀಸರಿಗೆ ಅಭ್ಯಾಸವಾಗಿ ಬಿಟ್ಟಿದೆ. ಇದರಿಂದಾಗಿ ಮೊಕದ್ದಮೆ ನಿರಾಯಾಸವಾಗಿ ಕೋರ್ಟಿನಲ್ಲಿ ಬಿದ್ದು ಹೋಗುತ್ತದೆ.

ಫೆಬ್ರವರಿ 8ರ ಬೆಳಿಗ್ಗಿನಿಂದ ಸುಳ್ಳು ಪ್ರಚಾರದ ಫ್ಯಾಸಿಸ್ಟ್ ಕಾರ್ಯತಂತ್ರ ಆರಂಭವಾಯಿತು. ಐದು ಮಂದಿಯ ಬಂಧನವಾಗುತ್ತಲೇ ಅವರಿಗೊಬ್ಬ ವಕೀಲ ಪ್ರತ್ಯಕ್ಷನಾದ. ಸಂಘ ಪರಿವಾರದ ಹಿನ್ನೆಲೆ ಇರುವ ಪಿ.ಪಿ. ಹೆಗ್ಡೆ ಎಂಬ ಈ ವಕೀಲ, ಮಾಧ್ಯಮದವರನ್ನು ಕರೆದು, ಬಂಧಿತ ಆರೋಪಿಗಳೆಲ್ಲರೂ ಸಿಪಿಐ(ಎಂ) ಕಾರ್ಯಕರ್ತರೆನ್ನುವ ಹಸಿ ಹಸಿ ಸುಳ್ಳನ್ನು ತೇಲಿ ಬಿಟ್ಟ. ಕ್ಷಣ ಮಾತ್ರದಲ್ಲಿ ಇಡೀ ದೇಶದ ದೃಶ್ಯ ಮಾಧ್ಯಮದಲ್ಲಿ ನಿರಂತರ ಪ್ರಚಾರವಾಗುವ ಮೂಲಕ ಸುಳ್ಳು ವರದಿಯ ಒಂದೇ ದಿನದಲ್ಲಿ ವ್ಯಾಪಕವಾಗಿ ಹರಡಿತು. ಮೊದಲು ಸಿಪಿಐ(ಎಂ) ಕಾರ್ಯಕರ್ತರೆಂದು, ಆ ನಂತರ ಡಿವೈಎಫ್‌ಐ ಕಾರ್ಯಕರ್ತರೆಂದು, ಸಿಐಟಿಯು ಕಾರ್ಯಕರ್ತರೆಂದೂ ಪ್ರಚಾರ ಮಾಡಲಾಯಿತು. ನಾವು ಮಂಜೇಶ್ವರದಿಂದ ಕಾಸರಗೋಡು ವರೆಗಿನ ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳನ್ನು ಸಂಪರ್ಕಿಸಿ, ಫ್ಯಾಸಿಸ್ಟರ ಪ್ರಚಾರಗಳು ಸುಳ್ಳೆಂಬುದನ್ನು ಖಾತ್ರಿಪಡಿಸಿದ ನಂತರ ಮಾಧ್ಯಮಗಳಿಗೆ ಸತ್ಯಾಂಶಗಳನ್ನು ತಿಳಿಸಿದೆವು. ಬಂಧಿತರೆಲ್ಲರೂ ಭಜರಂಗ ದಳದ ಸಕ್ರಿಯ ಕಾರ್ಯಕರ್ತರೆಂಬ ಮಾಹಿತಿ ಇದೆ. ಇವರಲ್ಲಿ ಕನಿಷ್ಠ ನಾಲ್ಕು ಮಂದಿ ಈ ಪ್ರಕರಣದಲ್ಲಿ ಪಿತೂರಿಗಾರರು. ಪ್ರಮುಖ ಅಪರಾಧಿಗಳು ಹೊರಗಿದ್ದಾರೆ. ಅವರನ್ನು ಬಂಧಿಸಲಾಗಿಲ್ಲ.

ಎಚ್ಚರಿಕೆಯ ಗಂಟೆ ಬೇಕು





'ಸೌಹಾರ್ದ ಕ್ರಿಸ್‌ಮಸ್'ನಲ್ಲಿ ಪಾಲ್ಗೊಂಡಾಗ ಎಲ್ಲರ ಎದೆಯಂಗಳದಲ್ಲಿ ಪ್ರೇಮದ ಹೊನಲಿತ್ತು. ಕೂಡಿ ಬಾಳುವ ಬಯಕೆಯ ಬೆಳಕಿತ್ತು. ಆರ್ಚ್ ಬಿಷಪ್ ಅವರು "ವಿಶ್ವದ ಶಾಂತಿಗಾಗಿ ಈ ಕ್ರಿಸ್ ಮಸ್‌ನ ಕಾರ್ಯಕ್ರಮ ಸಮರ್ಪಿಸಿದ್ದೇವೆ" ಎಂದು ಅದಮ್ಯ ಶಾಂತಿಯ ಹೆಬ್ಬಯಕೆ ವ್ಯಕ್ತಿಸಿದರು.

ಬರೋಬ್ಬರಿ ಎರಡು ತಿಂಗಳಿಂದ ಬರೆಯಲಾಗುತ್ತಿಲ್ಲ. ಯಾಕೆ? ಕೆಲಸಗಳ ಧಾವಂತ ಹೌದು. ಆದರೆ ಎಲ್ಲ ಕೆಲಸಗಳ ಒತ್ತಡದಲ್ಲೂ ನನ್ನೊಳಗಿನ ಮನಸಲ್ಲಿ ಕತೆ ಹೆಣೆವ ಜೇಡ ಮಾತ್ರ ಎಚ್ಚರವೇ ಇರುತ್ತದೆ. ಡಿಸೆಂಬರ್ 25 ರಂದು ಸಾಯಂಕಾಲ ಸಂತ ಮೇರಿ ಚರ್ಚ್‌ನಲ್ಲಿ ಕೇಕ್ ಕತ್ತರಿಸಿ 'ಸೌಹಾರ್ದ ಕ್ರಿಸ್‌ಮಸ್'ನಲ್ಲಿ ಪಾಲ್ಗೊಂಡಾಗ ಎಲ್ಲರ ಎದೆಯಂಗಳದಲ್ಲಿ ಪ್ರೇಮದ ಹೊನಲಿತ್ತು. ಕೂಡಿ ಬಾಳುವ ಬಯಕೆಯ ಬೆಳಕಿತ್ತು. ಆರ್ಚ್ ಬಿಷಪ್ ಅವರು "ವಿಶ್ವದ ಶಾಂತಿಗಾಗಿ ಈ ಕ್ರಿಸ್ ಮಸ್‌ನ ಕಾರ್ಯಕ್ರಮ ಸಮರ್ಪಿಸಿದ್ದೇವೆ" ಎಂದು ಅದಮ್ಯ ಶಾಂತಿಯ ಹೆಬ್ಬಯಕೆ ವ್ಯಕ್ತಿಸಿದರು. ಫಾದರ್, ಬಿಷಪ್, ಮತ್ತೆಲ್ಲ ಕ್ರೈಸ್ತ ಆತ್ಮೀಯರ ಕೈ ಕುಲುಕಿ 'ಸಂತಸದ ಕ್ರಿಸ್‌ಮಸ್' ಶುಭಾಶಯಗಳನ್ನು ಉಸುರುವಾಗಿ ಅಲ್ಲೊಂದು ನಿರ್ಮಲ ಸ್ನೇಹದ ಸಿಂಚನ ಮಾತ್ರವಿತ್ತು. ಪ್ರೇಮದ ಉಲ್ಲಾಸದ ಪರಿಮಳ ಹರಿದಾಡುತ್ತಿತ್ತು. ನಮ್ಮ ಸಂಘಟನೆಗಳ ಸಂಗಾತಿಗಳು ಒಬ್ಬೊಬ್ಬರೆ ಬಂದು ಸೇರಿ ದೊಡ್ಡ ಸಮೂಹವೇ ನೆರೆದಾಯ್ತು.

'ನಿನ್ನಂತೆ ನಿನ್ನ ನೆರಮನೆಯವರನ್ನೂ ಪ್ರೀತಿಸು' ಎಂದ ಕ್ರಿಸ್ತನು ನೆಲಕ್ಕೆ ಕಣ್ಣಾಲಿಸಿ ಶಿಲುಬೆಯಲ್ಲಿದ್ದನು. ನಮ್ಮ ನೋವು ಅವನ ಕೈಯ ಹನಿ ರಕ್ತದಲ್ಲಿತ್ತು. ಸುತ್ತಲಿನವರನ್ನು ಸ್ನೇಹಿತರನ್ನಾಗಿಸಿ ಕೊಂಡದ್ದರ ಫಲ-ಸಂತಸ ನಾವು ಅನುಭವಿಸುತ್ತಿದ್ದೆವು. "ಹೇ ಪ್ರಭು ಕ್ರಿಸ್ತನೇ ನೀನು ನೋವುಂಡು ನಮಗೆ ಜಗತ್ತನ್ನು ಪ್ರೀತಿಸಲು ಕಲಿಸಿದೆ. ಮತ್ತು ನಿಜದ ಸುಖದ ದಾರಿ ತೋರಿದೆ." ಹರೆಯದ ಸುಕೀರ್ತಿ ನೀಳಗಂಗಳನ್ನು ಮುಚ್ಚಿ ಪ್ರಾರ್ಥಿಸುತ್ತಿದ್ದಳು. ನಾನು ಚರ್ಚಿನ ಎಲ್ಲ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದೆ. ಅದೊಂದು ಅಪೂರ್ವ ಸಂಭ್ರಮದ ದಿನವಾಗಿತ್ತು.

ವೇದಿಕೆಯ ಮೇಲೆ ನಾವು ತಂದ ದೊಡ್ಡ ಕೇಕ್ ಇಟ್ಟು, ಸಮುದಾಯ, ಎಸ್‌ಎಫ್‌ಐ, ಸರಕಾರಿ ನೌಕರರ ಒಕ್ಕೂಟ, ಪ್ರಜ್ಞಾ, ಜನವಾದಿ, ಬಿ.ಜಿ.ವಿ.ಎಸ್. ಸಂಗಾತಿಗಳೊಂದಿಗೆ ಆರ್ಚ್ ಬಿಷಪ್, ಫಾದರ್ ಅವರು ಮತ್ತು ಹಿರಿಯ ಪತ್ರಕರ್ತ ರಂಜಾನ್‌ದರ್ಗಾ ಅವರನ್ನು ವೇದಿಕೆಗೆ ಕರೆದೆವು.

"ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿರುವ ಭಯೋತ್ಪಾದನೆಯ ಕರಿನೆರಳು ಭಾರತದ ಮೇಲೂ ಎರಗುತ್ತಿದೆ. ಜಗತ್ತಿನ ಸಾಮ್ರಾಜ್ಯಶಾಹಿಯು ಭಯೋತ್ಪಾದನೆಯ ಸೃಷ್ಟಿ ಕರ್ತನಾಗಿದೆ. ಭಾರತವನ್ನು ನುಂಗಿ ನೊಣೆಯಲು ಕೋಮುವಾದಕ್ಕೆ ಕುಮ್ಮಕ್ಕು ಕೊಡಲಾಗುತ್ತಿದೆ. ಬಹುಸಂಖ್ಯಾತರ ಕೋಮುವಾದವು ಅಲ್ಪಸಂಖ್ಯಾತರ ಮೂಲಭೂತವಾದದ ಚಟುವಟಿಕೆಗೆ ಪ್ರೇರಣೆಯಾಗುತ್ತಿದೆ. ಈ ರಾಜಕಾರಣಕ್ಕಾಗಿ ಧರ್ಮವನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ ಯಾವ ಧರ್ಮಗಳೂ ಹಿಂಸೆಯನ್ನು ದ್ವೇಷ ಸಂಸ್ಕೃತಿಯನ್ನು ಬೋಧಿಸಲಿಲ್ಲ. ದಯವೇ ಧರ್ಮದ ಮೂಲವೆಂಬುದು, ಹೆಚ್ಚು ಕಡಿಮೆ ಎಲ್ಲ ಧರ್ಮಗಳ ಒಳತಿರುಳು. ಬಹುಸಂಸ್ಕೃತಿಯ ವೈವಿಧ್ಯತೆಯ ಈ ನಾಡು ಎಲ್ಲರದೂ. ಕೂಡಿ ಬಾಳೋಣ. ಪರಸ್ಪರ ಪ್ರೀತಿ-ಸ್ನೇಹ ಹಂಚಿಕೊಳ್ಳೋಣ" ಇವು ವೇದಿಕೆಯ ಮೇಲಿರುವ ಭಾಷಣಕಾರರ ಒಟ್ಟು ಮಾತಿನ ಮರ್ಮವಾಗಿತ್ತು. ದೇಶವನ್ನು ಐಕ್ಯತೆಯಿಂದ ಕಟ್ಟಲಿಕ್ಕಾಗಿ ಈ ಸಾಮರಸ್ಯದ ಪರಂಪರೆಯ ಜರೂರಿಯನ್ನು ಯಾರೂ ಅಲ್ಲಗಳೆಯಲಾರರು. ಪ್ರಾಂಗಣದ ತುಂಬ ಕಿಕ್ಕಿರಿದು ನೆರೆದ ಜನಸ್ತೋಮ ಕರತಾಡನದ ಮೂಲಕ ಬೆಂಬಲ ವ್ಯಕ್ತಪಡಿಸಿದರು.

ಸಮುದಾಯದ ಸಂಗಾತಿಗಳು ಸಮತೆಯ-ಭಾವೈಕ್ಯತೆಯ ಹಾಡುಗಳನ್ನು ಹಾಡುವಾಗ ಇಡೀ ಸಭೆಯೇ ಏಕತೆಯಿಂದ ತಲೆದೂಗುತ್ತಿತ್ತು. ಫಾದರ್ ವಿಕ್ಟರ್ ನಮಗೆಲ್ಲ ಕೇಕ್ ಕೊಟ್ಟು ವಂದನೆ ಹೇಳಿದರು. ಕ್ರಿಸ್‌ಮಸ್ ಸಂಭ್ರಮಾಚರಣೆಯ ವೇದಿಕೆಯ ಮೇಲೆ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಂಡವು. ಶ್ವೇತಾಂಬರಧಾರಿ ಪುಟ್ಟ ಮಕ್ಕಳು ಪಾತರಗಿತ್ತಿಯಂತೆ ರೆಕ್ಕೆ ಬಿಚ್ಚಿ ಹಾಡಿ ನಲಿದರು. ಏಸುಕ್ರಿಸ್ತನ ಜನ್ಮದಿನದ ಪ್ರಸಂಗವನ್ನು ಸಾದರಪಡಿಸಿದರು. ಮಾನವೀಯತೆಯೇ ನಿಜದ ಧರ್ಮವೆಂಬ ಅರ್ಥದ ಬಾಂಗ್ಡಾ ನೃತ್ಯ ಎಲ್ಲರ ಮನ ಸೂರೆಗೊಂಡಿತು. ನಮಗ್ಯಾರಿಗೂ ಎದ್ದು ಹೋಗುವ ಮನಸಾಗಲೇ ಇಲ್ಲ.

ಸಾಂಸ್ಕೃತಿಕ ಲೋಕಕ್ಕೆ ಅಗಾಧ ಶಕ್ತಿ ಸಾಧ್ಯತೆಗಳಿವೆ. ಹೃದಯದಿಂದ ಮಾತನಾಡುವುದನ್ನು ಬದುಕುವುದನ್ನು ಕಲಿಸುವ ತಾಕತ್ತಿರುವುದು ಈ ಸಾಂಸ್ಕೃತಿಕ ಲೋಕಕ್ಕೆ, ಈ ಸಮರ್ಥ ಮಾಧ್ಯಮವನ್ನು ಕಡೆಗಣಿಸಿ ಏನೂ ಮಾಡಲಾಗದು. ತಲೆಯಲ್ಲಿ ಚಿಂತನೆಗಳು ರಿಂಗಣಿಸುತ್ತಿದ್ದವು.

ಮಂಗಳೂರಿನಲ್ಲಿ ಯುವಕ- ಯುವತಿಯರು ಪಬ್‌ಗೆ ಹೋಗುತ್ತಿರುವುದನ್ನು ತಡೆಗಟ್ಟಲು ಶ್ರೀರಾಮ ಸೇನೆಯ ಗೂಂಡಾಗಳು ಯುವತಿಯರ ಮೇಲೆ ದೌರ್ಜನ್ಯ ಎಸಗಿದ ಪ್ರಕರಣವನ್ನು ಪ್ರತಿಭಟಿಸಿ ನಡೆಸಲಾದ ಹೋರಾಟಕ್ಕೆ ಸಾಹಿತಿಗಳು-ಕಲಾವಿದರು, ವಿದ್ಯಾರ್ಥಿಗಳು, ಅಣಿನೆರೆದು, ಶ್ರೀರಾಮಸೇನೆಯನ್ನು ನಿಷೇಧಿಸಬೇಕೆಂದು ಒತ್ತಾಯಿಸಿದರು. ಕಾನೂನು ಉಲ್ಲಂಘಿಸಿದ ಸೇನೆಯ ಪ್ರಮುಖ ಮತ್ತು ಅದರ ಕಾರ್ಯಕರ್ತರನ್ನು ಬಂಧಿಸಬೇಕೆಂದು ಆಗ್ರಹಿಸಿದರು.

ಗೆಳತಿ ಸಂಧ್ಯಾ ಹೇಳುತ್ತಿದ್ದಳು. ಈ ಪ್ರಕರಣದ ಬಗ್ಗೆ ಅವಳ ಮಗ ದೂರದ ಊರಿಂದ ಫೋನ್ ಮಾಡಿ, "ಅಮ್ಮಾ ನಿನ್ನ ಅಭಿಪ್ರಾಯವೇನು?" ಕೇಳಿದನಂತೆ. "ಹೆಣ್ಮಕ್ಕಳ ಮೇಲೆ ಕೈ ಮಾಡಿದ್ದು ತಪ್ಪು ಮಗ.." ಅಂದಳಂತೆ. "ಆದ್ರೆ ಹುಡಗೀರು ಹೀಗೆಲ್ಲ ಪಬ್-ಹೋಟೇಲ್‌ಗೆ ಹೋಗೂದು ನಮ್ಮ ಸಂಸ್ಕೃತಿಗೆ ಅಪಮಾನ.." ಅಂದಿದ್ದಕ್ಕೆ ಇವಳು, "ಹುಡುಗರು ಹೋದ್ರೆ ಸರೀನಾ..."? ಮಗ ಮೌನವಾದ. ಆದರೆ ಮಗನಿಗೆ ಅನ್ನಿಸಲೇ ಇಲ್ಲ. ಯಾವುದೇ ವ್ಯಕ್ತಿಯ ವೈಯಕ್ತಿಕ ಅಭಿಪ್ರಾಯಕ್ಕೆ ಧಕ್ಕೆ ತರುವುದು ಮತ್ತು ದೌರ್ಜನ್ಯ ಎಸಗುವುದು ಅಮಾನವೀಯ ಅಪರಾಧ, ಕ್ರೌರ್ಯದ ಮನಃಸ್ಥಿತಿ ಎಂಬುದು. ಫ್ಯಾಸಿಸ್ಟ್‌ನ ಕ್ರೂರ ಜಾಲ ಕರ್ನಾಟಕದಲ್ಲಿ ಹಬ್ಬುತ್ತಿದೆ. ಮೆಲ್ಲ-ಮೆಲ್ಲಗೆ ಹೆಡೆಯೆತ್ತುತ್ತಿದೆ. ಬೇಗ ಎಚ್ಚೆತ್ತು ಹಣಿಯದಿದ್ದರೆ ಎಲ್ಲರ ಮನೆ ಬಾಗಿಲಿಗೂ ಒಡಲ ಉಡಿಗೂ ಬೆಂ[illegible] ಬರುವುದು ತಪ್ಪದು.

ಬೆನ್ನ ಹಿಂದೆಯೇ ಮಂಜೇಶ್ವರ ಶಾಸಕರ ಪುತ್ರಿ ಮತ್ತವಳ ಗೆಳೆತಿಯ ಸೋದರನ ಅಪಹರಣ ನಡೆದಿದೆ. ಮುಸ್ಲಿಂ ಎಂಬ ಕಾರಣಕ್ಕೆ ಆ ಯುವಕನು ಹೆಚ್ಚು ದಾಳಿಗೆ ಒಳಗಾಗಿರುವನು. ಈಗೆ ಹಿಂದು ಆತನ ಮುಸ್ಲಿಂ, ಜೊತೆಗೆ ಓಡಾಡಿದ್ದಕ್ಕೆ ಸಂಘ ಗ್ಯಾಂಗು ದಾಳಿ ಮಾಡಿದೆ. ಇದು ಇಂದು ನಿನ್ನೆಯ ಬೆಳವಣಿಗೆಯಲ್ಲ. ಮಂಗಳೂರಿನ ಯಾವುದೇ ಶಾಲಾ ಕಾಲೇಜಿನ ಆವರಣದಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಹಿಂದೂ-ಮುಸ್ಲಿಂ-ಕ್ರೈಸ್ತ ಯುವಕರು-ವಿದ್ಯಾರ್ಥಿಗಳು ಪರಸ್ಪರ ಮಾತು ಸಹ ಆಡಬಾರದು. ಎಲ್ಲ ಕಡೆ ಸಂಘದ ಎಲ್ಲ ಸಂಘದ ಪೋಕರಿಗಳು ಗಸ್ತು ತಿರುಗುತ್ತಿರುತ್ತಾರೆ. ಕಂಡ ಕೂಡಲೇ ಹಿಂದೂ ವ್ಯಕ್ತಿಯನ್ನು ಛೀಮಾರಿ ಹಾಕುತ್ತಾರೆ ಮತ್ತು ಮುಸ್ಲಿಂ ಕ್ರಿಶ್ಚಿಯನ್‌ರಾಗಿರುವ ವ್ಯಕ್ತಿಯ ಮೇಲೆ ಬಾಬ[illegible] ಹಲ್ಲೆ ಮಾಡುತ್ತಾರೆ.

ಕಡಲ ಕಿನಾರೆಯಿಂದ ಸಾಹಿತಿ ಗೆಳತಿಯೊಬ್ಬಳು ಫೋನಾಯಿಸಿ ಹೇಳುತ್ತಿದ್ದಳು. "ಇಲ್ಲಿ ಒಂದೇ ಒಂದು ಜೀವಪರ, ಪ್ರಗತಿಪರ ಮಾತಾಡೋ ಹಾಗಿಲ್ಲ. ಮನೆಗೆ ಬಂದು ಧಮಕಿ ಹಾಕುತ್ತಾರೆ. ಆರೆಸ್ಸೆಸ್, ಭಜರಂಗದಳ ಕಾಟ ಮಿತಿ ಮೀರಿದೆ." ಈ ಗೆಳತಿಯ ಮಾತಿಗೆ ಸಾಕ್ಷಿಯಾಗಿ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ನ್ಯಾ.ಎಸ್.ಆರ್.ನಾಯಕ್‌ಅವರ ಮಂಗಳೂರು ಭೇಟಿ ತರುವಾಯದ ವರದಿ ಪುಷ್ಟೀಕರಿಸುತ್ತದೆ.

ಡಾ: ಕಾಶಿನಾಥ ಅಂಬಲಗಿಯವರು ತುಂಬ ಆತಂಕಿತರಾಗಿ ಹೇಳುತ್ತಿದ್ದರು. "ಮಂಗಳೂರಿನಿಂದ ಬೀಸುತ್ತಿರುವ ವಿಷ ಗಾಳಿ ಧಾರವಾಡ ಬೆಳಗಾವಿಗೂ ಬಂದಿದೆ. ರಾಜ್ಯಾದ್ಯಂತ ಪಸರಿಸುವ ಮುನ್ನ ಏನಾದರೂ ಮಾಡೋಣ, ನಾಚಿಗ್ಗೇಡಿ ಸರ್ಕಾರಕ್ಕೆ ಬುದ್ದಿ ಹೇಳಲೇಬೇಕು" ನಾನು ಸುವ[illegible] ಪ್ರಸ್ತಾಪಿಸಿದೆ, "ನಡೀರಿ ಪ್ರಜ್ಞಾವಂತರೆಲ್ಲ ಮಂಗಳೂರಿಗೆ ಸಂಘ ಪರಿವಾರದ ಪುಂಡಾಟಿಕೆಗೆ ಎಚ್ಚರಿಕೆ ಕೊಡೋಣ... ಅಲ್ಲೇ ಒಂದು ಬಹಿ[illegible] ಸಭೆ ಮಾಡೋಣ. ಜಾತ್ಯಾತೀತ ಪರಂಪರೆಗೆ ಧಕ್ಕೆ ಮಾಡಲು ಬಿಡುವುದಿಲ್ಲ ಎಂದು ಸಾರೋಣ..." ಅವರು ಮತ್ತು ಬಳಗ ಪೂರ್ತಿ "ಓ ಹೋಗೋಣ್ರೀ.." ಇದು ಖುಷಿಯಿಂದ ನುಡಿದರು.

ಮುಗಿಯಿತು.

'ಅವರು ಕೊಡೋದಿಲ್ಲ ನಾವು ಬಿಡೋದಿಲ್ಲ'



ಪುಟ 4 ರಿಂದ

ದಿನ ನಡೆದು 14, 2009 ರಂದು ಸಂಕ್ರಾಂತಿ ಹಬ್ಬದ ದಿನ ತಾತ್ಕಾಲಿಕವಾಗಿ ಲಿಖಿತ ಭರವಸೆ ಪಡೆದು ಫಲಪ್ರದವಾಗಿ ಮುಕ್ತಾಯ ಗೊಳಿಸಲಾಯಿತು.

ಧರಣಿಯನ್ನು ಪ್ರಾಂತ ರೈತ ಸಂಘದ ರಾಜ್ಯಸಮಿತಿ ಅಧ್ಯಕ್ಷ ಕಾಂ.ಮಾರುತಿ ಮಾನ್ಪಡೆಯವರು ಉದ್ಘಾಟಿಸಿ ಮಾತನಾಡಿ ಜೋಯಿಡಾವನ್ನು ಆಳುವ ಸರಕಾರಗಳು ಮರೆತಿವೆ. ದಶಕಗಳಿಂದಲೂ ನಮ್ಮ ಸಂಘ ಇಲ್ಲಿನ ಜನತೆಯ ಸಮಸ್ಯೆಯನ್ನು ಸರಕಾರದ ಗಮನಕ್ಕೆ ತರುತ್ತಿದೆ. ಬೆಂಗಳೂರು, ಸಿಂಗಾಪುರ ಮಾಡುವ ಮಾತನಾಡುತ್ತಿದ್ದಾರೆ. ಕರ್ನಾಟಕವನ್ನು ಗುಜರಾತ್ ಮಾಡುವ ಮಾತನಾಡುತ್ತಿದ್ದಾರೆ. ಆದರೆ ಅತಿ ಹಿಂದುಳಿದ ಜೊಯಿಡಾ ತಾಲ್ಲೂಕಿಗೆ ಕನಿಷ್ಠ ನಾಗರೀಕ ಸೌಲಭ್ಯ ಒದಗಿಸಲು ಸಾಧ್ಯವಾಗದೇ ಇದ್ದುದಕ್ಕೆ ನಾಚಿಕೆಯಾಗಬೇಕು ಎಂದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕ, ಅಧ್ಯಕ್ಷರಾದ ಮಂಜುನಾಥ ಪುಲ್ಕರ್, ರೈತ ಮುಖಂಡ ವಿಷ್ಣು ನಾಯ್ಕ, ಕಾರ್ಮಿಕ ಮುಖಂಡರಾದ ಯಮುನಾ ಗಾಂವ್ಕಾರ್, ಎಸ್.ವಿ.ಸಾವಂತ, ಹರೀಶ್ ನಾಯ್ಕ, ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಡಿ.ಶ್ಯಾಮಸನ್, ಕಾರ್ಮಿಕ ಮುಖಂಡ ಹೆಚ್.ಬಿ.ನಾಯಕ್, ಕಾರವಾರ ತಾಲ್ಲೂಕು ರೈತ ಸಂಘ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ, ತಾಲ್ಲೂಕು ಅಧ್ಯಕ್ಷ ನಾಯಕ ವೇಳೀಪ್, ಕಾರ್ಯದರ್ಶಿ ಪ್ರೇಮಾನಂದ ವೇಳಿಪ್ ಮುಂತಾದವರು ಉಪಸ್ಥಿತರಿದ್ದರು.

ತಹಶೀಲ್ದಾರ್ ಹಸನ್‌ಮುಲ್ಲಾ ಬೇಡಿಕೆಗಳ ಬಗ್ಗೆ ತೀವ್ರ ಗಮನಹರಿಸಿ ಎಲ್ಲಾ ಅಧಿಕಾರಿಗಳ ಜೊತೆ ಸೇರಿ 3 ದಿನ ರೈತ ಮುಖಂಡರೊಂದಿಗೆ

ಬಸ್‌ದರ ಇಳಿಕೆ ಎಂಬ ಮಹಾ ಮೋಸ

ಈಗಿರುವ ಡಿಸೆಲ್ ದರ 2005ರಲ್ಲಿ ಇದ್ದುದಕ್ಕಿಂತ ಕಡಿಮೆ. ಆದರೆ ಬಿಜೆಪಿ ಸರ್ಕಾರವು ಬಸ್ ದರವನ್ನು ಕಡಿತ ಮಾಡಿದೆ ಎಂದು ಹೇಳಿದರೂ ವಾಸ್ತವವಾಗಿ ಮುಂಗೈಗೆ ಬೆಲ್ಲ ಸವರಿದಂತಾಗಿದೆ. ಬೆಂಗಳೂರಿನ ಜಯನಗರದಲ್ಲಿರುವ ಸಾರಿಗೆ ಸಂಸ್ಥೆಗೆ ಸೇರಿದ ಅತಿಥಿಗೃಹದ ಮೈದಾನಿನಲ್ಲಿ ಆರ್‌ಎಸ್‌ಎಸ್ ಶಾಖೆ ನಡೆಸಲು ಅನುಮತಿ ನೀಡಿರುವ ಸಚಿವ ಅಶೋಕರಿಗೆ ಕೋಮು ಅಜೆಂಡಾಕ್ಕೆ ಪ್ರಥಮ ಆದ್ಯತೆ. ಜನಸಾಮಾನ್ಯರ ಬವಣೆಗಳು ಅವರಿಗೆ ಅರ್ಥವಾಗುವುದಿಲ್ಲ.

ಫೆಬ್ರವರಿ 5ನೇ ತಾರೀಖಿನಿಂದ ಜಾರಿಗೆ ಬರುವಂತೆ ಬಸ್‌ದರ ಇಳಿಸಿದ ಬಿಜೆಪಿ ಸರ್ಕಾರದ ಕ್ರಮವು ಮಹಾ ಮೋಸ ಎಂಬುದು ಜಗಜ್ಜಾಹೀರಾಗಿದೆ. ಡಿಸೆಂಬರ್ 2008ರಲ್ಲಿ ಮತ್ತು ಜನವರಿ 2009ರಲ್ಲಿ ಎರಡು ಬಾರಿ ಪೆಟ್ರೋಲ್, ಡೀಸೆಲ್ ದರ ಕಡಿಮೆಯಾಗಿದೆ. ಸಾರಿಗೆ ಬಸ್‌ಗಳಿಗೆ ಉಪಯೋಗಿಸುವುದು ಡೀಸೆಲ್. ಅದರ ಬೆಲೆ [illegible]ರ್‌ಗೆ 2 ರೂ.ನಂತೆ ಒಟ್ಟು 4 ರೂ. [illegible] ಆಗಿದೆ. ತೆರಿಗೆ ಸೇರಿದರೆ ಒಟ್ಟು ರೂ.4.96 ಕಡಿಮೆ ಆಗಿದೆ. 2008ರ ಡಿಸೆಂಬರ್ ಮೊದಲು ಬೆಂಗಳೂರಿನಲ್ಲಿ ಲೀಟರಿಗೆ 39.76 ರೂ. ಇದ್ದ ಬೆಲೆ ಈಗ ರೂ.34.80ಕ್ಕೆ ಇಳಿದಿದೆ. ಶೇಕಡವಾರು ಲೆಕ್ಕದಲ್ಲಿ 12.47 ಕಡಿಮೆ ಆಗಿದೆ. ಆದರೆ ಬಸ್ ದರ ಇಳಿಕೆ?

ಸಾರಿಗೆ ಮಂತ್ರಿ ಆರ್.ಅಶೋಕ್‌ರವರೇ ಪ್ರಕಟಿಸಿದ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಶೇ.6.7, ಎಕ್ಸ್‌ಪ್ರೆಸ್ ಬಸ್ಸುಗಳಲ್ಲಿ ಶೇ.2.7 ರಷ್ಟು ಕಡಿಮೆ ಮಾಡಿದ್ದಾರೆ. ರಾಜಹಂಸ ಮತ್ತು ಐರಾವತ ಬಸ್ಸುಗಳಿಗೆ ದರ ಇಳಿಕೆ ಇಲ್ಲವೇ ಇಲ್ಲ. ಬೆಂಗಳೂರು ನಗರ(ಬಿಎಂಟಿಸಿ) ಬಸ್‌ದರಗಳಲ್ಲಿ ಇಳಿಕೆ ಕೇವಲ



ಶೇ.3.5 ಮಾತ್ರ. ಡೀಸೆಲ್ ಬೆಲೆ ಹೆಚ್ಚಾದಾಗ ತೀವ್ರ ದರ ಏರಿಕೆ ಮಾಡುವ ಸರ್ಕಾರ ಇಳಿಕೆಯಾದಾಗ ಮಾತ್ರ ಅದರ ಪೂರ್ಣ ಪ್ರಮಾಣವನ್ನು ಜನರಿಗೆ ನೀಡುತ್ತಿಲ್ಲ.

ಹಾಗೆ ನೋಡಿದರೆ ಇವತ್ತಿನ ಡೀಸೆಲ್ ದರ 2005ರ ದರಕ್ಕಿಂತ ಕಡಿಮೆ ಇದೆ. 2005ರಲ್ಲಿ ಡೀಸೆಲ್ ದರ ಲೀಟರ್‌ಗೆ ರೂ.35.26 ಇತ್ತು. ಆದರೆ ಬಸ್‌ದರ? ಕೋಷ್ಟಕ ಒಂದು ಮತ್ತು ಎರಡನ್ನು ನೋಡಿ. ಜೂನ್ 2006ರಲ್ಲಿ ಡೀಸೆಲ್ ದರ ಲೀಟರಿಗೆ 37.51ಇತ್ತು. ಎಕ್ಸ್‌ಪ್ರೆಸ್ ಬಸ್ ದರ ಬೆಂಗಳೂರಿನಿಂದ ಮೈಸೂರಿಗೆ ರೂ.64 ಇತ್ತು. ಆದರೆ ಈಗ ದರ ಇಳಿಕೆಯ ನಂತರ ರೂ. 77 ಆಗಿದೆ. ಹಾಗೆಯೇ ಗುಲ್ಬರ್ಗಾಕ್ಕೆ 290 ಇದ್ದುದು 358ಕ್ಕೆ ಏರಿದ್ದು ಈಗ 348 ಆಗಿದೆ. ಕೇವಲ 10 ರೂ. ಕಡಿಮೆ ಆಗಿದೆ. ಇದು ಮೋಸವಲ್ಲದೆ ಇನ್ನೇನು?

ಅದೇ ರೀತಿ ಬೆಂಗಳೂರಿನ ಬಿಎಂಟಿಸಿ ಬಸ್ಸುಗಳಲ್ಲಿ ಮಾಸಿಕ ಪಾಸ್‌ದರ ಆಗಸ್ಟ್ 2007ರಲ್ಲಿದ್ದುದಕ್ಕಿಂತ ಈಗ 16 ರಿಂದ 20 ಶೇಕಡ ಹೆಚ್ಚಾಗಿದೆ. ದೈನಂದಿನ ಪಾಸ್‌ನಲ್ಲಿ ಶೇಕಡಾ 20 ಹೆಚ್ಚಾಗಿತ್ತು. ಆದರೆ ಈ ಬಾರಿ ಡೀಸೆಲ್ ದರ ಬಹಳಷ್ಟು ಕಡಿಮೆ ಆಗಿದ್ದರೂ ದೈನಂದಿನ ಪಾಸ್ ದರವಾಗಲೀ ಮಾಸಿಕ ಪಾಸ್ ದರವಾಗಲಿ ಕಡಿಮೆಯಾಗಿಲ್ಲ. ಮಾತ್ರವಲ್ಲ, ಮೇಲ್ ಮಧ್ಯಮವರ್ಗದವರು ಪ್ರಯಾಣಿಸಬಹುದಾದ ವಜ್ರ ಬಸ್ಸುಗಳ(ವೋಲ್ವೋ) ದರದಲ್ಲಿ ಶೇ.20ರಷ್ಟು ಕಡಿಮೆ ಮಾಡಿರುವುದಾಗಿ ಆರ್.ಅಶೋಕ್ ರವರು ಪ್ರಕಟಿಸಿದರು. ಆದರೆ ವಾಸ್ತವವಾಗಿ 1ನೇ ಹಂತದ ದರದಲ್ಲಿ ಮಾತ್ರ ರೂ.10 ಇದ್ದುದನ್ನು 5 ಕ್ಕೆ ಇಳಿಸಲಾಗಿದೆ. ಉಳಿದ ಹಂತಗಳಲ್ಲಿ ದರ ಕಡಿಮೆ ಆಗಿಲ್ಲ. ಆದ್ದರಿಂದಲೇ ವಜ್ರ ಬಸ್‌ನಲ್ಲಿ ಪ್ರಯಾಣಿಸುವವರು ಸರಾಸರಿ 5 ರಿಂದ 10 ಜನ ಮಾತ್ರ. ಆದರೂ ಹೊಸ ಬಸ್ಸುಗಳನ್ನು ಸೇರಿಸುತ್ತಲೇ ಇದ್ದಾರೆ. ಯಾಕೆಂದು ಗೊತ್ತಿಲ್ಲ.

ಖಾಸಗಿ ಬಸ್ಸುಗಳ ಕೈವಾಡ?:

ಲಕ್ಸುರಿ ಬಸ್ಸುಗಳ ದರವನ್ನು ಕಡಿಮೆ ಮಾಡದಿರಲು ಖಾಸಗಿ ಬಸ್ಸು ಮಾಲಕರ ಒತ್ತಡವೇ ಕಾರಣ ಎಂದು ಜನರು ಮಾತನಾಡುತ್ತಿದ್ದಾರೆ. ದೂರದ ಊರುಗಳಿಗೆ ಹೋಗುವ ಬಸ್ಸುಗಳಲ್ಲಿ ಸಮಾನಾಂತರವಾಗಿ ಖಾಸಗಿ ಬಸ್ಸುಗಳು ಓಡಾಡುತ್ತಿವೆ. ಖಾಸಗಿ ಬಸ್ಸು ಮಾಲೀಕರ ಸಂಘಗಳು ರಾಜಕೀಯವಾಗಿ ಪ್ರಭಾವವನ್ನು ಹೊಂದಿವೆ. ಆರ್ಥಿಕವಾಗಿಯೂ ಕೂಡ. ಕರಾವಳಿ ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡುತ್ತೇವೆ ಎಂದು ಬೆದರಿಸಿದ ಸಾರಿಗೆ ಮಂತ್ರಿಗಳು ಈಗ ತೆಪ್ಪಗಿದ್ದಾರೆ ಏಕೆ? ರಸ್ತೆಗಳನ್ನೇ ಖಾಸಗಿಯವರಿಗೆ ಒತ್ತಾಸೆ [illegible] ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುತ್ತ[illegible]? [illegible] ಗುಡುಗಿದ ಆರ್. ಅಶೋಕ್ ಈಗ ತೆಪ್ಪಗಿರಲು ಕಾರಣ? ಈ ಮಧ್ಯೆ 'ಸೂಟ್‌ಕೆಸ್' ಬದಲಾವಣೆ ಆಗಿದೆಯಾ ಎಂದು ಬೆಂಗಳೂರಿನ ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಕೋಷ್ಟಕ -2

ಡೀಸೆಲ್ ದರ (ಪ್ರತಿ ಲೀಟರಿಗೆ)

2005	35.26
2006	37.51
2008 ಡಿಸೆಂಬರ್‌ಗಿಂತ ಮೊದಲು	39.76
2008 ಡಿಸೆಂಬರ್ 2009 ಜನವರಿ	36.97
2009(ಜನವರಿಯಿಂದ)	34.80

ಅಶೋಕ ಉವಾಚ

ಸಾರಿಗೆ ಮಂತ್ರಿ ಆರ್. ಅಶೋಕರವರು ಜನವರಿ 31 ರಂದು ಮಾಧ್ಯಮದವರೊಂದಿಗೆ ಮಾತನಾಡುತ್ತಾ, ಕೇಂದ್ರ ಸರ್ಕಾರವು ಏಪ್ರಿಲ್ 1, 2002 ರಿಂದ 23 ಬಾರಿ ಡೀಸೆಲ್ ದರವನ್ನು ಹೆಚ್ಚಿಸಿದೆ ಎಂದು ಹೇಳಿದ್ದಾರೆ. ಇದು ಸತ್ಯ. ಆದರೆ ಇದರಲ್ಲಿ ಬಹುಪಾಲು ದರ ಏರಿಕೆಗೆ ಅಶೋಕರವರ ಬಿಜೆಪಿಯೇ ಕಾರಣ. 2002, ಏಪ್ರಿಲ್ 1 ರಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿತ್ತು. 2002 ರಲ್ಲಿ ಡೀಸೆಲ್ ಲೀಟರಿಗೆ ರೂ.20.61 ಇದ್ದದ್ದು 2004ರಲ್ಲಿ ರೂ.30 25ಕ್ಕೆ ಏರಿತ್ತು. ಅಂದ ಮಾತ್ರಕ್ಕೆ ಕಾಂಗ್ರೆಸ್ ಪಕ್ಷದವರು ತಪ್ಪು ಮಾಡಿಲ್ಲವೆಂದೇನಲ್ಲ. ಅವರು ಕೂಡ ಸಾಕಷ್ಟು ದರ ಹೆಚ್ಚಿಸಿದ್ದಾರೆ. ಆದರೆ 2004ರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಸಾಕಷ್ಟು ಏರಿದ್ದರೂ ಸರ್ಕಾರಕ್ಕೆ ಬೆಂಬಲ ನೀಡುತ್ತಿದ್ದ ಎಡಪಕ್ಷಗಳ ವಿರೋಧದಿಂದಾಗಿ ಹೆಚ್ಚು ಏರಿಸಲು ಸಾಧ್ಯವಾಗಿರಲಿಲ್ಲ. ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆಗಳು ತೀವ್ರ ಕುಸಿತಗೊಂಡಿದ್ದರೂ ಅದಕ್ಕೆ ಸಮನಾಗಿ ದರ ಕಡಿತ ಮಾಡಿಲ್ಲ.

ಆದ್ದರಿಂದ ಆಳುವ ವರ್ಗದ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಜನ ಸಾಮಾನ್ಯರ ನೆನಪಾಗುವುದು ಚುನಾವಣೆ ಸಂದರ್ಭದಲ್ಲಿ ಮಾತ್ರ ಅವರ ನೀತಿ ನಿರೂಪಣೆಗಳು ಶ್ರೀಮಂತರ ಪರವಾಗಿಯೇ ಇರುತ್ತವೆ.

ರಾಜ್ಯ ಸರ್ಕಾರದ ಬಸ್ ದರ ಇಳಿಕೆಯ ವಂಚನೆಯ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ, ಪ್ರಚಾರ ಅಗತ್ಯ.

ಕೋಷ್ಟಕ-1

ಬೆಂಗಳೂರಿನಿಂದ ಪ್ರಮುಖ ಊರುಗಳಿಗೆ ಎಕ್ಸ್‌ಪ್ರೆಸ್ ಬಸ್ ದರ

	11.06.06ಕ್ಕೆ ಮೊದಲು	29.08.08 ಕ್ಕೆ ಮೊದಲು	ಆಗಸ್ಟ್29,2008 ರಿಂದ ಫೆಬ್ರವರಿ 4ರವರೆಗೆ	ಫೆಬ್ರವರಿ 5,2009ರ ನಂತರ
ಮೈಸೂರು	64	70	79	77
ಮಂಗಳೂರು	163	177	201	195
ಹುಬ್ಬಳ್ಳಿ	188	205	233	227
ಮಂಡ್ಯ	44	48	54	53
ಗುಲ್ಬರ್ಗಾ	290	316	358	348
ಬಳ್ಳಾರಿ	145	158	179	174
ಶಿವಮೊಗ್ಗ	128	139	158	154
ಬೆಳಗಾಂ	232	253	286	278

ಆಧಾರ:ಸಂಯುಕ್ತ ಕರ್ನಾಟಕ 11.06.06
ದಿ ಹಿಂದೂ 02.02.09

ಕೋಷ್ಟಕ -3

ಬೆಂಗಳೂರಿನ ಸಿಟಿ ಬಸ್‌ಗಳಲ್ಲಿ ಮಾಸಿಕ ದೈನಂದಿನ ಬಸ್ ಪಾಸ್ ದರ

	13.08.74 ಮೊದಲು	13.08.2007 ರಿಂದ 28.01.2008ರವರೆಗೆ	29.01.2008ರಿಂದ
ದೈನಂದಿನ ಪಾಸ್	25.00	30.00	30.00
ಕಪ್ಪು ಬೋರ್ಡ್ ಪಾಸ್	360.00	380.00	420.00
ಕೆಂಪು ಬೋರ್ಡ್ ಪಾಸ್	495.00	525.00	565.00
ಮಾಸ್ಟರ್	530.00	560.00	600.00

ನಿರಂತರವಾಗಿ ಚರ್ಚಿಸಿ ಲಿಖಿತ ಭರವಸೆ ನೀಡಿದ ನಂತರ ಧರಣಿ ಹಿಂತೆಗೆದುಕೊಳ್ಳಲಾಯಿತು.

ತಹಶೀಲ್ದಾರ್ ಕಛೇರಿ ಆವರಣದಲ್ಲೇ ಊಟ, ವಸತಿಯನ್ನು ಸುಮಾರು 500 ಜನ ರೈತರು 3 ದಿನ ನಡೆಸಿ ಆಡಳಿತ ವರ್ಗಕ್ಕೆ ಬಿಸಿ ಮುಟ್ಟಿಸುವಲ್ಲಿ ಯಶಸ್ವಿಯಾಯಿತು. ಸ್ಥಳೀಯ ಎಂ.ಎಲ್.ಎ ಸುನಿಲ್ ಹೆಗಡೆ, ಝಡ್.ಪಿ. ಸದಸ್ಯ ವಿಲಾಸ ನಾಯ್ಕ, ಕಾಂಗ್ರೆಸ್ ಯುವ ಮುಖಂಡ ಪ್ರಶಾಂತ ದೇಶಪಾಂಡೆ ಧರಣಿನಿರತ ರೈತರ ಜೊತೆ ನಿರಂತರವಾಗಿ 2ರಿಂದ 3 ತಾಸು ಧರಣಿ ಸ್ಥಳದಲ್ಲಿ ಕುಳಿತು ಚರ್ಚಿಸಿರುವುದು ಹೋರಾಟದ ಗಂಭೀರತೆಯನ್ನು ಆಡಳಿತಕ್ಕೆ ಮುಟ್ಟಿಸಲು ಯಶಸ್ವಿಯಾದ್ದಕ್ಕೆ ಉದಾಹರಣೆಯಾಗಿದೆ.

ಹೋರಾಟದ ಗೆಲುವಿನೊಂದಿಗೆ ಹೋರಾಟದ ಟೆಂಟ್‌ನಲ್ಲೇ ಸಂಕ್ರಾಂತಿ ಆಚರಿಸಿ ಸಿಹಿ ಊಟ ಮಾಡಿ ಧರಣಿ ಅಂತ್ಯಗೊಳಿಸಲಾಯಿತು.

ಹೋರಾಟದ ನೇತ್ರತ್ವವನ್ನು ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಮಂಜುನಾಥ ಪುಲ್ಕರ್ ಕಾರ್ಯದರ್ಶಿ ಶಾಂತಾರಾಮ ನಾಯಕ, ಕಾರ್ಮಿಕ ಮುಖಂಡರಾದ ಯಮುನಾ ಗಾಂವ್ಕರ್, ತಾಲ್ಲೂಕು ರೈತ ಮುಖಂಡರಾದ ನಾರಾಯಣ ವೇಳೀಪ, ಪ್ರೇಮಾನಂದ ವೇಳೀಪ, ರಾಜೇಶ್ ಗಾವುಡಾ, ದಿಗಂಬರ ದೇಸಾಯಿ, ಶಾಂತಾ ವೇಳಿಪ ಮುಂತಾದವರು ವಹಿಸಿದ್ದರು.

ಸಿಪಿಎಂ ಶಾಸಕರ ಪುತ್ರಿಯ ಅಪಹರಣ ಕುರಿತು

ಪುಟ 9 ರಿಂದ

11 ಗಂಟೆಗೆ ಪರೀಕ್ಷೆ ಮುಗಿದೊಡನೆ ಕಾಲೇಜು ಆವರಣದಲ್ಲಿ ಸೇರಿ ಪ್ರಬಲ ಪ್ರತಿಭಟನೆ ನಡೆಸಿದರು. ಅಂದು ಅಪರಾಹ್ನ ಮಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸಮುದಾಯ ಸಾಂಸ್ಕೃತಿಕ ಸಂಘಟನೆಯ ಆಶ್ರಯದಲ್ಲಿ ಕಲಾವಿದರು, ಸಾಹಿತಿಗಳು, ಪ್ರಾಧ್ಯಾಪಕರು, ವಕೀಲರು ಹಾಗೂ ಮಧ್ಯಮ ವರ್ಗದ ಜನರಿಂದ ಪ್ರಬಲ ಪ್ರತಿಭಟನಾ ಪ್ರದರ್ಶನ ಮತ್ತು ಸಭೆ ನಡೆಯಿತು. ಅನೇಕ ಮಂದಿ ಪ್ರಖ್ಯಾತ ಬುದ್ಧಿ ಜೀವಿಗಳು ಆ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿಯಿಂದ ಪತ್ರಿಕಾಗೋಷ್ಠಿ ನಡೆಸಿ, ಅಪರಾಧಿಗಳನ್ನು ತಕ್ಷಣ ಬಂಧಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು. ಸಂಘ ಪರಿವಾರದ ತಾಲಿಬಾನ್ ಕೃತ್ಯಗಳನ್ನು ಬಿ.ಮಾಧವ ಮತ್ತು ಜಿ.ಎನ್.ನಾಗರಾಜ್ ಅವರು ಪತ್ರಿಕಾಗೋಷ್ಠಿಯಲ್ಲಿ ಖಂಡಿಸಿದರು.

ಬಂಧಿತರಲ್ಲಿ ಒಬ್ಬನಾಗಿರುವ ಬಸ್ ಕಂಡಕ್ಟರ್ ಸತೀಶನ ತಂದೆ ಕರಿಯಪ್ಪಶೆಟ್ಟಿ ಸಿಪಿಐ ಪಕ್ಷದ ಸದಸ್ಯರಾಗಿದ್ದು ಮೂಂಜ ಗ್ರಾಮ ಪಂಚಾಯಿತಿನ ಸದಸ್ಯರಾಗಿದ್ದಾರೆ. ಆದರೆ ಸತೀಶ ಸಿಪಿಐ ಪಕ್ಷದ ಸದಸ್ಯನಲ್ಲವೆಂದು ಆ ಪಕ್ಷದ ಮಂಜೇಶ್ವರ ಏರಿಯಾ ಸಮಿತಿ ಕಾರ್ಯದರ್ಶಿ ರಾಜನ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮಂಜೇಶ್ವರದಲ್ಲಿ ಕರಿಯಪ್ಪಶೆಟ್ಟಿಯವರೊಂದಿಗೆ ವಿಚಾರಿಸಿದಾಗ ಸತೀಶ ಭಜರಂಗ ದಳದ ಜತೆಗಿದ್ದಾನೆಂದೂ ಆತನ ಮಂಗಳೂರಿನಲ್ಲಿ ವಾಸಿಸುತ್ತಿದ್ದು ತಮ್ಮ ಮನೆಗೆ ವಾರ್ಷಿಕ ಜಾತ್ರೆಯ ಸಮಯದಲ್ಲಿ ಮಾತ್ರ ಬರುತ್ತಾನೆಂದೂ ಹೇಳಿದ್ದಾರೆ. ಆದರೆ ಆರೋಪಿಗಳು ವಕೀಲರು ಕರಿಯಪ್ಪ ಶೆಟ್ಟರನ್ನು ಮಂಗಳೂರಿಗೆ ಕರೆಸಿ ಟಿ.ವಿ. ಚಾನಲ್ ಮುಂದೆ ಮಾತಾಡಿಸಿ, ತನ್ನ ಮಗ ಸತೀಶ್ ಭಜರಂಗ ದಳದ ಸಂಬಂಧ ಹೊಂದಿಲ್ಲವೆಂದೂ, ಸಿಪಿಐ ಪಂಚಾಯತ್ ಸದಸ್ಯನಾದ ತನ್ನ ಕೆಲಸಗಳಿಗೆ ಸಹಾಯ ಮಾಡುತ್ತಿದ್ದಾನೆಂದೂ ಹೇಳಿಸಿದ್ದಾರೆ. ಮಗ ಭಜರಂಗದಳದವನೆಂದು ಹೇಳಿದರೆ ಅವನಿಗೆ ಜಾಮೀನು ಸಿಗುವುದಿಲ್ಲವೆಂದು ಹೆದರಿಸಿ ಈ ರೀತಿ ಹೇಳಿಕೆ ಕೊಡಿಸಿರುವುದು ಸ್ಪಷ್ಟವಾಗಿದೆ. ಈ ಒಂದು ಸುಳ್ಳು ಉದಾಹರಣೆಯನ್ನು ಎತ್ತಿಕೊಂಡು ಯಡಿಯೂರಪ್ಪ ನವರಿಂದ ಪಿ.ಪಿ.ಹೆಗ್ಡೆನವರು ಬಂಧಿತರೆಲ್ಲಾ ಕಮ್ಯೂನಿಸ್ಟ್ ಕಾರ್ಯಕರ್ತರೆಂದು ಪ್ರಚಾರ ಮಾಡುತ್ತಿದ್ದಾರೆ.

ದಿನಾಂಕ:08ರಂದು ಸಂಜೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಶಾಂತಿ ಸಭೆಯಲ್ಲಿ ಗೃಹ ಸಚಿವ ವಿ.ಎಸ್. ಆಚಾರ್ಯ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಪಾಲೇಮಾರ್ ತಮ್ಮ ಸಂಘ ಪರಿವಾರದ ನಿಜಬಣ್ಣ ವನ್ನೇ ಪ್ರದರ್ಶಿಸಿದರು. ಪಾಲೇಮಾರ್ ಮಾತನಾಡುತ್ತಾ ಇದು ಕೇರಳದಿಂದ ಬಂದ ಸಮಸ್ಯೆ, ಕರ್ನಾಟಕ ಸರ್ಕಾರದ ಹೆಸರು ಕೆಡಿಸಲು ಇದನ್ನು ಬಳಸಲಾಗುತ್ತಿದೆ ಎಂದರು. ವಿ.ಎಸ್. ಆಚಾರ್ಯ ಮಾತನಾಡುತ್ತಾ ಮಾಧ್ಯಮಗಳು ಅತಿರಂಜಿತ ವರದಿ ಪ್ರಕಟಿಸಿ ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಿವೆ ಎಂದರು. ಮಾಧ್ಯಮಗಳು ಲಕ್ಷ್ಮಣರೇಖೆ ಹಾಕಿಕೊಳ್ಳಬೇಕೆಂದೂ. ಅದನ್ನು ದಾಟಿದರೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಹೇಳುತ್ತಾ 'ಮಾಧ್ಯಮ ಧರ್ಮಾಧಿಕಾರಿ' (ಓಂಬುಡ್ಸ್‌ಮನ್) ಸ್ಥಾಪಿಸುವ ಕುರಿತು ಯೋಚಿಸಲಾಗುತ್ತಿದೆ ಎಂದರು. ಸಭೆಯಲ್ಲಿ ಭಾಗವಹಿಸಿದವರ ಪೈಕಿ, ಮಾಧ್ಯಮಗಳ ಮೇಲೆ ನಿಯಂತ್ರಣ ಹೇರುವ ಒತ್ತಾಯ ಮಾಡಿದವರು ಆರೆಸ್ಸೆಸ್ ನಾಯಕರಾದ ಎಂ.ಬಿ.ಪುರಾಣಿಕ್ ಮತ್ತು ಮಾಧವ ಭಂಡಾರಿ ಮಾತ್ರ. ಆದರೆ ಓಂಬುಡ್ಸ್‌ಮನ್ ಪ್ರಸ್ತಾಪಿಸಿದ ಕುರಿತು ಮುಂದಿನ ದಿನಗಳಲ್ಲಿ ವಿರೋಧಗಳು ವ್ಯಕ್ತವಾದಾಗ, ಶಾಂತಿ ಸಭೆಯಲ್ಲಿ ಭಾಗವಹಿಸಿದವರೆಲ್ಲರೂ ಈ ಬಗ್ಗೆ ಒತ್ತಾಯಿಸಿದ್ದಾರೆಂದೂ ಸುಳ್ಳು ಹೇಳಿ ತನ್ನ ಫ್ಯಾಸಿಸ್ಟ್ ಮನೋಭಾವವನ್ನು ಪ್ರದರ್ಶಿಸಿದರು.



ಫೆಬ್ರವರಿ 9 ರಂದು ಬೆಳಿಗ್ಗೆ ಎರಡು ಬೃಹತ್ ಪ್ರತಿಭಟನಾ ಪ್ರದರ್ಶನಗಳು ನಡೆದವು. ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ನಡೆದ ಅಂದಿನ ಪ್ರಥಮ ಪ್ರದರ್ಶನವು ಭಾರತ ವಿದ್ಯಾರ್ಥಿ ಫೆಡರೇಷನ್‌ನಿಂದ ಸಂಘಟಿಸಲ್ಪಟ್ಟಿತ್ತು. ಬೃಹತ್ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಪ್ರದರ್ಶನವನ್ನು ಉದ್ದೇಶಿಸಿ ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಜೀವನ್‌ರಾಜ್ ಕುತ್ತಾರ್, ಜಿಲ್ಲಾಧ್ಯಕ್ಷ ಪ್ರಶಾಂತ್ ಆಚಾರಿ ಮತ್ತು ಡಿವೈಎಫ್ಐ ಜಿಲ್ಲಾಧ್ಯಕ್ಷ, ಮುನೀರ್ ಕಾಟಿಪಳ್ಳ ಸ್ಪೂರ್ತಿಯುತವಾಗಿ ಮಾತನಾಡಿ, ವಿದ್ಯಾರ್ಥಿಗಳ ಮೇಲೆ ದಾಳಿ ನಡೆಸುವ ಫ್ಯಾಸಿಸ್ಟ್ ಶಕ್ತಿಗಳನ್ನು ದೃಢವಾಗಿ ಎದುರಿಸಲು ಕರೆ ನೀಡಿದರು.

ಆ ನಂತರ ಸಿಪಿಐ(ಎಂ) ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನಡೆದ ಪ್ರದರ್ಶನದಲ್ಲಿ ಪಕ್ಷದ ಕಾರ್ಯಕರ್ತರಲ್ಲದೇ ಸಾರ್ವಜನಿಕರೂ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಅವರು ಸಂಘ ಪರಿವಾರದ ವಕೀಲನಿಂದ ತೇಲಿಬಿಡಲ್ಪಟ್ಟ ಸುಳ್ಳು ಪ್ರಚಾರಗಳನ್ನು ಖಂಡಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್.ಶ್ರೀಯಾನ್ ಮತ್ತು ರಾಜ್ಯ ಸಮಿತಿ ಸದಸ್ಯ ವಸಂತ ಆಚಾರಿ ಅವರೂ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸುಳ್ಳರ ಸುಳ್ಳ ಯಡಿಯೂರಪ್ಪ: ರಾಜ್ಯ ಸರ್ಕಾರದ ಮುಖ್ಯಸ್ಥರಾದ ಮುಖ್ಯಮಂತ್ರಿ ಯಡಿಯೂರಪ್ಪನವರೇ ಪ್ರಧಾನ ಮಂತ್ರಿಗೆ ಪತ್ರ ಬರೆದು ಮಂಗಳೂರು ಘಟನೆಯಲ್ಲಿ ಬಂಧಿತರಾದವರು ಕಮ್ಯೂನಿಸ್ಟ್ ಕಾರ್ಯಕರ್ತರೆಂಬ ಸುಳ್ಳು ಹೇಳುವ ಮೂಲಕ ರಾಜ್ಯ ಸರ್ಕಾರದ ವಿಶ್ವಾಸಾರ್ಹತೆಗೆ ಮಸಿ ಬಳಿದುಕೊಂಡಿದ್ದಾರೆ. ಮುಖ್ಯಮಂತ್ರಿ, ಗೃಹಮಂತ್ರಿ, ಜಿಲ್ಲಾ ಸುಳ್ಳುಗಾರರಾದರೆ ಅವರ ಅಧೀನದಲ್ಲಿರುವ ಪೊಲಿಸ್ ಇಲಾಖೆ ಮತ್ತು ಆಡಳಿತದಿಂದ ನ್ಯಾಯ ನಿರೀಕ್ಷಿಸಬಹುದೇ? ಮಾಹಿತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಪ್ರಧಾನಿಗೆ ಪತ್ರ ಬರೆಯುವ ಮುಖ್ಯಮಂತ್ರಿಯ ಬೇಜವಾಬ್ದಾರಿತನಕ್ಕೆ ಏನೆನ್ನಬೇಕು?

ಪ್ರಧಾನಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಬರೆದ ಸುಳ್ಳು ಮಾಹಿತಿಯ ಪತ್ರವನ್ನು ಖಂಡಿಸಿ ದಿನಾಂಕ:11.02.2009ರಂದು ಬೆಂಗಳೂರಿನ ಕಾರ್ಪೋರೇಷನ್ ವೃತ್ತದಲ್ಲಿ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿ ಯಡಿಯೂರಪ್ಪನ ಪ್ರತಿಕೃತಿ ಸುಡಲಾಯಿತು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿ, ಬಿ.ಮಾಧವ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೌರಮ್ಮ ಮೊದಲಾದವರು ಮಾತನಾಡಿದರು.

ಮಾಧ್ಯಮ ಧರ್ಮಾಧಿಕಾರಿ.....

ಪುಟ 3 ರಿಂದ

ಸ್ವಾಭಿಮಾನ, ಪತ್ರಿಕಾ ಧರ್ಮ, ವಸ್ತುನಿಷ್ಠತೆಯೇ ಮುಖ್ಯ ಎಂಬ ಕೆಲವೇ ಮಾಧ್ಯಮಗಳು ಮಾತ್ರ ಇಂತಹ ಪ್ರತಿಯೊಂದು ಘಟನೆಗಳು ರಾಜ್ಯದಲ್ಲಿ ನಡೆದಾಗಲೂ ಸಂಘ ಪರಿವಾರ ಬಿಜೆಪಿ ಸರ್ಕಾರದ್ದೇ ನಕಾರಾತ್ಮಕ ಪಾತ್ರವಿರುವುದನ್ನು ಮಾಧ್ಯಮಗಳೇ ಜನರ ಮುಂದಿಡುತ್ತಿವೆ.

ಹೀಗಾಗಿ ಈಗಿರುವುದಕ್ಕಿಂತಲೂ ಇನ್ನೂ ಹೆಚ್ಚಿನದನ್ನು ಮಾಡಿಯೇ 'ಗುಜರಾತ್ ಮಾದರಿ' ಸೃಷ್ಟಿಸಬೇಕಿರುವ ಈ ಫ್ಯಾಸಿಸ್ಟ್ ಪಡೆಯು ಮಾಧ್ಯಮಗಳ ಬಾಯಿಗೆ ಬೀಗಹಾಕಿ, ಹೃದಯಕ್ಕೆ ತ್ರಿಶೂಲದಿಂದ ಇರಿಯಲು ಹೊರಟಿರುವುದು ಸ್ಪಷ್ಟ. 2002 ರಲ್ಲಿನ ಗುಜರಾತ್ ಹತ್ಯಾಕಾಂಡವನ್ನು ಬಯಲಿಗೆ ತಂದ ಮಾಧ್ಯಮಗಳ ಮೇಲೆ ಮೋದಿ ಸರ್ಕಾರ ಮತ್ತು ಚಡ್ಡಿಪಡೆ ಹೀಗೆಲ್ಲಾ ವರ್ತಿಸಿತು ಎಂಬುದನ್ನು ಇದೇ ಸಂದರ್ಭಕ್ಕೆ ನೆನಪಿಸಿಕೊಳ್ಳಬೇಕು.

ವಿಚಿತ್ರವೆಂದರೆ ತುರ್ತು ಪರಿಸ್ಥಿತಿಯಲ್ಲಿ ಬೆಂಗಳೂರಿನ ಕಾರಾಗೃಹದಲ್ಲಿದ್ದ ಸರ್ವಾಧಿಕಾರತ್ವದ ವಿರುದ್ಧ ಎರಡನೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿದ್ದೇನೆ (ಮೊದಲಿನದಲ್ಲಿ ನಾಪತ್ತೆ) ಎಂದೆಲ್ಲಾ ಹೇಳಿ ಕೇಂದ್ರ ಕಾರಾಗ್ರಹಕ್ಕೆ ಭೇಟಿ ನೀಡಿ ಬೊಗಳೆ ಹೊಡೆಯುವ ಅದ್ವಾನಿ, ಆಚಾರ್ಯರಂತಹ ಬಿಜೆಪಿ ನಾಯಕರು ತುರ್ತು ಸ್ಥಿತಿಗಿಂತಲೂ ಘೋರ ಪಾತಕವೆಸಗಲು ಸಿದ್ದರಾಗುತ್ತಿದ್ದಾರೆ. ಫ್ಯಾಸಿಸಂ ಬೆಳೆಯಬೇಕೆಂದರೆ ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ದಮನಿಸದೇ ಅಸಾಧ್ಯವೆಂದೇ ನಂಬಿರುವ ಇವರು ಹಿಟ್ಲರ್‌ನಂತಹುದೇ ಕೆಲಸಕ್ಕೆ ಕೈಹಾಕುತ್ತಿದ್ದಾರೆ. ಭಾರತೀಯ ಫ್ಯಾಸಿಸ್ಟ್ ಸಂಘ ಪರಿವಾರ ಮಾತ್ರವಲ್ಲ ಜಗತ್ತಿನ ಎಲ್ಲಾ ಫ್ಯಾಸಿಸ್ಟ್‌ರ ಬಯಕೆಯೇ ಇದೇ ಆಗಿದೆ.

ಮಾಧ್ಯಮಗಳು ಸರ್ಕಾರದ ನಡುವಿನ ಘರ್ಷಣೆ, ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಇಡೀ ದೇಶದಲ್ಲಿ ಅವುಗಳನ್ನು ನಿಯಂತ್ರಿಸುವ 'ಓಂಬುಡ್ಸ್‌ಮನ್, ಧರ್ಮಾಧಿಕಾರಿಗಳು' ಇಲ್ಲ ಎಂಬುದನ್ನು ಗಮನಿಸಬೇಕು. ಆದರೆ ಹೊಸತೊಂದು ಆಕ್ರಮಣದ ಅಧ್ಯಾಯವನ್ನು ಕರ್ನಾಟಕದಿಂದಲೇ ಆರಂಭಿಸಬೇಕು ಎಂಬ ಇರಾದೆ ಬಿಜೆಪಿಗೆ ಇದ್ದಂತಿದೆ.

ಇಂತಹ ವಿಷಯಗಳು ಸಚಿವ ಸಂಪುಟದಲ್ಲಿಯೂ ಚರ್ಚೆಯಾಗದೇ ತೀರ್ಮಾನಕ್ಕೆ ಹೋಗುತ್ತಿರುವುದು, ಆಕ್ಷೇಪವೇ ಇಲ್ಲದಿರುವುದು ಸಂಪುಟದಲ್ಲಿರುವವರ ಅಧಿಕಾರ ಲಾಲಸೆಯ ಪರಮನೀಚ ಸ್ಥಿತಿಯನ್ನು ತೋರಿಸುತ್ತದೆ.

ಪ್ರಜಾಪ್ರಭುತ್ವದ ನಾಶಕ್ಕೆ ಟೊಂಕಕಟ್ಟಿ ನಿಂತಿರುವ ಬಿಜೆಪಿ ಸಂಘ ಪರಿವಾರ ಹೊಸ ಹೊಸ ಕ್ರಮಗಳಿಗೆ ಸಿದ್ಧವಾಗುತ್ತಾ, ಜಾರಿ ಮಾಡುತ್ತಾ ಕರ್ನಾಟಕದ ವಾತಾವರಣವನ್ನೇ ವಿಷಮಯಗೊಳಿಸುತ್ತಿದೆ. ಈಗಲಾದರೂ ಪ್ರಜ್ಞಾವಂತರು ವಿಶೇಷವಾಗಿ ಮಾಧ್ಯಮಗಳ ಪ್ರಮುಖರು, ಕಾರ್ಯನಿರತರು, ಚಿಂತಕರು ಎಚ್ಚೆತ್ತುಕೊಂಡು ಭಾರೀ ಪ್ರತಿರೋಧಕ್ಕೆ ಇಳಿಯಬೇಕು. ಅದು ಈಗಿನಿಂದಲೇ, ಈ ಕ್ಷಣದಿಂದಲೇ ಆರಂಭಗೊಳ್ಳಬೇಕು.

○

ದ

ತಿದ್ದುಪಡಿ

ಪತ್ರಿಕೆಯ ಫೆಬ್ರವರಿ 15, 2007 (ಸಂಚಿಕೆ-7) ಸಂಚಿಕೆ ಅಸಂಘಟಿತ ಕಾರ್ಮಿಕರ ರ‍್ಯಾಲಿ ಕುರಿತ ವರದಿ ಪ್ರಕಟವಾಗಿದೆಯಷ್ಟೇ. ಇದರ ಜೊತೆಗೆ ಪುಟ-10ರಲ್ಲಿ 'ಕಮ್ಮಿದರ ನಿಗದಿ ಯಾಕೆ?' ಎಂಬ ಕನಿಷ್ಠ ಕೂಲಿ ನಿಗದಿ ಕುರಿತ ಬರಹವಿದೆ.

ಇಲ್ಲಿ ಪ್ರಸ್ತಾಪಿಸಲಾಗಿರುವ ಕನಿಷ್ಠ ಕೂಲಿ ದರವು 1993 ನೇ ಇಸವಿಯದಾಗಿದ್ದು. ಅದು ಪ್ರಸಕ್ತ ಕನಿಷ್ಠ ಕೂಲಿ ನಿಗದಿಗೆ ಸಂಬಂಧಿಸಿದಂತೆ ಅಲ್ಲ ಎಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗುತ್ತಿದೆ. ಕಳೆದ ಸಂಚಿಕೆಯಲ್ಲಿ ಇಸವಿ ನಮೂದಿಸುವುದು ತಪ್ಪಿ ಹೋಗಿರುವುದಾಗಿ ವಿಷಾದಿಸುತ್ತೇವೆ.

- ಸಂ.

ಪ್ರೀತಿಗೂ ಪರ್ಮಿಶನ್ ಆಆ...

ಮ್ಮ ಸಂಸ್ಕೃತಿ ಹೀನ ಕೃತ್ಯಗಳ ಅನಾವರಣಕ್ಕಾಗಿ 'ವೆಲೆಂಟೈನ್ ನ'ವನ್ನು ಶ್ರೀರಾಮಸೇನೆ ಆರಿಸಿಕೊಂಡಿದೆ. ಈ ವಿರೋಧ ಹಿಳೆಯರ ಮೇಲೆ ಅದು ನಡೆಸುತ್ತಿರುವ ಧಾಳಿಗಳ ಮುಂದುವರಿದ ಭಾಗ. ಪ್ರೇಮಿಗಳ ದಿನ ವಿರೋಧದ ಹಿಂದೆ ತಿಯ ವ್ಯವಸ್ಥೆಯನ್ನು ಕಾಪಾಡುವ ಇರಾಧೆಯೂ ಇದೆ.

ಕೆ.ಎಸ್.ವಿಮಲ


ಒಂದು ಕಾಲ ಇತ್ತು. ಅರಿವಿದ್ದೋ ಅರಿವಿಲ್ಲದೆಯೋ.... ತಿಯ ಸೆಳೆತಕ್ಕೆ ಸಿಲುಕಿದರೆ.........ಅಯ್ಯಯ್ಯೋ 'ಪ್ರೀತಿ' ಳಿ ಕೇಳಿ ಮಾಡೋದಾ? ಎಂದು ಹುಬ್ಬೇರತ್ತಲ್ಲ. ಆದ್ರೂ, ಕಸ್ಮಾತ್ ಅಂತಹ ಪರಿಸ್ಥಿತಿ ಬಂದಿದ್ದೇ ಆದರೆ ಅದನ್ನು ಚ್ಚಿಟ್ಟುಕೊಳ್ಳಲಿಕ್ಕೇ ದೊಡ್ಡ ಸಾಹಸ ಮಾಡಬೇಕಿತ್ತು. ಅಕಸ್ಮಾತ್ ನೆಯಲ್ಲಿ ಗೊತ್ತಾದರೆ.... ಪರಿಣಾಮ ನಡೆಸಿಕೊಂಡರೆ ಯದಿಂದ ನಡುಗುವ ವಾತಾವರಣ, ಪರಿಸ್ಥಿತಿ ಇತ್ತು.

ಯಲ್ಲಿ ಬಹಳ ನೀರು ಹರಿದು ಹೋಗಿದೆ. ಹಾಗೆ ಪ್ರಪಂಚವೂ ಲಾಗಿದೆ. ಎಲ್ಲೋ ಸ್ವಲ್ಪ ಹಳೆಯ ಜಡ್ಡು ಳಿದುಕೊಂಡಿದೆಯಾದರೂ ಪ್ರೀತಿ, ಪ್ರೇಮ ವಿವಾಹ ತ್ಯಾದಿಗಳು ಇಂದು ಸಾರ್ವಜನಿಕವಾಗಿಯೇ ಒಪ್ಪಿಗೆ ಪಡೆದ ಂಗತಿಗಳಾಗಿವೆ.

ಈಗ ಒಂದು ಪ್ರಶ್ನೆ. ಪ್ರೀತಿ, ಪ್ರೇಮ, ಅದಕ್ಕೊಂದು ದಿನ, ಾರತೀಯ ಸಂಸ್ಕೃತಿ, ಪಾವಿತ್ರ್ಯ, ಪರಂಪರೆ ಇತ್ಯಾದಿ....

ಒಂದೇ ಕ್ಷಣ. ನಮ್ಮ ಪುರಾಣದ ಕಥೆಗಳು, ರಾಜರ ತಿಹಾಸಗಳನ್ನು ನೆನಪಿಸಿಕೊಂಡರೆ ಭಾರತದ ಭವ್ಯ ಸನಾತನ'ತೆಯಲ್ಲೇ ಇಂತಹ ಹಲವು ಅಂಶಗಳು ನಮಗೆ ಣಸಿಗುತ್ತವೆ.

ಹದಿನಾರು ಸಾವಿರ ಸ್ತ್ರೀಯರೊಡನೆ ಸರಸ, ಸಲ್ಲಾಪ ಡೆಸುತ್ತಿದ್ದನೆಂದು ಹಾಗಿದ್ದೂ ಅವನು ದೇವರೆಂದೇ ಪೂಜಿಸಲ್ಪಟ್ಟ ಕೃಷ್ಣ'..... ತನ್ನ ಗೆಳತಿಯರೊಂದಿಗೆ ಜಲ ಯಾಡಿದ್ದು, ವಸ್ತ್ರಾಪಹರಣ ಮಾಡಿದ್ದು.. ಬೆಡ್ ರೂಂನಲ್ಲಲ್ಲ. ಬದಲಿಗೆ ಬಟಾನುಬಯಲಿನ ರೋವರದಲ್ಲಿ. ಇಂದಿಗೂ ಮಧುರ ಪ್ರೇಮದ ರಾಧಾ ಕೃಷ್ಣರ ಪ್ರೇಮವನ್ನೇ ಉಲ್ಲೇಖಿಸಲಾಗುತ್ತದೆ. ಕೃಷ್ಣನ ಹೆಂಡತಿಯರ ಲಿಸ್ಟ್‌ನಲ್ಲಿ (ಅಫಿಸಿಯಲ್) ರುಕ್ಮಿಣಿ, ಸತ್ಯಭಾಮ. ಜಾಂಬವತಿಯರು ಮಾತ್ರ. ಆದರೆ ಕೃಷ್ಣನ ಹೆಸರಿಗೆ ಸೇರಿಸಿಕೊಂಡು ರಾಧಾಕೃಷ್ಣನಾಗಿದ್ದು ಪ್ರೇಯಸಿ ರಾಧೆಯ ಮೂಲಕ. ಇದೂ ನಮ್ಮ "ಹಿಂದು(ತ್ವ)" ಸಂಸ್ಕೃತಿಯ ಭಾಗವಲ್ಲವೇ? ಸ್ವಲ್ಪ ನೆನಪಿನಂಗಳಕ್ಕೆ ಮತ್ತಷ್ಟು ಇಳಿದರೆ ದುಷ್ಯಂತ, ಶಕುಂತಲೆಯರು ಭೇಟಿಯಾಗಿದ್ದು. ಪ್ರಥಮ ನೋಟದಲ್ಲೇ ಏಕದಂ ಫ್ಲಾಟ್ ಆಗಿ ಗಾಂಧರ್ವ ವಿವಾಹವೂ ಆಗಿ ಕೂಡಿ, ಕಳೆದು ಎಲ್ಲವೂ ನಡೆದದ್ದು 'ಭಾರತ' ಹುಟ್ಟಿದ್ದು, ಈ ದೇಶದ ಪುಟಗಳಲ್ಲಿ ಸಿಗುವುದೇ ಅಲ್ಲವೇ?



ವ್ಯಾಪಾರೀಕರಣ

'ಪ್ರೇಮಿಗಳ ದಿನ' ಫೆಬ್ರವರಿ 14 'ವ್ಯಾಲೆಂಟೈನ್ಸ್ ಡೇ' ಎಂದು ಆಚರಣೆಗೆ ಪ್ರಾರಂಭವಾಗಿದ್ದು ಇತ್ತೀಚೆಗೆ. ಜಾಗತೀಕರಣ ವ್ಯಾಪಾರೀಕರಣದ ಮೂಲಕ ಬಂದ ಬಹಳ ಸಂಗತಿಗಳ ಜೊತೆ ಇದೂ ಕೂಡ ಅಬ್ಬರದ ಪ್ರಚಾರ ಗಳಿಸಿತು. ಪ್ರಚಾರ ಕೂಡ ಬಹುರಾಷ್ಟ್ರೀಯ ಕಂಪನಿಗಳು. ಉದ್ದಿಮೆಗಳು ತಮ್ಮ ವಸ್ತುಗಳ "ಮಾರ್ಕೆಟಿಂಗ್"ಗೆ ಈ ದಿನವನ್ನು ಚೆನ್ನಾಗಿ ಬಳಸಿಕೊಂಡರು. ಇದು ಈ ಕ್ಷಣದಲ್ಲಿ ಮುಕ್ತ ಮಾರುಕಟ್ಟೆ, ಸುಲಭ ಹಣ ಗಳಿಕೆ, ಪೈಪೋಟಿಯ ಜೋರಿನಲ್ಲಿ " ಬಲಸ್ಯ ಪ್ರಥ್ವಿ" ಯಾರು ಏನನ್ನು ಸಮರ್ಥವಾಗಿ ಬಳಸಿಕೊಳ್ಳಲು ಶಕ್ತರೋ ಅವರು ಅಪಾರ ಲಾಭ ಗಳಿಸುತ್ತಾರೆ. ಹಾಗೆ ಈ ಮಾರುಕಟ್ಟೆ ಸರದಾರರು ಯುವ ಜೋಡಿಗಳ ಹೃದಯದ ಭಾವನೆಗಳಿಗೆ ಬಣ್ಣ ಹಚ್ಚುವ ಮೂಲಕ ಕನಸಿನ ಚಿತ್ತಾರಗಳಿಗೆ ರೂಪ ಕೊಡುವ ಮೂಲಕ ತಮ್ಮ ಬಿಸಿನೆಸ್ ಹೆಚ್ಚಿಸಿಕೊಂಡರು/ ಕೊಳ್ಳುತ್ತಿದ್ದಾರೆ.



ಒಂದು ವರದಿಯ ಪ್ರಕಾರ ಫೆಬ್ರವರಿ ಎರಡನೇ ವಾರದಲ್ಲಿ ಅತಿ ಹೆಚ್ಚು ಕೆಂಪು ಗುಲಾಬಿ ರಫ್ತಾಗುತ್ತದೆಯಂತೆ. ಪ್ರೀತಿ ಪ್ರೇಮಗಳೊಳಗಿನ ನವಿರು ಭಾವನೆಗಳಿಗೆ ಕುರುಡಾಗಿರುವ ಹಿಂದುತ್ವವಾದಿಗಳು ರೈತರ ಗಳಿಕೆಗೇಕೆ ಅಡ್ಡಿ ಮಾಡುತ್ತಾರೆ ಎಂದೂ ಪ್ರಶ್ನೆಗಳು ಬಂದಿವೆ.

ವ್ಯಕ್ತಿಗತ ಸ್ವಾತಂತ್ರ್ಯ

ಇಲ್ಲಿ ಪ್ರಶ್ನೆ ಇಷ್ಟೆ. ದೇಶದ ಸಂವಿಧಾನ ಎಲ್ಲರಿಗೂ ವೈಯಕ್ತಿಕ ಸ್ವಾತಂತ್ರ್ಯ ನೀಡಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ಸ್ವಾತಂತ್ರ್ಯದ ಅರ್ಥ ಗೊತ್ತಿಲ್ಲದವರಿಗೆ ತಮಗಾಗದ್ದನ್ನು ಮಾಡುವುದು ಎಂದರೆ ಸ್ವೇಚ್ಛಾಚಾರ ಎನಿಸಿಕೊಳ್ಳುತ್ತದೆ. ಈಗ ಆಗಿರುವುದೂ ಅದೇ. ಕಳೆದ ಕೆಲವು ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಶಿವಸೇನೆ ವ್ಯಾಲೆಂಟೈನ್ಸ್ ಡೇ ಆಚರಣೆಯ ವಿರುದ್ಧ ದಾಂಧಲೆ ನಡೆಸುತ್ತಿದೆ. ಗ್ರೀಟಿಂಗ್ ಕಾರ್ಡ್ಸ್ ಹರಿದು ಹಾಕಿ, ಮಳಿಗೆಗಳ ಮೇಲೆ ಧಾಳಿ ನಡೆಸಿ, ಹುಡುಗ, ಹುಡುಗಿಯರಿಗೆ ಹೆದರಿಸಿ, ಬೆದರಿಸಿ ಇತ್ಯಾದಿಗಳ ಮೂಲಕ ಸಂಸ್ಕೃತಿಯ ಕಟ್ಟಾ ವಾರದುದಾರರೆಂದು ಬಿಂಬಿಸತೊಡಗಿದರು. ಹಾಗೆಂದ ಮಾತ್ರಕ್ಕೆ ಅಲ್ಲೇನೂ ವ್ಯಾಲೆಂಟೈನ್ಸ್ ಡೇ ನಿಂತಿಲ್ಲ. ಶಿವಸೇನೆ ತನ್ನ ದಾಂಧಲೆಗಳ ಮೂಲಕ 'ಪ್ರಖ್ಯಾತಿ' ಗಳಿಸಿದ್ದು ಇಲ್ಲಿನ ರಾಮಸೇನೆಯೂ ಅದೇ ಹಾದಿ ಹಿಡಿದಿದೆ. ಆಸೆ ಹುಟ್ಟಿಸಿತೇನೋ. ಒಳ್ಳೆಯ ಕೆಲಸಕ್ಕೆ ಸುಲಭವಾಗಿ ಪ್ರಚಾರ ಸಿಕ್ಕುವುದಿಲ್ಲ. ಆದರೆ ಕೆಟ್ಟ ಕೆಲಸ ಸುಲಭ ಪ್ರಚಾರ ನೀಡುತ್ತದೆ. ಶ್ರೀರಾಮಸೇನೆ ತುಳಿದ ದಾರಿ ಇಂತದ್ದೇ ಹಾಂ! ಹಾಗೆಂದ ಮಾತ್ರಕ್ಕೆ ಶ್ರೀರಾಮಸೇನೆಯ ಚರಿತ್ರೆ ಒಳ್ಳೆಯದಿದೆ ಎಂದು ಖಂಡಿತಾ ಅಲ್ಲ. ಒಂದರ ಹಿಂದೊಂದರಂತೆ ಸರಣಿ ಕುಕೃತ್ಯಗಳ ಮೂಲಕ ಪರಿವಾರದ ಈ ಬಣಗಳು (ಕು)ಖ್ಯಾತಿಗೆ ಬಂದಿವೆ. ಇದರ ಹಿಂದಿನ ಉದ್ದೇಶ ಜನಮಾನಸದಲ್ಲಿ ಭಯ ಮೂಡಿಸುವುದು ಒಂದು ಅಜೆಂಡಾ ಆದರೆ, ಸಂಘ ಪರಿವಾರವೇ ಹೋಗಿ ಮಕ್ಕಳೇ, ಗುಜರಾತಿನ ಮಾದರಿ ಜಾರಿಗೆ ತರಲು ನೀವೇ ತಕ್ಕವರು ಏನು ಬೇಕಾದ್ರೂ ಮಾಡಿ ನಿಮ್ಮ ರಕ್ಷಣೆಗೆ ಸರ್ಕಾರವಿದೆ, ನಾವಿದ್ದೇವೆ ಎಂದು ಬೆನ್ನು ತಟ್ಟಿದ್ದರ ಪರಿಣಾಮವಾ? ಏನೇ ಇದ್ದರೂ ಈ ದೇಶಕ್ಕಿರುವ ಬಹು ಸಂಸ್ಕೃತಿಯನ್ನು ನಾಶ ಮಾಡುವ ಶಕ್ತಿ ಪರಿವಾರದ ಗಣಗಳಿಂದ ಸಾಧ್ಯವಿಲ್ಲ. ಬಾಜಪ ಮತ್ತದರ ಪರಿವಾರ ಈ ದೇಶದ ಜನ ಜೀವನವನ್ನೊಂದಿಷ್ಟು ಅರ್ಥ ಮಾಡಿಕೊಳ್ಳಬೇಕು. ಇಲ್ಲಿನ ಹಲವು ಬುಡಕಟ್ಟು ಜನಾಂಗದಲ್ಲಿ ವಿವಾಹಪೂರ್ವ ಯುವ ಜೋಡಿಗಳು ಕೆಲವು ದಿನವನ್ನು ಹಾಡಿಯಿಂದ ದೂರದ ಕಾಡಿನಲ್ಲಿ ಕಳೆಯಬೇಕೆಂಬ ನಿಯಮವೇ ಇದೆ. ಛೀ ಬಿಡಿ ಅವರು ಹಿಂದುಗಳಲ್ಲ ಮತ್ತು ಅವರಿಗೆ ಹಿಂದುಸ್ಥಾನದಲ್ಲಿ ಇರಲು ಅಧಿಕಾರವೇ ಇಲ್ಲ ಎಂದು ಅವರನ್ನು ಹುಡುಕಿಕೊಂಡು ಹೋಗಿ ಅರಬ್ಬೀ ಸಮುದ್ರಕ್ಕೆ ಎಸೆದು ಬರುತ್ತಾರಾ?

ಮಂಗಳೂರಿನಲ್ಲಿ ಯುವತಿಯರು (ಸಂಸ್ಕೃತಿ ರಕ್ಷಣೆಗೆ ಹೆಗಲು ಹೊತ್ತವರು) ಪಬ್‌ನಲ್ಲಿದ್ದವರೆಂದು ನಡೆಸಿದ ದೌರ್ಜನ್ಯ, ಮುಸ್ಲಿಂ ಯುವಕನೊಂದಿಗೆ ಮಾತನಾಡಿದಳೆಂದು ತೊಂದರೆಗೊಳಗಾದ ಶೃತಿ, ಎಲ್ಲ ಕೋಮಿನ ಮಕ್ಕಳೂ ಇದ್ದಾರೆಂಬ ಕಾರಣಕ್ಕೆ ತಡೆಯಲ್ಪಟ್ಟ ಶಾಲಾ ಟ್ರಿಪ್ ಬಸ್ಸು, ಇತರ ಧರ್ಮದವರನ್ನು ಮನೆಗೆ ಕರೆದು ಪಾರ್ಟಿ ಮಾಡಿದರೆಂದು ಹಲ್ಲೆಗೊಳಪಟ್ಟ ಮಂಗಳೂರಿನ ಪ್ರದೇಶವೊಂದರ ಮನೆಯ ಮಾಲಿಕರು, ಗೋಹತ್ಯೆಯ ಹೆಸರಿನಲ್ಲಿ ದೌರ್ಜನ್ಯಕ್ಕೊಳಗಾಗುತ್ತಿರುವ ಅಲ್ಪಸಂಖ್ಯಾತರು... ಇವು ಒಂದರ ಹಿಂದೊಂದು ನಡೆಯುತ್ತಿರುವ ಸರಣಿ ಘಟನೆಗಳು. ಈಗ ವ್ಯಾಲೆಂಟೈನ್ಸ್ ಡೇ ತಡೆಯುವ ಯತ್ನ. ಇವೆಲ್ಲವೂ ಹಿಂದುತ್ವವಾದಿಗಳ ಅಜೆಂಡಾವನ್ನು ಕಾರ್ಯಗತಗೊಳಿಸುವ ಮೊದಲ ಹಂತದ ಪ್ರಯತ್ನಗಳಷ್ಟೆ.

ಇಷ್ಟಾಗಿ ವ್ಯಾಲೆಂಟೈನ್ಸ್ ಡೇ ಗೂ ಒಂದು ಚರಿತ್ರೆ ಇದೆ. ಪ್ರೀತಿಯ ವಿರೋಧಿ ಶಕ್ತಿಗಳ ವಿರುದ್ಧ ಪ್ರೇಮಿಗಳನ್ನು ಒಂದು ಮಾಡಿದ ವ್ಯಾಲೆಂಟೈನ್ ಎಂಬ ಸಂತನ ಸ್ಮರಣೆಯಲ್ಲಿ ಈ ದಿನ ಎಂಬುದನ್ನು ಎಲ್ಲ ಜನ ತಿಳಿದುಕೊಳ್ಳುವ ಅಗತ್ಯವಿದೆ.

ಈಗ.... ಕ್ಷಣಕ್ಕೊಂದು ಹೇಳಿಕೆ ಕೊಡುವ "ಹಿಂದುತ್ವ"ದ ಅಧಿಕಾರಿಗಳು ಪ್ರೀತಿಸುವ ಯುವ ಜೋಡಿಗಳಿಗೆ ತಾಳಿಕಟ್ಟಿಸಹೊರಟಿದ್ದಾರೆ. ಇದೂ ಕೂಡ ಪುರುಷ ಪ್ರಧಾನ ಮೌಲ್ಯದ ಪ್ರತೀಕವೇ. "ತಾಳಿ ಕಟ್ಟಿ ಯಜಮಾನನಾಗು. ಇಲ್ಲವಾದರೆ ರಾಖಿ ಕಟ್ಟಿಸಿಕೊಂಡು ರಕ್ಷಕನಾಗು". ಇದನ್ನು ಹೇಳಲು ಇವರು ಯಾರು? ವಿವಾಹವೆನ್ನುವುದು ವ್ಯಕ್ತಿಯ ವೈಯಕ್ತಿಕ ಆಯ್ಕೆಯ ಸ್ವಾತಂತ್ರ್ಯ. ಅದಕ್ಕೆ ಅಡ್ಡಿಪಡಿಸಲು ಅಥವಾ ಒತ್ತಾಯಿಸಲು ಯಾರಿಗೂ ಅಧಿಕಾರವಿಲ್ಲ.

ಇನ್ನು ಅವರು ಎತ್ತುತ್ತಿರುವ ಹದಿಹರೆಯದ ಯುವತಿಯರು ತೊಂದರೆಗೊಳಗಾಗುವುದು, ಅಕ್ರಮ ಸಂತಾನ!, ನಾಳಿನ ಜನಾಂಗ ಇತ್ಯಾದಿ.... ಸ್ವಾಮೀ, ಸಂಸ್ಕೃತಿಯ ಹರಿಕಾರರೇ ಈ ದೇಶದಲ್ಲಿ ಪ್ರತಿ 2 ನಿಮಿಷಕ್ಕೊಂದು ನಡೆಯುತ್ತಿರುವ ಅತ್ಯಾಚಾರ, ಮೋಸಕ್ಕೆ ಒಳಗಾಗಿ ಬದುಕಿನಲ್ಲಿ ಕಷ್ಟಕ್ಕೆ ಸಿಲುಕುತ್ತಿರುವ ಮಹಿಳೆಯರೆಲ್ಲರೂ ಪ್ರೇಮಿಗಳ ದಿನ ಆಚರಿಸಿ, ಪಬ್‌ಗೆ ಹೋಗುವವರು ಎಂದುಕೊಂಡಿದ್ದೀರಾ? ಖಂಡಿತಾ ಇಲ್ಲ.

ಶಕುಂತಲೆಯ ರೂಪಕ್ಕೆ ಮರುಳಾಗಿ ಅವಳೊಡನೆ ಸುಖಿಸಿ ಮರೆತು ಬೆನ್ನು ಹಾಕಿಹೋದ ದುಷ್ಯಂತ ಮಹಾರಾಜನ ಸಂತತಿ. ಈ ದೇಶದಲ್ಲಿ ಬಹಳ ಇದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲಾರದ ನೀವು ಯಾವ ಸಂಸ್ಕೃತಿಯನ್ನು ರಕ್ಷಿಸಬಲ್ಲಿರಿ?

ಜಗದಗಲ

ಶರತ್‌ಚಂದ್ರ

ಬೊಲಿವಿಯ - ಇನ್ನೊಂದು ವಿಜಯ, ಇನ್ನೊಂದು ದಿಟ್ಟ ಹೆಜ್ಜೆ

ಬೊಲಿವಿಯದಲ್ಲಿ ಬದಲಾವಣೆಗೆ ಆಳುವ ವರ್ಗಗಳ ಜತೆ ಸೆಣಸುತ್ತಿರುವ ಜನತೆ ಮತ್ತು ಪ್ರಗತಿಪರ ಅಧ್ಯಕ್ಷರ ಸರ್ಕಾರಕ್ಕೆ ಇನ್ನೊಂದು ಭಾರೀ ವಿಜಯ ದೊರಕಿದೆ. ಅಧ್ಯಕ್ಷ ಮೊರಲೆಸ್ ಮತ್ತು ಅವರ ಪಕ್ಷ 'ಸಮಾಜವಾದಕ್ಕೆ ಚಳುವಳಿ' ದೇಶದ ಬಹುಸಂಖ್ಯಾತ ಆದಿವಾಸಿಗಳ ವಿರುದ್ಧ ತಾರತಮ್ಯ, ಅವಮಾನ ಮತ್ತು ವಸಾಹತುಶಾಹಿ ಶೋಷಣೆಯನ್ನು ಹೇರಿದ ಐನೂರು ವರ್ಷಗಳ ಆಳುವ ವರ್ಗಗಳ ಆಧಿಪತ್ಯಕ್ಕೆ ಸವಾಲು ಹಾಕಿದ್ದಾರೆ. ಅವರ ಆಧಿಪತ್ಯವನ್ನು ಮುರಿಯುವ ಪಣ ತೊಟಿದ್ದಾರೆ. ಮೊರಲೆಸ್ ಸರ್ಕಾರಕ್ಕೆ ಬಹುಮತ ಇದ್ದರೂ ಆಳುವ ವರ್ಗಗಳ ಹಿತಾಸಕ್ತಿ ಎತ್ತಿ ಹಿಡಿಯುವ ವಿರೋಧ ಪಕ್ಷಗಳ ಅಸಹಕಾರ ಮತ್ತು ಪ್ರತಿರೋಧದಿಂದಾಗಿ ಹಲವು ಪ್ರಗತಿಪರ ಬದಲಾವಣೆಗಳನ್ನು ತರುವುದು ಸಾಧ್ಯವಾಗಿರಲಿಲ್ಲ. ಹಲವು ಬದಲಾವಣೆಗಳಿಗೆ ಸಂವಿಧಾನದ ಅಂಶಗಳು ಅಡ್ಡ ಬರುತ್ತಿದ್ದವು. ಅದರ ತಿದ್ದುಪಡಿಗೆ ವಿರೋಧ ಪಕ್ಷಗಳು ಪ್ರತಿರೋಧ ಒಡ್ಡುತ್ತಿದ್ದವು.

ಈ ಎಲ್ಲಾ ಕಾರಣಗಳಿಂದ ಮೊರಲೆಸ್ ಸರ್ಕಾರ ಹೊಸ ಸಂವಿಧಾನ ರಚಿಸಿ ಜನತೆಯ ಮುಂದೆ ಇಟ್ಟಿತು. ಹೊಸ ಸಂವಿಧಾನವನ್ನು ಜನಮತ ಸಂಗ್ರಹಕ್ಕೆ ಒಡ್ಡಲಾಯಿತು. ಅದರ ವಿರುದ್ಧ ವಿರೋಧ ಪಕ್ಷಗಳು, ಆಳುವ ವರ್ಗಗಳು ಮಾಧ್ಯಮಗಳ ಮೂಲಕ ಭಾರೀ ಅಪಪ್ರಚಾರ ನಡೆಸಿದವು. ಹಿಂಸಾಚಾರವೂ ನಡೆಯಿತು. ಆದರೂ ಅದಕ್ಕೆಲ್ಲ ಜಗ್ಗದೆ ಶೇ. 62 ರಷ್ಟು ಜನ ಹೊಸ ಸಂವಿಧಾನ ಅಂಗೀಕರಿಸುವುದಕ್ಕೆ ಬೆಂಬಲ ನೀಡಿದ್ದಾರೆ. ಇದು ಮೊರಲೆಸ್ ಸರ್ಕಾರಕ್ಕೆ ಪ್ರಚಂಡ ಜಯ. ಮೂಲಭೂತ ಬದಲಾವಣೆಯತ್ತ ಇನ್ನೊಂದು ದಿಟ್ಟ ಹೆಜ್ಜೆ. ಅಧ್ಯಕ್ಷರಾಗಿ ಆಯ್ಕೆಯಾದ ಹೊಸತರಲ್ಲೇ ದೇಶದ ತೈಲ ಗ್ಯಾಸ್ ಮತ್ತು ನೀರು ಮುಂತಾದ ಪ್ರಾಕೃತಿಕ ಸಂಪನ್ಮೂಲಗಳ ರಾಷ್ಟ್ರೀಕರಣ ಮಾಡಿ ಮೊದಲ ದಿಟ್ಟ ಹೆಜ್ಜೆ ಇಟ್ಟಿದ್ದರು.



ಬೊಲಿವಿಯದ ವಿಶಿಷ್ಟ ಪರಿಸ್ಥಿತಿ ಮತ್ತು ಹಿನ್ನೆಲೆ ಗಮನಿಸಿದರೆ ಇದು ಎಂತಹ ದೊಡ್ಡ ವಿಜಯ ಮತ್ತು ಮಹತ್ವದ ಹೆಜ್ಜೆ ಎಂಬುದರ ಅರಿವಾಗುತ್ತದೆ. ಲ್ಯಾಟಿನ್ ಅಮೆರಿಕದಲ್ಲೇ ಬೊಲಿವಿಯ ಎರಡನೇ ಅತೀ ಬಡ ದೇಶ. ಶೇ. 1 (ಶೆ. 0.6) ಕ್ಕಿಂತಲೂ ಕಡಿಮೆ ಎಸ್ಟೇಟ್ ಮಾಲಕರು ದೇಶದ ಮೂರನೇ ಎರಡರಷ್ಟು ಭೂಮಿಯ ಒಡೆತನ ಹೊಂದಿದ್ದಾರೆ. ಶೇ. 86 ರಷ್ಟು ಜನ ಕೇವಲ ಶೇ. 2.4 ಭೂಮಿಯ ಒಡೆತನ ಹೊಂದಿದ್ದಾರೆ. ನೂರು ಶ್ರೀಮಂತ ಕುಟುಂಬಗಳು ಎರಡೂವರೆ ಕೋಟಿ ಹೆಕ್ಟೇರ್ ಭೂಮಿಯ ಒಡೆಯರು. 20 ಲಕ್ಷ ರೈತರು ಕೇವಲ 60 ಲಕ್ಷ ಹೆಕ್ಟೇರ್ ಭೂಮಿ ಹೊಂದಿದ್ದಾರೆ. ಇನ್ನೂ ದೊಡ್ಡ ಸಂಖ್ಯೆಯ ಭೂಹೀನರು ಇದ್ದಾರೆ. ಬಡವ-ಶ್ರೀಮಂತರ ನಡುವೆ ಆದಾಯದಲ್ಲಿ ಸ್ವಾಭಾವಿಕವಾಗಿಯೇ ಭಾರೀ ಕಂದಕ ಇದೆ. ದೇಶದ ಆದಿವಾಸಿಗಳು ಶೇ. 62. ಬಡವರ ಪ್ರಮಾಣ ಶೆ. 60. ಲ್ಯಾಟಿನ್ ಅಮೆರಿಕದಲ್ಲೇ ಆದಿವಾಸಿಗಳು ಬಹುಸಂಖ್ಯಾತರಾಗಿದ್ದು ದಟ್ಟ ದರಿದ್ರ'ರಾಗಿರುವ ದೇಶ ಬಹುಶಃ ಬೊಲಿವಿಯ ಮಾತ್ರ.

ಇಂತಹ ಪರಿಸ್ಥಿತಿಯಲ್ಲಿ - ಭೂಸುಧಾರಣೆ ಮಾಡದೆ ಬಡತನ ಹಾಗೂ ಆದಿವಾಸಿಗಳ ಹಕ್ಕು ಮತ್ತು ಜೀವನ ವಿಧಾನ ಮಾನ್ಯ ಮಾಡದೆ ಅವರ ಶತಮಾನಗಳ ಅವಮಾನ, ತಾರತಮ್ಯ ಹೋಗಲಾಡಿಸುವುದು - ಸಾಧ್ಯವಿಲ್ಲ. ಭೂಸುಧಾರಣೆಯ ಪ್ರಯತ್ನಗಳು ಸ್ವಾಭಾವಿಕವಾಗಿಯೇ ಆಳುವ ವರ್ಗಗಳನ್ನು ಕೆರಳಿಸಿತು. ಇದರಿಂದಾಗಿಯೇ ಅಧ್ಯಕ್ಷ ಮೊರಲೆಸ್ ಅವರನ್ನು ಹಿಂದೆ ಕರೆಸುವ ಜನ ಮತ ಸಂಗ್ರಹಕ್ಕೆ ಒತ್ತಡ ಹೇರಲಾಯಿತು. ಆದರೆ ಶೇ. 67 ಜನ ಅಧ್ಯಕ್ಷ ಮೊರಲೆಸ್ ಅವರು ಮುಂದುವರೆಯಬೇಕು ಎಂದು ಮತ ನೀಡಿ ಆ ಪ್ರಯತ್ನ ವಿಫಲವಾಯಿತು. ಹಿಂದಿನ ಸಂವಿಧಾನ ಆಳುವ ವರ್ಗಗಳ ಹಿತಾಸಕ್ತಿ ಕಾಪಾಡಲು ಮಾಡಿದ ಸಂವಿಧಾನ. ಮೂಲಭೂತ ಬದಲಾವಣೆಗಳನ್ನು ಸಂವಿಧಾನ ಆಮೂಲಾಗ್ರವಾಗಿ ಬದಲಾವಣೆ ಮಾಡದೆ ಸಾಧ್ಯವಿರಲಿಲ್ಲ.

ಆಳುವ ವರ್ಗಗಳಲ್ಲದೆ ಅವರ ಮಾಧ್ಯಮಗಳು ಜನ ಮತ ಸಂಗ್ರಹದ ಸಂದರ್ಭದಲ್ಲಿ ಮೊರಲೆಸ್ ಸರ್ಕಾರದ ವಿರುದ್ಧ ಕೆಲಸ ಮಾಡಿದವು. ಅಮೆರಿಕದ ರಾಯಭಾರಿ ಸಹ ಬಹಿರಂಗವಾಗಿಯೇ ವಿರೋಧ ಪಕ್ಷಗಳ ಒಡಗೂಡಿ ಮೊರಲೆಸ್ ಸರ್ಕಾರದ ವಿರುದ್ಧ ನಿಂತ. ವಿರೋಧ ಪಕ್ಷಗಳನ್ನು ಸರ್ಕಾರದ ವಿರುದ್ಧ ಪ್ರಚೋದಿಸಿದ. 2007 ಒಂದೇ ವರ್ಷದಲ್ಲಿ ಮೊರಲೆಸ್ ಸರ್ಕಾರ ಉರುಳಿಸಲು 9 ಕೋಟಿ ಡಾಲರಿನಷ್ಟು ಹಣ ಅಮೆರಿಕದ ಸರ್ಕಾರದಿಂದ ಹರಿದು ಬಂತು. ಈ ಎಲ್ಲವನ್ನೂ ಗಮನಿಸಿ ಅಮೆರಿಕದ ರಾಯಭಾರಿಯನ್ನು ದೇಶದಿಂದ ಹೊರ ಹಾಕಲಾಯಿತು.

ಹೊಸ ಸಂವಿಧಾನದಲ್ಲಿ ಖಾಸಗಿ ಆಸ್ತಿಗೆ ಐದು ಸಾವಿರ ಹೆಕ್ಟೇರ್ ಮಿತಿ ಹೇರಲಾಗಿದೆ. ತೈಲ ಗ್ಯಾಸ್ ಖನಿಜ ಮತ್ತು ನೀರು ಮುಂತಾದ ದೇಶದ ಪ್ರಾಕೃತಿಕ ಸಂಪತ್ತು ಸರ್ಕಾರೀ ಒಡೆತನಕ್ಕೆ ಬರುತ್ತದೆ. ಪಾರ್ಲಿಮೆಂಟು ಸದಸ್ಯರ ಮೇಲೆ ಕ್ರಿಮಿನಲ್ ಕೇಸು ಹಾಕುವಂತಿಲ್ಲ ಎಂಬ ಹಳೆಯ ನಿರ್ಬಂಧ ತೆಗೆದು ಹಾಕಲಾಗಿದೆ. ಜಜ್ ಗಳನ್ನು ಮೂರನೇ ಎರಡು



ಬಹುಮತದಿಂದ ಪಾರ್ಲಿಮೆಂಟು ನೇಮಿಸುತ್ತದೆ. 36 ಆದಿವಾಸಿ ಭಾಷೆಗಳಿಗೆ ಅಧಿಕೃತ ಭಾಷೆಯ ಸ್ಥಾನ ಕೊಡಲಾಗಿದೆ. ಅದೇ ರೀತಿ ಆದಿವಾಸಿಗಳ ಧರ್ಮಕ್ಕೂ ಸಮಾನ ಸ್ಥಾನ ಕೊಡಲಾಗಿದೆ. ಬೊಲಿವಿಯ 'ಬಹು ಧರ್ಮಿಯ ಬಹು-ಭಾಷೀಯ ದೇಶ' ಎಂದು ಸಂವಿದಾನ ಹೇಳುತ್ತದೆ.

ಬೊಲಿವಿಯದಲ್ಲಿ ಅಮೆರಿಕಕ್ಕೆ ಸೇನಾ ಕೊಡುವಂತಿಲ್ಲ. ಧಾರ್ಮಿಕ ಸ್ವಾತಂತ್ರ್ಯ ಕೊಡಲಾ ಧರ್ಮ ಮತ್ತು ಸರ್ಕಾರ ಗಳನ್ನು ಪ್ರತ್ಯೇಕ ಇಡ ಎನ್ನಲಾಗಿದೆ. ಮುನಿಸಿಪಾಲಿಟಿಯಂತಹ ಸ್ಥಳ ಸಂಸ್ಥೆಗಳು, ಪ್ರಮುಖ ಸರ್ಕಾರೀ ಖಾತೆಗಳು ಆದಿವಾಸಿಗಳಿಗೆ ಹೆಚ್ಚಿನ ಅಧಿಕಾರ ಮತ್ತು ಸ್ವಾಯ ಕೊಡಲಾಗಿದೆ. ಪ್ರತೀ ವ್ಯಕ್ತಿಗೆ ಶಿಕ್ಷಣ, ಸಾಮಾ ಭದ್ರತೆ ಮತ್ತು ಭೂಮಿಯ ಹಕ್ಕು ಇರುತ್ತದೆ.

ಹೊಸ ಸಂವಿಧಾನದ ಪ್ರಮುಖ ಅಂಶಗ

ಈ ಭಾರೀ ಮುಖಭಂಗದ ನಂತರ ವಿರೋಧ ಪಕ್ಷಗಳು ಪಾಠ ಕಲಿತಿಲ್ಲ. ಸಂಗ್ರಹದಲ್ಲಿ ಬಹುಮತ ಬರದ ರಾಜ್ ಹೊಸ ಸಂವಿದಾನ ಜಾರಿಗೆ ತರಬಾರ ಇಲ್ಲವೇ ಪ್ರತ್ಯೇಕವಾಗುವ ಹಕ್ಕು ಇರಬೇಕ ಒತ್ತಾಯಿಸುತ್ತಿದ್ದಾರೆ. ಮುಂ ಚುನಾವಣೆಯಲ್ಲಿ ಮೊರಲೆಸ್ ಸೋಲಿ ಪಣ ತೊಟ್ಟಿದ್ದಾರೆ. 'ನಮಗೆ 500 ವರ್ಷ ನಂತರ ಪುನಃ ಅಧಿಕಾರ ಸಿಕ್ಕಿದೆ. ಅ ಕಸಿದುಕೊಳ್ಳಲು ನಾವು ಸುತರಾ ಬಿಡುವುದಿಲ್ಲ' ಎಂದು ಒಬ್ಬ ಆದಿವಾಸಿ ಹೇಳಿದ ಆತ ಬೊಲಿವಿಯದ ಎಲ್ಲಾ ಆದಿವಾಸಿಗಳು ಬಡವರ ಪರವಾಗಿ ಮಾತಾಡಿದ್ದಾನೆ. ಅವರೂ ತೊಟ್ಟಿದ್ದಾರೆ. ಈ ಹೊಸ ಸಂವಿಧಾನವನ್ನು ಪ್ರಾಣ ಕೊಟ್ಟಾದರೂ ರಕ್ಷಿಸುತ್ತೇವೆ ಅಂತ.

ಎರಡು ಲಕ್ಷ ಶ್ರೀಲಂಕಾ ತಮಿಳು ನಾಗರಿಕರು ಅಪಾಯದಲ್ಲಿ

ಶ್ರೀಲಂಕಾದ ಅಂತರ್ಯುದ್ಧದಲ್ಲಿ ಸೈನ್ಯ ಎಲ್.ಟಿ.ಟಿ.ಇ. ಮೇಲೆ ಮೇಲುಗೈ ಸಾಧಿಸುತ್ತಾ ನಾಗರಿಕರ ಪರಿಸ್ಥಿತಿ ಗಂಭೀರವಾಗುತ್ತಿದೆ. ಈ ಅಂತರ್ಯುದ್ಧದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ತಮಿಳು ನಾಗರಿಕರು ಸಿಕ್ಕಿ ಬಿದ್ದು ನರಳುತ್ತಿದ್ದಾರೆ. ಮುಲತೀವು ಜಿಲ್ಲೆ ಭೀಕರ ಯುದ್ಧ ನಡೆಯುತ್ತಿದ್ದು ಒಂದೇ ದಿನದಲ್ಲಿ 52 ಜನ ಸತ್ತು ಕನಿಷ್ಟ 80 ಜನ ಗಾಯಗೊಂಡಿದ್ದಾರೆ. ಎರಡು ಆಸ್ಪತ್ರೆಗಳು ಬಾಂಬ್ ಅಥವಾ ಶೆಲ್ ದಾಳಿಯಲ್ಲಿ ನಿರ್ನಾಮವಾಗಿವೆ. ಗಾಯಗೊಂಡವರ ಚಿಕಿತ್ಸೆಗೂ ಅವರು ಯುದ್ಧಭೂಮಿಯಿಂದ ಹೊರಗೆ ಶಾಂತಿ ಮತ್ತು ಭದ್ರತೆ ಇರುವ ಪ್ರದೇಶಗಳಿಗೆ ಬರಲು ಅವಕಾಶ ಇಲ್ಲ. ಈ ಭೀಕರ ಪರಿಸ್ಥಿತಿಗೆ ಶ್ರೀಲಂಕಾ ಸೈನ್ಯ ಮತ್ತು ಎಲ್.ಟಿ.ಟಿ.ಇ. ಪರಸ್ಪರ ದೋಷಾರೋಪಣೆ ಮಾಡುತ್ತಿವೆ. ಪರಿಸ್ಥಿತಿ ಎಷ್ಟು ಭೀಕರವಾಗಿದೆಯೆಂದರೆ ವಿಶ್ವಸಂಸ್ಥೆಯಂತಹ ಸಂಘಟನೆಯಿಂದ ಅಂತರ್ರಾಷ್ಟ್ರೀಯ ಮಧ್ಯ ಪ್ರವೇಶ ಇಲ್ಲದೆ ಜನರ ರಕ್ಷಣೆ ಸಾಧ್ಯವಾಗುವಂತಿಲ್ಲ. ಭಾರತ ಸರ್ಕಾರ ಇಂತಹ ಮಧ್ಯ ಪ್ರವೇಶಕ್ಕೆ ವಿಶ್ವಸಂಸ್ಥೆ ಮೇಲೆ ಒತ್ತಡ ಹಾಕಬೇಕು.

ಇದಲ್ಲದೆ ಕೆಲವು ಮಿಲಿಟರಿ ಜಯಗಳ ಉತ್ತೇಜಿತವಾದ ಶ್ರೀಲಂಕಾ ಸರ್ಕಾರ ತಮಿ ಸಮಸ್ಯೆಗೆ ಮಿಲಿಟರಿ ಪರಿಹಾರ ಬಿಟ್ಟು ಬ ಯಾವುದೇ ಕ್ರಮದ ಬಗ್ಗೆ ಯೋಚಿಸುತ್ತಿಲ್ಲ. ತಮಿ ಸಮಸ್ಯೆಗೆ ಎಲ್ಲಾ ರಾಜಕೀಯ ಶಕ್ತಿಗಳ ಒಳಗೊಳ್ಳುವ ರಾಜಕೀಯ ಪರಿಹಾರದತ್ತ ಯ ಕ್ರಮ ಕೈಗೊಳ್ಳುವ ಸೂಚನೆ ಕಾಣುತ್ತಿಲ್ಲ. ವಿದ ಮಂತ್ರಿಗಳ ಶ್ರೀಲಂಕಾ ಭೇಟಿ ಮೂಲಕ ಭಾ ಸರ್ಕಾರ ಈ ದಿಕ್ಕಿನತ್ತ ಹಾಕಿದ ಒತ್ತಡ ಸಹ ಕೆ ಮಾಡುವಂತೆ ಕಾಣುತ್ತಿಲ್ಲ. ಸಾರ್ವಭೌಮ ಶ್ರೀಲಂಕಾದ ಒಳಗೆ ತಮಿಳರಿಗೆ ಸ್ವಾಯ ಒದಗಿಸುವ ರಾಜಕೀಯ ಪರಿಹಾರದ ಶ್ರೀಲಂಕಾ ಸರ್ಕಾರ ಪ್ರಣಬ್ ಮುಖರ್ಜಿ ಅವ ಕೊಟ್ಟ ಆಶ್ವಾಸನೆ ಜಾರಿ ಮಾಡುವಂತೆ ರಾಜಕೀ ಮತ್ತು ರಾಜತಾಂತ್ರಿಕ ಒತ್ತಡ ಹಾಕು ಅನಿವಾರ್ಯವಾಗಿದೆ.

...ವಾಳಿಕೋರತನದ ಎರಡು ಮುಖಗಳು

...ಂದ

...ಗಳು, ವಿಮಾ ಕಂಪನಿಗಳು ಕುಸಿಯುತ್ತಿದ್ದರೂ,
...ೋಹನಸಿಂಗ್ ಸರಕಾರ ಕಳೆದ ಸಂಸತ್ತು
...ಶನದಲ್ಲಿ ವಿಮಾ ವಲಯದಲ್ಲಿ ವಿದೇಶಿ ನೇರ
...(ಎಫ್‌ಡಿಐ)ಯನ್ನು ಶೇಕಡಾ 26ರಿಂದ 49ಕ್ಕೆ
...ವ ಶಾಸನವನ್ನು ತಂದಿದೆ.
...ು ಏನನ್ನು ತೋರಿಸುತ್ತದೆ? ಕಾಂಗ್ರೆಸ್ ಅಧ್ಯಕ್ಷರ
...ಗಳಿಗೆ ತದ್ವಿರುದ್ಧವಾಗಿ ಮನಮೋಹನ್ ಸಿಂಗ್
...ರ ತಾವು ಹಣಕಾಸು ಬಂಡವಾಳದ ವಾಲ್
... ಮಾದರಿಯನ್ನು ಗುಲಾಮರಂತೆ
...ರಿಸುವವರೇ ವಿನಃ ಬೇರೇನೂ ಅಲ್ಲ ಎಂದು
...ು ಪಡಿಸಿದೆ. ತಮ್ಮ ಆಳ್ವಿಕೆಯ ಕೊನೆಯ
...ಲ್ಲೂ ಕೂಡಾ ಕಾಂಗ್ರೆಸ್ ಆಳರಸರು
...ಣೆಗಳನ್ನೇ ಬದಲಿಸಲು - ನಾಗರಿಕ
...ಾನ ವಲಯದಲ್ಲಿ ವಿದೇಶಿ ವಿಮಾನಯಾನ
...ಗೆ ಎಫ್‌ಡಿಐಗೆ ಅವಕಾಶ ನೀಡಲು, ಇತರ
...ಗಳಲ್ಲಿ ಎಫ್‌ಡಿಐ ಹೂಡಿಕೆಯ ವ್ಯಾಖ್ಯೆಯನ್ನು
...ೀಕರಿಸಲು -ಹಗಲಿರುಳು ದುಡಿಯುತ್ತಿದ್ದಾರೆ!

...ದ್ಧಾಪರಾಧಿಗಳ ಜೊತೆ ಗೂಡುವ ರಾಹುಲರ ... ಕ್ರಾಂತಿ'

...ನಾವಣೆಗಳು ಸಮೀಪಿಸುತ್ತಿರುವಾಗ ಸರಕಾರದ
... ನಿರ್ವಹಣೆ ಶೋಚನೀಯವಾಗಿರುವುದರಿಂದ
...ಸ್ ಮುಖಂಡತ್ವ ಪಾಕಿಸ್ತಾನದ ಮೇಲೆ,
...ೈ ಭಯೋತ್ಪಾದಕ ದಾಳಿಗಳ ಮೇಲೆ ಗಮನ
...ೀಕರಿಸುವಂತಾಗಿದೆ. ಕಾಂಗ್ರೆಸ್ ಮುಖಂಡತ್ವ
... ಮಂತ್ರಿಗಳು ಪಾಕಿಸ್ತಾನ ಕೈಗೊಳ್ಳಬೇಕಾದ
...ೆ ಬಗ್ಗೆ ಹೇಳಿಕೆಗಳನ್ನು ಕೊಡದ ದಿನವೇ ಇಲ್ಲ.
...ಮುಂಬೈ ದಾಳಿಯ ನಂತರದ ಮನಮೋಹನ್
... ಸರಕಾರದ ಕ್ರಿಯೆಗಳು ಭಾರತವನ್ನು
...ಕೆಯ ತೆಕ್ಕೆಯೊಳಗೆ ಮತ್ತಷ್ಟು ಬಂಧಿಸಿವೆ.
... ಸರಕಾರ ಅಲ್ಲಿರುವ ಭಯೋತ್ಪಾದಕ
...ಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ

ಮಾಡಲು ಅದು ಕೇವಲ ಅಮೆರಿಕಾವನ್ನೇ ಅವಲಂಬಿಸಿದೆ. ಹಿಂದೆಂದೂ ಮಾಡದ ರೀತಿಯಲ್ಲಿ ಅಮೆರಿಕಾದ ತನಿಖಾ ಸಂಸ್ಥೆ ಎಫ್‌ಬಿಐನ್ನು ಮುಂಬೈ ದಾಳಿಯ ತನಿಖೆಯೊಳಗೆ ತರಲಾಗಿದೆ. ಎಫ್‌ಬಿಐ ಭಯೋತ್ಪಾದಕ ತಂಡದಲ್ಲಿ ಬದುಕುಳಿದ ಏಕೈಕ ವ್ಯಕ್ತಿ ಕಸಬ್‌ನ ತನಿಖೆ ನಡೆಸಿತಷ್ಟೇ ಅಲ್ಲ, ಹಿಂದಿನ ಒಂದು ಮೊಕದ್ದಮೆಯಲ್ಲಿ ಜೈಲಿನಲ್ಲಿರಿಸಿದ ಇನ್ನೊಬ್ಬ ಶಂಕಿತನ ತನಿಖೆ ನಡೆಸಲು ಕೂಡಾ ಅದಕ್ಕೆ ಅವಕಾಶ ನೀಡಲಾಗಿದೆ. ಸಾಮರಿಕ ಮೈತ್ರಿಯ ತರ್ಕವನ್ನು ಈಗ ಮತ್ತಷ್ಟು ವಿಸ್ತರಣೆಗೊಂಡು ಅಮೆರಿಕನ್ ಭದ್ರತಾ ಸಂಸ್ಥೆಗಳು ನಮ್ಮ ಆಂತರಿಕ ಭದ್ರತಾ ವಿಷಯಗಳಲ್ಲಿ ತೊಡಗಲು ಅವಕಾಶವಾಗಿದೆ.

ರಾಹುಲ್ ಗಾಂಧಿ ತನ್ನ ಭಾಷಣದಲ್ಲಿ ಇಂಧನ ವಲಯದಲ್ಲಿ 'ಹೊಸ ಕ್ರಾಂತಿ'ಯ ಬಗ್ಗೆ ಮಾತಾಡಿದರು, ಭಾರತ-ಅಮೆರಿಕಾ ಪರಮಾಣು ವ್ಯವಹಾರದ ಫಲವಾಗಿ ಇದು ಬಂದಿದೆ ಎಂದರು. ಆದರೆ ರಾಹುಲ್ ಗಾಂಧಿ ಹಾಡಿಹೊಗಳುವ ಪರಮಾಣು ವ್ಯವಹಾರ ಮತ್ತು ಸಾಮರಿಕ ಮೈತ್ರಿ ಹೇಗೆ ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಬುಡಮೇಲು ಮಾಡುತ್ತಿದೆ ಎಂಬುದನ್ನು ದೇಶ ಕಾಣುತ್ತಿದೆ. ಮುಂಬೈಯಲ್ಲಿ ಎಫ್‌ಬಿಐ ಮತ್ತು ಕಾಶ್ಮೀರದಲ್ಲಿ ಇಸ್ರೇಲಿ ಸೇನಾಧಿಪತಿ ಭಾರತ-ಅಮೆರಿಕ-ಇಸ್ರೇಲ್ ಕೂಟದ ಸ್ವರೂಪ ಎಂತಹುದು ಎಂಬುದರ ಸಾರಾಂಶ. ಗಾಜಾದಲ್ಲಿ ಪ್ಯಾಲಸ್ಟೇನಿಯನ್ನರ ಮಾರಣ ಹೋಮ ಮಾಡಿದರೇನಂತೆ, ಯುದ್ಧಾಪರಾಧ ಎಸಗುವ ಆ ಇಸ್ರೇಲೀಗಳು ನಮ್ಮ ಭದ್ರತಾ ಜೊತೆಗಾರರು!

ಬಿಜೆಪಿಯ ಭಯ, ಕಾಂಗ್ರೆಸ್‌ನ ಭ್ರಮೆ

ಇಂತಹ ಕಾಂಗ್ರೆಸ್ ಮತ್ತು ಬಿಜೆಪಿ ದೇಶಕ್ಕೆ ನಾಯಕತ್ವ ನೀಡಲು ತಮಗೆ ಜನಾದೇಶ ಕೇಳುತ್ತಿವೆ. ಆದರೆ ಅವರ ದಿಲ್ಲಿ ಮತ್ತು ನಾಗಪುರ ಅಧಿವೇಶನಗಳು ಇವೆರಡೂ ಪಕ್ಷಗಳ ದಿವಾಳಿಕೋರತನವನ್ನು ಪ್ರದರ್ಶಿಸಿವೆ. ಈ ಎರಡೂ ಪಕ್ಷಗಳು ಚುನಾವಣಾ ಸ್ಪರ್ಧೆ ತಮ್ಮ ನಡುವೆ ಮಾತ್ರ ಎಂದು ಬಿಂಬಿಸುವ ತವಕದಲ್ಲಿವೆ. 'ದೇಶದಲ್ಲಿ ಎರಡು ಮೈತ್ರಿಕೂಟಗಳ ನಡುವೆ ನೇರ ಸ್ಪರ್ಧೆ ನಡೆಯುತ್ತಿರುವುದು ಇದೇ ಮೊದಲ ಬಾರಿ' ಎಂದು ಬಿಜೆಪಿ ಅಧ್ಯಕ್ಷರು ಸಾರಿದ್ದಾರೆ. ಇದಕ್ಕೆ ಆಧಾರವೇ ಇಲ್ಲ. ಏಕೆಂದರೆ ಕಾಂಗ್ರೆಸ್ ತನಗೆ ಯಾವುದೇ ರಾಷ್ಟ್ರೀಯ ಮೈತ್ರಿ ಇಲ್ಲ ಎಂದು ಘೋಷಿಸಿದೆ. ಎಲ್.ಕೆ.ಅಡ್ವಾಣಿಯವರಿಗಂತೂ ಹೆಚ್ಚು ಅನುಮಾನವಿದೆ. 'ಆದರೆ 1996ರ ಪ್ರಯೋಗವನ್ನು ಪುನರಾವರ್ತಿಸಲು ಕೆಲಸ ಮಾಡಬೇಕೆಂಬ ಯೋಚನೆ ಹಲವು ವಲಯಗಳಲ್ಲಿ ಇರುವುದು ಗಾಬರಿ ಹುಟ್ಟಿಸುತ್ತದೆ' ಎಂದು ಅವರು ಹೇಳಿದ್ದಾರೆ. ಮುಂದುವರೆದು ಅವರು '1996ರ ಪ್ರಹಸನ' ಮತ್ತೆ ನಡೆಯಬಾರದು ಎಂಬ ಆಶಯ ವ್ಯಕ್ತ ಮಾಡಿದ್ದಾರೆ. ಬಿಜೆಪಿಯೇತರ, ಕಾಂಗ್ರೆಸ್ಸೇತರ ಪಕ್ಷಗಳು ಒಂದುಗೂಡುತ್ತಿವೆಯೆಂಬ ಭಯ ಬಿಜೆಪಿಯನ್ನು ಕಾಡುತ್ತಿರುವಂತೆ ಕಾಣುತ್ತದೆ.

ಇನ್ನು ಕಾಂಗ್ರೆಸ್ ಪಕ್ಷ ಎಲ್ಲಾ ಜಾತ್ಯಾತೀತ ಶಕ್ತಿಗಳು ಅಣಿನೆರೆಯಬಹುದಾದ ಕೇಂದ್ರವೇ ತಾವು ಎಂದು ಹೇಳಿಕೊಳ್ಳುತ್ತಿದೆ. 2004ರ ಚುನಾವಣೆಗಳ ಮೊದಲಿನ ಸನ್ನಿವೇಶವನ್ನು ಅದು ನೆನಪು ಮಾಡಿಕೊಡುತ್ತದೆ. ಆದರೆ ಈ ಹೋಲಿಕೆಗೂ ಆಧಾರವಿಲ್ಲ. 2009 ರ ರಾಜಕೀಯ ಸನ್ನಿವೇಶ 2004ರ ಸನ್ನಿವೇಶದ ಪುನರಾವರ್ತನೆಯಲ್ಲ. ಆಗ ಬಿಜೆಪಿಯ ಆರು ವರ್ಷಗಳ ದುರಾಡಳಿತ ಮತ್ತು ಕೋಮುವಾದದ ವಿರುದ್ಧ ಹೋರಾಟ ನಡೆಸುವುದು ಒಂದು ಕೇಂದ್ರ ಗುರಿಯಾಗಿತ್ತು. ಈಗ ಐದು ವರ್ಷಗಳ ಕಾಂಗ್ರೆಸ್ ನೇತೃತ್ವದ ಸರಕಾರದ ನಂತರ ದೇಶವನ್ನು ಮತ್ತೊಮ್ಮೆ ಕಾಂಗ್ರೆಸ್ ಮುಖಂಡರ 'ಆಪ್ತ ಬಂಡವಾಳಶಾಹಿ'ಗೆ, ನವ-ಉದಾರವಾದಿ ಗೊಡ್ಡುತನಕ್ಕೆ ಭಾರತವನ್ನು ಅಮೆರಿಕಾದ ಕಿರಿಯ ಜೊತೆಗಾರನಾಗಿ ಪರಿವರ್ತಿಸಲು ನೆಹರೂ ಪರಂಪರೆಗೇ ಎಳ್ಳು ನೀರು ಬಿಡುವವರ ಆಳ್ವಿಕೆಗೆ ಒಡ್ಡಲು ಸಾಧ್ಯವಿಲ್ಲ.

ಸಿಪಿಐ(ಎಂ) ಒಂದು ಪರಿಣಾಮಕಾರೀ ಚುನಾವಣಾ ಪರ್ಯಾಯವನ್ನು ಮುಂದಿಡಲು ಒಂದು ಜಂಟಿ ವೇದಿಕೆಯಲ್ಲಿ ಒಟ್ಟುಗೂಡಬೇಕು ಎಂದು ಕಾಂಗ್ರೆಸೇತರ ಜಾತ್ಯಾತೀತ ಪಕ್ಷಗಳಿಗೆ ಕರೆ ನೀಡಿದೆ.

> ನಾಗಪುರದಲ್ಲಿ ಬಿಜೆಪಿ ಅಧಿವೇಶನ ಅದು ಒಂದೆಡೆ ಹಿಂದುತ್ವಕ್ಕೆ ಬದ್ಧವಾಗಿರಬೇಕಾಗಿದ್ದು ಇನ್ನೊಂದೆಡೆ ಸಮಾಜದ ವಿಶಾಲ ವಿಭಾಗಗಳನ್ನು ಮತ್ತು ರಾಜಕೀಯ ಶಕ್ತಿಗಳನ್ನು ಆಕರ್ಷಿಸಬಲ್ಲ ಒಂದು ರಾಷ್ಟ್ರೀಯ ಪಕ್ಷ ಎಂದು ತೋರ್ಪಡಿಸಿಕೊಳ್ಳಬೇಕಾದ ವೈರುಧ್ಯದಲ್ಲಿ ಸಿಲುಕಿಕೊಂಡಿರುವ ಪಕ್ಷ ಎಂಬುದನ್ನು ದೃಢಪಡಿಸಿದರೆ, ದಿಲ್ಲಿಯಲ್ಲಿ ಕಾಂಗ್ರೆಸ್ ಏರ್ಪಡಿಸಿದ ಜಾತ್ರೆ ಕೂಡಾ ಆ ಪಕ್ಷವೂ ಎಂತಹ ಶೋಚನೀಯ ಸ್ಥಿತಿಯಲ್ಲಿದೆ ಎಂಬುದನ್ನು ಬಯಲು ಮಾಡಿತು.
>
> ಕಾಂಗ್ರೆಸ್ ನೇತೃತ್ವದ ಸರಕಾರದ ಆಳ್ವಿಕೆಯಲ್ಲಿ ?ಆಮ್ ಆದ್ಮಿ?(ಜನಸಾಮಾನ್ಯ)ಯ ಮೇಲೆ ಗಮನ ಕೇಂದ್ರೀಕರಿಸಲಾಗಿದೆ ಎಂದು ಅದರ ದಿಲ್ಲಿ ಸಮಾವೇಶ ಹೇಳಿಕೊಂಡಿದೆ. ಆದರೆ ನಿಜವಾಗಿ ಜಾಗತಿಕ ಬಿಕ್ಕಟ್ಟಿನ ಪರಿಣಾಮ ಕಾಣುವ ಮೊದಲೇ ಕಾಂಗ್ರೆಸ್ ಆಳರಸರ ಪ್ರೀತಿಯ ನವ-ಉದಾರವಾದಿ ನೀತಿಗಳಿಂದಾಗಿ ಸೂಪರ್ ಶ್ರೀಮಂತರು ಮತ್ತು ಬಡವರ ನಡುವೆ ಹಿಂದೆಂದೂ ಕಾಣದ ಕಂದಕ ಏರ್ಪಟ್ಟಿರುವುದನ್ನು ದೇಶ ಕಾಣಬೇಕಾಗಿ ಬಂದಿದೆ.
>
> ಈಗ ಎದ್ದು ಕಾಣುತ್ತಿರುವ ಸಂಗತಿಯೆಂದರೆ, ಆರ್ಥಿಕ ಬಿಕ್ಕಟ್ಟು ಕೋಟ್ಯಂತರ ಉದ್ಯೋಗಗಳು ಮತ್ತು ಬದುಕುಗಳನ್ನು ನುಂಗುತ್ತಿರುವಾಗ ಇದನ್ನು ಎದುರಿಸುವಲ್ಲಿ ಭಿನ್ನವಾದುದೇನನ್ನೂ ಮುಂದಿಡಲು ಕಾಂಗ್ರೆಸಿಗೂ ಆಗುತ್ತಿಲ್ಲ, ಬಿಜೆಪಿಗೂ ಆಗುತ್ತಿಲ್ಲ.

ಇಂತಹ ಒಂದು ವೇದಿಕೆಯನ್ನು ಜನಪರ ಆರ್ಥಿಕ ನೀತಿಗಳು, ಜಾತ್ಯಾತೀತತೆಯ ರಕ್ಷಣೆ ಮತ್ತು ಒಂದು ಸ್ವತಂತ್ರ ವಿದೇಶಾಂಗ ನೀತಿಯ ಸುತ್ತ ಕಟ್ಟಬೇಕಾಗಿದೆ. ಇಂತಹ ಒಂದು ಪರ್ಯಾಯವನ್ನು ಪ್ರಸ್ತುತ ಪಡಿಸುವ ಕೆಲಸ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳದ್ದು.

...ಗಳೂರು ಐಜಿಪಿ ವರ್ಗಾವಣೆ-ಕಣ್ಣಿಗೆ ಮಣ್ಣೆರೆಚುವ ಯತ್ನ

...ಘ ಪರಿವಾರದ ಗೂಂಡಾಗಳು ಅಮಾಯಕ
... ಮೇಲೆ ದಿನಂಪ್ರತಿ ಎಂಬಂತೆ ದಾಳಿ
...ತ್ತಿರುವ ಹಿನ್ನೆಲೆಯಲ್ಲಿ ಮಂಗಳೂರು
...ಸ್ ವರಿಷ್ಠಾಧಿಕಾರಿಯನ್ನು ವರ್ಗಾವಣೆ
...ರುವ ಕ್ರಮ ಕೇವಲ ಕಣ್ಣಿಗೆ ಮಣ್ಣೆರೆಚುವ
... ಎಂದು ಭಾರತ ಕಮ್ಯೂನಿಸ್ಟ್ ಪಕ್ಷ
...ರ್ಕ್ಸ್‌ವಾದಿ) ದ ರಾಜ್ಯ ಕಾರ್ಯದರ್ಶಿ
...ಳಿ ಟೀಕಿಸಿದೆ.
...ನೀಯ ಸಂಖ್ಯೆಯಲ್ಲಿರುವ ಗಣಪತಿ,
...ಂತ ಶೆಟ್ಟಿ ರೀತಿಯ
...ಮುವಾದೀಕರಣಗೊಂಡ ಪೋಲಿಸ್
...ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್,
...ಎಸ್‌ಐಗಳನ್ನು ಗುರುತಿಸಿ ಕರಾವಳಿ
...ದಿಂದ ಹೊರ ಹಾಕದೆ ಅಲ್ಲಿ ಕಾನೂನು
...ತವನ್ನು ಉತ್ತಮ ಪಡಿಸಲು ಸಾಧ್ಯವಿಲ್ಲ
... ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ
...ಾಯಪಟ್ಟಿದೆ.
...ೋಲಿಸರು ಸಂಘಪರಿವಾರದ
...ಸ್ಥೆಗಳಾದ ಬಜರಂಗದಳ, ವಿಶ್ವಹಿಂದೂ
...ಷತ್, ಹಿಂದೂ ಯುವಸೇನೆ
...ಳಾದವುಗಳ ಕಾರ್ಯಕರ್ತರಿಗೆ
...ವಾಗಿ ವರ್ತಿಸುವ ಅನಿವಾರ್ಯತೆಯಿಂದ
...ಡೆಗೊಳಿಸಬೇಕು.

ಎಲ್ಲಕ್ಕಿಂತ ಮೇಲಾಗಿ ಚರ್ಚ್‌ಮೇಲೆ, ಪಬ್‌ಮೇಲಿನ ದಾಳಿ ಪ್ರಕರಣಗಳಲ್ಲಿ ಕಂಡಂತೆ ಸ್ವತಃ ಗೃಹಸಚಿವರು ಹಾಗೂ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಗಳು, ಮೌಖಿಕ ಸೂಚನೆಗಳು ಹಾಗೂ ವರ್ಗಾವಣೆಗಳ ಮೂಲಕ ಸಂಘಪರಿವಾರದ ಕಾರ್ಯಕರ್ತರಿಗೆ ಕಾನೂನು ಕೈಗೆ ತೆಗೆದುಕೊಳ್ಳುವುದಕ್ಕೆ ನೀಡುತ್ತಿರುವ ಉತ್ತೇಜನವನ್ನು ಕೈಬಿಡಬೇಕು. ಪ್ರಜಾಪ್ರಭುತ್ವದ ಹಕ್ಕುಗಳು ಹಾಗೂ ಕಾನೂನುಗಳ ನಿರಂತರ ಉಲ್ಲಂಘನೆಯಾದ ಹತ್ತಾರು ಪ್ರಕರಣಗಳಲ್ಲಿ ಭಾಗಿಯಾದ ಗೂಂಡಾಗಳ ಮೇಲೆ ದೃಢವಾದ ಕ್ರಮ ತೆಗೆದುಕೊಳ್ಳಲು ಪೋಲಿಸರಿಗೆ ಸ್ವಾತಂತ್ರ್ಯ ನೀಡಬೇಕು. ಒಟ್ಟಿನಲ್ಲಿ ಸರ್ಕಾರದ ಪೋಲಿಸ್ ನೀತಿ ಬದಲಾಗಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿಸಿದೆ.

ಅಶ್ವಿನಿಯ ಆತ್ಮಹತ್ಯೆ : ಅಶ್ವಿನಿ ಎಂಬ ಬಾಲಕಿಯ ಆತ್ಮಹತ್ಯೆಗೆ ಸಂಬಂಧಿಸಿ ನಿಷ್ಪಕ್ಷಪಾತವಾದ ತನಿಖೆಗೆ ಆದೇಶಿಸಬೇಕು. ಈ ಸಂದರ್ಭದಲ್ಲಿ ಬಸ್‌ನ ಕಂಡಕ್ಟರ್ ರಫೀಕ್ ಮೇಲೆ ಧಾಳಿಮಾಡಿದ ಹಾಗೂ ಸಲೀಂ, ಅಶ್ವಿನಿಯವರ ಮೇಲೆ ಹಲ್ಲೆಮಾಡಿದ ಗೂಂಡಾಗಳನ್ನು ತಕ್ಷಣವೇ ಬಂಧಿಸಬೇಕು. ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿಸಿದೆ.

ಸಮರ ಶೀಲ ಹೋರಾಟಕ್ಕೆ ಸಾಮೂಹಿಕ ಸಂಘಟನೆಗಳ ಕರೆ.

ಸಿಐಟಿಯು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ,ಎಸ್.ಎಫ್.ಐ, ಡಿವೈಎಫ್ಐ ಹೀಗೆ ವಿವಿಧ ಸಾಮೂಹಿಕ ಸಂಘಟನೆಗಳು ಆಯಾ ವಿಭಾಗದ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ನಡೆಸುತ್ತಿವೆ.

ಸಿಐಟಿಯು ನೇತೃತ್ವದಲ್ಲಿ ಕನಿಷ್ಟ ವೇತನ ತಿಂಗಳಿಗೆ, ಬೆಂಗಳೂರಿನಲ್ಲಿ ರೂ.10000 ಹಾಗೂ ಇತರೆ ಪ್ರದೇಶಗಳಲ್ಲಿ ರೂ. 6000/– ಕ್ಕೆ ಒತ್ತಾಯಿಸಿ ಫೆಬ್ರವರಿ 5 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆದಿದೆ. ಹಾಗೆಯೇ ಕರ್ನಾಟಕ ಪ್ರಾಂತ ರೈತ ಸಂಘ, ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿ ಮತ್ತು 150 ದಿನಗಳಿಗೆ ವಿಸ್ತರಣೆ, ಕೂಲಿಯನ್ನು ರೂ. 150 ಕ್ಕೆ ಹೆಚ್ಚಿಸುವುದು, ರೂ 50000 ಆದಾಯದ ವರೆಗೆ ರೇಷನ್ ಕಾರ್ಡ್ ಮನೆ ನಿವೇಶನ ಇತ್ಯಾದಿ ಬೇಡಿಕೆಗಳನ್ನಿಟ್ಟು ಜನವರಿ 28 ರಂದು ಜಿಲ್ಲಾ/ತಾಲ್ಲೂಕು ಮಟ್ಟಗಳಲ್ಲಿ ಹೋರಾಟ ನಡೆಸಿವೆ. ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ, ಸಮಾನ ಕೂಲಿ ಇತ್ಯಾದಿ ಬೇಡಿಕೆಗಳಿಗಾಗಿ ಜೆ.ಎಂ.ಎಸ್ ಹೋರಾಟ ನಡೆಸಿದ್ದು ವಿದ್ಯಾರ್ಥಿ, ಯುವಜನರ ಬೇಡಿಕೆಗಳಿಗಾಗಿ ಎಸ್.ಎಫ್.ಐ ಮತ್ತು ಡಿವೈಎಫ್ಐ ಹೋರಾಟ ನಡೆಸುತ್ತಾ ಬಂದಿವೆ.

ಇದೇ ಸಂದರ್ಭದಲ್ಲಿ ಜನರ ಐಕ್ಯತೆಯನ್ನು ಮುರಿಯುವ ಭಯೋತ್ಪಾದನೆ ಹಾಗೂ ಕೋಮುವಾದದ ವಿರುದ್ಧ ಎಲ್ಲಾ ಸಂಘಟನೆಗಳೂ ಪ್ರಚಾರಾಂದೋಲನ ನಡೆಸಿವೆ.

ಈ ಹೋರಾಟಗಳನ್ನು ಇನ್ನೂ ತೀವ್ರಗೊಳಿಸಲು ಈ ಸಂಘಟನೆಗಳು ನಿರ್ಧರಿಸಿದ್ದು ಮಾರ್ಚ್ 2 ರಿಂದ 5 ರ ವರೆಗೆ ತಾಲ್ಲೂಕು ಕೇಂದ್ರಗಳಲ್ಲಿ ತಹಶಿಲ್ದಾರ್ ಕಛೇರಿಯ ಮುಂದೆ ಸಮರಶೀಲ ಹೋರಾಟ ನಡೆಸಲು ನಿರ್ಧರಿಸಿವೆ. ಸ್ಥಳೀಯ ಮಟ್ಟದಲ್ಲಿ ಬೇಡಿಕೆಗಳನ್ನು ಈಡೇರಿಸುವವರೆಗೂ ಚಳುವಳಿಯನ್ನು ತೀವ್ರಗೊಳಿಸುವಂತೆ ಈ ಸಾಮೂಹಿಕ ಸಂಘಟನೆಗಳ ಮುಖಂಡರು ಪ್ರತ್ಯೇಕವಾಗಿ ತಮ್ಮ ಘಟಕಗಳಿಗೆ, ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.



ಮಾಧ್ಯಮಗಳಲ್ಲಿ ಮೌಢ್ಯತೆ

ಇಂದಿನ ಆದುನಿಕ ಜಗತ್ತಿನಲ್ಲಿ ವಿಜ್ಞಾನ ಎಷ್ಟು ಬೆಳೆದರೂ, ಒಂದು ಗಾದೆ ಹೇಳುವಂತೆ "ಬೆಕ್ಕಿಗೆ ಒಂಬತ್ತು ಜೀವಗಳಿವೆ, ಮೂಢನಂಬಿಕೆಗಳಿಗೆ ಒಂಬತಲ್ಲ ತೊಂಬತ್ತೊಂಬತ್ತು ಇವೆ". ಈಗಲೂ ಜನರ ನಡುವೆ ಮೂಡನಂಬಿಕೆ ಗಳು ವ್ಯಾಪಕವಾಗಿ ಬೆಳೆಯುತ್ತಿದೆ. ಅದು ಮುಖ್ಯವಾಗಿ ಟೆಲಿವಿಷನ್ ಮೂಲಕ ಜ್ಯೋತಿಷ್ಯ, ವಿಚಿತ್ರ ದೈವಿಕ ಶಕ್ತಿಯಂಥಹ ಕಾರ್ಯಕ್ರಮಗಳು ದಿನವಿಡಿ ಪ್ರಸಾರವಾಗುತ್ತಾ ಜನರ ನಡುವೆ ಮೌಢ್ಯತೆಯನ್ನು ಹೆಚ್ಚಿಸುತ್ತಿವೆ. ಹಲವು ಚಾನಲ್‌ಗಳು ಇದನ್ನೇ ಬಂಡವಾಳವಾಗಿಸಿ ದೈವಿಕ ಶಕ್ತಿ ಮತ್ತು ಜ್ಯೋತಿಷ್ಯವನ್ನು ವೈಭವೀಕರಿಸಿ ವಾಸ್ತವಕತೆ ನಾಚುವಂತೆ ಬೊಬ್ಬೆ ಹೊಡೆಯುತ್ತಿವೆ. ಹಿಂದಿ ಚಾನಲ್‌ಗಳಾದ ಆಸ್ತಾ, ಸಂಸ್ಕಾರ ಮತ್ತು ಇಂಗ್ಲೀಷ್ ಚಾನಲ್ 'ಗಾಡ್' ತರಹದ ಚಾನಲ್‌ಗಳಲ್ಲಿ ಜನರ ನಿಜವಾದ ಸಮಸ್ಯೆಗಳನ್ನು ಮರೆಮಾಚಿ ಇಲ್ಲದ ಪುರಾಣ ಹೇಳಿ ಜನರಿಗೆ ದಾರಿ ತಪ್ಪಿಸುತ್ತಾ, ತಮ್ಮ ಹೊಟ್ಟೆಪಾಡಿಗಾಗಿ ಬರೀ ಹೋಳು ಬಿಡುವ ಢೋಂಗಿ ಜ್ಯೋತಿಷಿಗಳು ಮತ್ತು ಸ್ವಾಮೀಜಿಗಳಿಂದ ಕಾರ್ಯಕ್ರಮ ನಡೆಸಿಕೊಡಲಾಗುತ್ತದೆ. ಇಂದು ಮನುಷ್ಯರ ಸಮಸ್ಯೆಗಳಿಗೆ ವೈದ್ಯಕೀಯ, ಮನೋವಿಜ್ಞಾನಕ್ಕಿಂತ ಜ್ಯೋತಿಷಿ, ಸ್ವಾಮೀಜಿಗಳೇ ಸಕಲ ಪರಿಹಾರ ನೀಡುವ ದೇವತೆಗಳಂತೆ ಬಿಂಬಿಸಲಾಗುತ್ತಿದೆ. ಇದರ ಜೊತೆಗೆ ರಾಜಕಾರಣಿಗಳು, ಸಿನಿಮಾತಾರೆ ಕೂಡ ಜ್ಯೋತಿಷಿ, ಸ್ವಾಮೀಜಿಗಳ ಮೊರೆ ಹೋಗುವುದು ಇದಕ್ಕೆ ಇನ್ನಷ್ಟು ಪ್ರಚಾರ, ಉತ್ತೇಜನ ಕೊಡುತ್ತಿದೆ.

ಉದಯ ಟಿವಿಯ 'ಕಾಲಾಂತರ', ಈ ಟಿವಿಯ 'ವಿಸ್ಮಯ', ಟಿವಿ-9 ನಲ್ಲಿ ಬರುವ 'ಹೀಗೂ ಉಂಟೇ' ಕಾರ್ಯಕ್ರಮಗಳು ದೈನಂದಿನ ಘಟನೆಗಳಲ್ಲಿ ಸಾಮಾನ್ಯರಿಗೆ ಸೋಜಿಗವನ್ನು ಉಂಟು ಮಾಡುವ, ನಿಗೂಢ ರಹಸ್ಯದ ಹಿಂದಿರುವ ಕಾರ್ಯಕಾರಣವನ್ನು ಶೋಧನೆ ಮಾಡುವಂತೆ ನೋಡುಗರಲ್ಲಿ ಒಂದು ರೀತಿಯ ವಿಚಿತ್ರ ಕುತೂಹಲವನ್ನು ಉಂಟು ಮಾಡುತ್ತವೆ. ಸ್ಪಷ್ಟ ವೈಜ್ಞಾನಿಕ ಸಮರ್ಥನೆ ಒತ್ತೊಟ್ಟಿಗಿರಲಿ ಕನಿಷ್ಟ ವಾಸ್ತವತೆಯ ಹತ್ತಿರಕ್ಕೂ ಸುಳಿಯದ ಇಂತಹ ಕಾರ್ಯಕ್ರಮಗಳು, ನೈಜ ಘಟನೆಯ ಲೇಪನ ಹೊತ್ತು ಭ್ರಮಾತ್ಮಕ ರೂಪ ಕಟ್ಟಿಕೊಡುವ ನಿರೂಪಕನ ಕೌಶಲ್ಯಗಳಿಂದಾಗಿ ಅಂತಿಮವಾಗಿ ಸಾಧಿಸ ಹೊರಡುವುದು ಅಘೋರ ಶಕ್ತಿಯ ಮಹಿಮೆಯ ಸಾಕ್ಷಾತ್ಕಾರ ಹಾಗೂ ದೈವಿಕ ಶಕ್ತಿಯ ವೈಭವೀಕರಣ.

ಬಹುತೇಕ ಎಲ್ಲ ಚಾನೆಲ್‌ಗಳು ಬೇರೆಲ್ಲ ಗಂಭೀರ ಜ್ವಲಂತ ವಿಷಯಗಳನ್ನು ಬದಿಗಿಟ್ಟು ಹಬ್ಬ ಹರಿದಿನಗಳೆಂದು ದಿನಂಪೂರ್ತಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುತ್ತಿವೆ. ಇಂತಹ ಕಾರ್ಯಕ್ರಮಗಳಲ್ಲಿ ಹಬ್ಬದ ಸಂಪ್ರದಾಯ, ಆಚರಣೆಯ ವಿಧಾನಗಳು, ಪೂಜಾ ವಿಧಿ ವಿಧಾನಗಳ ಪ್ರತಿ ಮಗ್ಗಲುಗಳನ್ನು ನೋಡುಗರಿ ಆದರ್ಶವೆಂಬಂತೆ, ಪಾಲಿಸಲೇಬೇಕಾದ ಆಚರಣೆಗಳಂತೆ ಚಿತ್ರಿಸುತ್ತಿವೆ. ರಾಜಕಾರಣಿಗಳ ತುಲಾಭಾರ, ಸ್ವಾಮೀಜಿಗಳ ಪೀಠಾರೋಹಣ ದೇವಸ್ಥಾನಗಳ ಜಾತ್ರಾಮಹೋತ್ಸವ ಕಾರ್ಯಕ್ರಮಗಳ ನೇರ ಪ್ರಸಾರ, ಇತ್ಯಾದಿಗಳೊಂದಿಗೆ ಹಬ್ಬಗಳಲ್ಲಿ ವಿಶೇಷವಾಗಿ ಪುರೋಹಿತಶಾಹಿ ಆಚರಣೆಗಳನ್ನು ವೈಭವೀಕರಿಸಿ ತೋರಿಸಲಾಗುತ್ತಿದೆ.

ಇಂದು ಪುರೋಹಿತಶಾಹಿ ವರ್ಗವು ಜನ ನಡುವೆ ವ್ಯಾಪಕವಾಗಿ ಬೆಳೆಸುತ್ತಿರುವ ಮೂಢನಂಬಿಕೆಗೆ ಬೆಂಬಲವಾಗಿ ನಿಂತಿರುವುದು ಬೂರ್ಜ್ವಾ ರಾಜಕಾರಣಿಗಳ ಹಿಡಿತದಲ್ಲಿರುವ ಮಾಧ್ಯಮಲೋಕ. ಜ್ಯೋತಿಷದ ಮೂಲ ಬಂಡವಾಳ ಮೂಢನಂಬಿಕೆ.

▯ ರಾಕೇಶ್ ಮಾನ್ವ



ಕವಿತೆ

ಎಲ್ಲ ಮರೆತಿರುವಾಗ....

ಅಜ್ಜಾ,
ನಿಲ್ಲು
ಯಾಕಿಷ್ಟು ಧಾವಂತ?
ಮರೆತು ಹೋಯಿತೆ ಕಲ್ಲಿನಲಿ
ಕಡೆದಿಟ್ಟಿರುವುದ?

ಬೀಸುವ ಕಲ್ಲು,
ರುಬ್ಬುವ ಗುಂಡು, ಕುಟ್ಟುವ ಒರಳು....
ಎಲ್ಲಾದರೂ ಕಂಡಿರುವೆಯಾ?
ಚರಕ ನೂಲುವ ನಿನ್ನ
ಎತ್ತಿದ ಕೈ ಕೆಳಗೆ
ಪಕ್ಕೆ ಎಲುಬುಗಳ ಗುರುತಿಸದ
ಈ ಜನರ ನಡುವೆ
ಯಾವ ರಾಜ್ಯದ ಹುಡುಕುವೆ?
ಯಾವ ರಾಮನ ತಡಕುವೆ?

ಸಮುದ್ರದಂಚಿನ ಉಪ್ಪು,
ಆಡಿನ ಹಾಲು, ಕಡ್ಲೆ ಕಾಯಿ, ಖಾದಿ
ಟೊಪ್ಪಿ, ಎಲ್ಲಾ ತಮಾಷೆಯ ಮಾತು
ಹುಡುಕುವುದಾದರೆ ನಡೆ
ಗಲ್ಲಿ ಗಲ್ಲಿಗಳಲಿ ಮಚ್ಚು
ಕತ್ತಿ, ಕೋಲು, ಕೋವಿ, ನಾಡಬಾಂಬು.....
ಗೋಲಿಯಾಡುವ ಹುಡುಗರ ಕೈಯೊಳಗೆ

ಖುರಾನು, ಭಗವದ್ಗೀತೆ
ಯ ಮೇಲಾಣೆ ಪಠಿಸುತಿರುವರು
'ಜೆಹಾದ್ ಜೈಶ್ರೀರಾಮ್'

ಊರ ಮಾರಿಯ ಹಬ್ಬ
ಸಾಬರ ಅಲಾಯಿ ಕುಣಿತ
ಸಂತ ಕ್ರಿಸ್ತನ ಭಜನೆ
ನಡೆಯಲಾರವು ಯಾವೂ ಇರದೇ
ಗುಂಡು ತುಂಬಿದ ಬಂದೂಕು
ಖಾಕಿ ಪಡೆಯ ಕಾವಲು
ಮುರಿದ ಮನಸುಗಳ ನಡುವೆ
ಬಣ್ಣಗೆಟ್ಟಿವೆ ಬದುಕು
ಹಾರುತಿದೆ ಹದ್ದು ಸ್ವಚ್ಛಂದ
ನೀಲಿಯಾಕಾಶದಿ
ಹರಿದ ಗಾಳಿಪಟದ ಜೊತೆ
ಮೂಲೆಯಲ್ಲಿ ಕುಳಿತು ಶಾಂತಿ
ಮಂತ್ರ ಪಠಿಸುತ್ತಿರುವ
ಗೂರಲು ಕೆಮ್ಮಿನ ಮುದುಕನ
ಬಿಳಿಯ ಪಂಚೆಗೆ ತೂತುಗಳ ಚಿತ್ತಾರ!

ನೊಂದುಕೊಳ್ಳುವ ಮಾತೇಕೆ?
ನಿನ್ನ ನಿಟ್ಟುಸಿರು, ನಿರಾಸೆಯ ಮೌನ,
ಕರುಣೆಯ ಕಣ್ಣೀರು, ಉಪವಾಸ
ಸತ್ಯಾಗ್ರಹ.....
ಹೊಳೆಯೊಳಗೆ ಹುಣಸೆ ಹಣ್ಣು ತೊಳೆದಂತೆ
ಸುಮ್ಮನೆ ನಿಲ್ಲುವುದ ಕಲಿ
ಹಾರ ತುರಾಯಿಗಳ ನಡುವೆ
ಉಳಿದೀತು
ಇರುವ ಮಾನವಾದರು ಚೂರು

ಬೊಚ್ಚು ಬಾಯಿಯ ಅಗಲಿಸಿ
ನಕ್ಕು
ನೋವ ಮರೆ!

ವಿ.ಹರಿನಾಥ ಬಾಬು
ಸಿರುಗುಪ್ಪ

JANASHAKTHI KANNADA VARA PATRIKE: Printed by **G.N.NAGARAJ**, No 12. 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor : **S.Y.GURUSHANTH**

ಕಾಮ್ರೇಡ್ ಜಿ. ಎನ್. ನಾಗರಾಜ್